ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 24 ಜೂನ್ 8-14, 1998 ರೂ. 2.00

ಬಿ.ಜೆ.ಪಿ. ಸರಕಾರದ ನಿಜಕುರೂಪ ದರ್ಶನ ಮಾಡಿಸಿದ ಬಜೆಟ್

ಬಿ.ಜೆ.ಪಿ. ನೇತೃತ್ವದ ಸರಕಾರ ಮಂಡಿಸಿರುವ ಬಜೆಟ್ "ಸ್ವದೇಶಿ"ಯೂ ಅಲ್ಲ, ಬೆಳವಣಿಗೆಗೆ ಪ್ರೋತ್ಸಾಹ ನೀಡುವಂತದ್ದೂ ಅಲ್ಲ. ಬಹುರಾಷ್ಟ್ರೀಯ ಕಂಪನಿಗಳಿಗೆ ದೇಶದ ಅರ್ಥಿಕವನ್ನು ತೆರೆದು ಕೊಡುವುದು, ದೇಶದ ಸ್ವಾವಲಂಬನೆಯ ಅಡಿಗಲ್ಲಾದ ಸಾರ್ವಜನಿಕ ವಲಯವನ್ನು ಮುಚ್ಚಿ ಬಿಡುವುದು, ಸಟ್ಟಾಕೋರರಿಗೆ ಪ್ರೋತ್ಸಾಹ, ದುಡಿಯುವ ಜನಗಳ ಮೇಲೆ ಧಾಳಿ - ಬಿಜೆಪಿ ಸರಕಾರದ ಈ ನಿಜರೂಪ ದರ್ಶನವನ್ನು ಈ ಬಜೆಟ್ ಜನರಿಗೆ ನೀಡಿದೆ. ರಾಷ್ಟ್ರಾಂಧ ದುರಭಿಮಾನದ ಪ್ರದರ್ಶನದ ಹಿಂದೆ ತನ್ನ ಈ ನಿಜರೂಪವನ್ನು ಅಡಗಿಸಿಡಲು ಬಿಜೆಪಿ ಎಷ್ಟೇ ಪ್ರಯತ್ನಿಸಿದರೂ ಅದಕ್ಕಾಗಿಲ್ಲ ಎಂದು ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಈ ಬಜೆಟ್ ಸಂಪನ್ಮೂಲ ಸಂಗ್ರಹಿಸಲು ಪರೋಕ್ಷ ತೆರಿಗೆಗಳನ್ನು ಹೆಚ್ಚಿಸುವ ತಂತ್ರವನ್ನೇ ಅನುಸರಿಸಿ ಶ್ರೀಮಂತರನ್ನು ಮುಟ್ಟದೆ ದುಡಿಯುವ ಜನಗಳ ಮೇಲೆ ಇನ್ನಷ್ಟು ಹೊರೆ ಹಾಕಿದೆ. ವಿಮಾ ವಲಯವನ್ನು ಖಾಸಗಿಯವರಿಗೆ ತೆರೆಯಲು, ಸಾರ್ವಜನಿಕ ವಲಯದ ಇನ್ನಷ್ಟು ಖಾಸಗೀಕರಣದ ಮೂಲಕ ದೇಶದ ಸ್ವಾಲಂಬನೆಯನ್ನು ಬುಡ ಮೇಲು ಮಾಡಲು ಈ ಸರಕಾರ ಹೊರಟಿದೆ. ರೈಲ್ವೇ ದರಗಳ ಏರಿಕೆ, ಜೊತೆಗೆ ಪೆಟ್ರೋಲ್, ಅಂಚೆ ದರಗಳಲ್ಲಿ ಏರಿಕೆ ಭಾರತೀಯ ಜನಸಾಮಾನ್ಯರ ಜೀವನ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಲಿದೆ. ಅಷ್ಟೇ ಅಲ್ಲ, ಇದರಿಂದಾಗಿ ಆಂತರಿಕ ಬೇಡಿಕೆ ಇಳಿಮುಖಗೊಂಡು ಈಗಿನ ಆರ್ಥಿಕ ಸ್ಥಗಿತತೆ ಇನ್ನಷ್ಟು ಉಲ್ಬಣಗೊಳ್ಳುತ್ತದೆ ಎಂದು ಸಿ.ಪಿ.ಐ.(ಎಂ) ಎಚ್ಚರಿಸಿದೆ.

'ಸ್ವದೇಶಿ' ಎಲ್ಲಿದೆ ?

ವಿದೇಶಿ ಬಂಡವಾಳ ಮತ್ತು ದೇಶೀ ದೊಡ್ಡ ವ್ಯಾಪಾರಸ್ಥರ ಹಿತಾಸಕ್ತಿಗಳನ್ನು ಬೆಳೆಸುವ ಪ್ರಯತ್ನದಲ್ಲಿ ಹಣಕಾಸು ಮಂತ್ರಿ ಯಶವಂತ ಸಿನ್ಹಾರವರು ಮುಂದಿಟ್ಟ ಬಜೆಟ್ ಸಪ್ಪೆಯಾಗಿದೆ, ಬರಡಾಗಿದೆ ಮಾತ್ರವೇ ಅಲ್ಲ, ಅತ್ಯಂತ ಬಡ-ಜನ ವಿರೋಧಿಯೂ ಆಗಿದೆ. ಇಷ್ಟೇ ಅಲ್ಲ, ಸರಕಾರ ಎದುರಿಸುತ್ತಿರುವ ಮೂಲಭೂತ ಹಣಕಾಸು ಬಿಕ್ಕಟ್ಟನ್ನು ಅದು ಎದುರಿಸುವ ಸ್ಥಿತಿಯಲ್ಲಿಲ್ಲ. 1997-98 ಹಣಕಾಸು ದೃಷ್ಟಿಯಿಂದ ವಿನಾಶಕಾರಿ ವರ್ಷ. ಈ ವರ್ಷ ರೆವಿನ್ಯೂ ಕೊರತೆ ಒಟ್ಟು ರಾಷ್ಟ್ರೀಯ ಆಂತರಿಕ ಉತ್ಪನ್ನದ(ಜಿ.ಡಿ.ಪಿ.) ಶೇ. 3.1 ಇತ್ತು ; 1998-99ರ ಬಜೆಟ್‌ನಲ್ಲೂ ಸುಮಾರು ಅದೇ ಮಟ್ಟದಲ್ಲಿ ಇರುತ್ತದೆ. ಏಕೆಂದರೆ ನೇರ ತೆರಿಗೆಗಳ ಮೂಲಕ ಇನ್ನಷ್ಟು ಸಂಪನ್ಮೂಲಗಳನ್ನು ಸಂಗ್ರಹಿಸುವ ಯಾವುದೇ ಪ್ರಯತ್ನ ನಡೆಸಿಲ್ಲ. ನಿಜವಾಗಿ ನೇರ ತೆರಿಗೆ-ಪರೋಕ್ಷ ತೆರಿಗೆಯ ಅನುಪಾತದಲ್ಲಿ ಪರೋಕ್ಷ ತೆರಿಗೆಯ ಪಾಲೇ ಹೆಚ್ಚಿದೆ, ಅಂದರೆ ಇದು ಶ್ರೀಮಂತರಿಂದ ಪಡೆಯುವ ಬದಲು ಬಡವರನ್ನೇ ಹಿಂಡುತ್ತದೆ. ಪರೋಕ್ಷ ತೆರಿಗೆಗಳಲ್ಲೂ ಆಮದು-ಸುಂಕಕ್ಕಿಂತ ಅಬಕಾರಿ ಸುಂಕದ ಹೆಚ್ಚಿನ ವಸೂಲಿಗೆ ಪ್ರಯತ್ನಿಸಲಾಗಿದೆ ಎಂಬುದರತ್ತ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಗಮನ ಸೆಳೆದಿದೆ.

ಇದು ಆಶ್ಚರ್ಯಕರ. ಏಕೆಂದರೆ ಇತ್ತೀಚಿಗೆ ಹೊಸ ಆಮದು-ರಫ್ತು ನೀತಿ 340 ಸರಕುಗಳ ಮೇಲಿನ ಹತೋಟಿಗಳನ್ನು ತೆಗೆದು ಬಹಿರಂಗ ಲೈಸೆನ್ಸಿನ (OGL) ಪಟ್ಟಿಗೆ ಸೇರಿಸಿತ್ತು. ಆಗ ಸರಕಾರ ಸೂಕ್ತ ಆಮದು ದರಗಳ ಮೂಲಕ ದೇಶೀ ಉತ್ಪಾದಕರ ಹಿತಾಸಕ್ತಿಗಳನ್ನು ರಕ್ಷಿಸಲಾಗುವುದು ಎಂದು ಸ್ಪಷ್ಟಪಡಿಸಿತ್ತು. ಆದರೆ ಈಗ ಆ ಭರವಸೆಯನ್ನು ಈಡೇರಿಸಿಲ್ಲ, ಮಾತ್ರವಲ್ಲ, ಅಬಕಾರಿ ಸುಂಕಗಳನ್ನು ಇನ್ನಷ್ಟು ತೀವ್ರವಾಗಿ ಏರಿಸಿ ದೇಶೀ ಉತ್ಪಾದಕರಿಗೆ ತೊಂದರೆಯುಂಟು ಮಾಡಿದೆ. ಪೆಟ್ರೋಲಿನ ಮೇಲಿನ ಅಬಕಾರಿ ಸುಂಕದ ಹೆಚ್ಚಳ ನೇರವಾಗಿ ಉತ್ಪಾದನಾ ಖರ್ಚನ್ನು ಹೆಚ್ಚಿಸಿ ಭಾರತದ ಸ್ಥಗಿತಗೊಂಡಿರುವ ರಫ್ತಿನ ಉತ್ಪಾದಕರ ಸ್ಪರ್ಧಾತ್ಮಕತೆಯನ್ನು ಕಮ್ಮಿ ಮಾಡಿ ವಿನಾಶಕಾರಿ ಪರಿಣಾಮ ಬೀರಲಿದೆ - ವಿಶೇಷವಾಗಿ ದಕ್ಷಿಣ ಏಶ್ಯಾದ ಬಿಕ್ಕಟ್ಟು ಹಾಗೂ ಪರಮಾಣು ಸ್ಫೋಟದ ನಂತರದ ದಿಗ್ಬಂಧನಗಳಿಂದ ಉಂಟಾಗಿರುವ ವಿನಿಮಯ ದರಗಳಲ್ಲಿನ ಅಸ್ಥಿರತೆಯ ಹಿನ್ನೆಲೆಯಲ್ಲಿ. ಹೀಗೆ ಸರಕಾರ ಬಡಜನರನ್ನು ನೇರವಾಗಿ ತಟ್ಟುವ ಸುಂಕಗಳನ್ನು ಹೆಚ್ಚಿಸುವ ಮೂಲಕ ಅವರ ಜೀವನ ಮಟ್ಟದ ಮೇಲೆ ಧಾಳಿ ಮಾಡಿದೆಯಷ್ಟೇ ಅಲ್ಲ, 'ಸ್ವದೇಶಿ' ಮಾತನ್ನು ಕೈಬಿಟ್ಟಿದೆ ಎಂದು ಸಿ.ಪಿ.ಐ.(ಎಂ) ಆಪಾದಿಸಿದೆ.

ಸಾರ್ವಜನಿಕ ಆಸ್ತಿ ಖಾಸಗಿಯವರಿಗೆ! ಖಾಸಗಿಯವರ ಸಾಲ ಮನ್ನಾ !!

ಶ್ರೀಮಂತ-ಪರ ಪಕ್ಷಪಾತಕ್ಕೆ, ಅನುಗುಣವಾಗಿ ಹಣಕಾಸು ಮಂತ್ರಿಗಳು ಒಂದೆಡೆ ಸಾರ್ವಜನಿಕ ವಲಯದ ಪ್ರಧಾನ ಆಸ್ತಿ ಪಾಸ್ತಿಗಳನ್ನು ಖಾಸಗಿಯವರಿಗೆ ವಹಿಸಲು ಕ್ರಮ ಕೈಗೊಂಡಿದ್ದಾರೆ. ಇನ್ನೊಂದೆಡೆ ದೊಡ್ಡ ವ್ಯಾಪಾರಸ್ಥರ ಸಾಲ ಬಾಕಿಯನ್ನು ವಹಿಸಿಕೊಳ್ಳುವ ಕ್ರಮಗಳನ್ನು ಕೈಗೊಂಡಿದ್ದಾರೆ ಎಂದು ಸಿ.ಪಿ.ಐ.(ಎಂ) ಬಲವಾಗಿ ಟೀಕಿಸಿದೆ.

ಸಾರ್ವಜನಿಕ ವಲಯದ ಆಸ್ತಿಗಳನ್ನು ಮಾರುವ ಪ್ರಕ್ರಿಯೆಯನ್ನು ಮುಂದುವರೆಸುವುದರೊಂದಿಗೆ (ಈಗ ಒಟ್ಟು ಶೇರು ಮೊತ್ತದ ಶೇ. 74 ವರೆಗೂ) ಸರಕಾರ ಎರಡು ಪ್ರಧಾನ ನಿರ್ಣಯಗಳನ್ನು ಕೈಗೊಂಡಿದೆ. ಮೊದಲನೆಯದಾಗಿ, ಇಂಡಿಯನ್ ಏರ್‌ಲೈನ್ಸಿನ ಶೇ. 51 ಶೇರುಗಳನ್ನು ಮಾರಿ ಈ ಅತ್ಯಂತ ಯಶಸ್ವಿ ಆಂತರಿಕ ವಿಮಾನಯಾನ ಕಂಪನಿಯನ್ನು ಖಾಸಗಿಯವರಿಗೆ ವಹಿಸಿಕೊಡಲಾಗುವುದು. ಎರಡನೇಯದಾಗಿ ಈ ಸರಕಾರ ವಿಮಾ ವಲಯವನ್ನು 'ದೇಶೀ' ಖಾಸಗಿ ಕಂಪನಿಗಳಿಗೆ ತೆರೆಯಲು ನಿರ್ಧರಿಸಿದೆ. ಈ ದೇಶೀ ಖಾಸಗಿ ಕಂಪನಿಯೆಂದರೆ ಏನು ಎಂದು ಮಾತ್ರ ನಿರ್ದಿಷ್ಟ ಪಡಿಸಿಲ್ಲ. ದೇಶೀ ಖಾಸಗಿ ವಲಯ, ಪ್ರಮುಖ ಸಾರ್ವಜನಿಕ ಆಸ್ತಿಗಳನ್ನು ಪಡೆಯಲು ಅವಕಾಶ ನೀಡಿರುವ ಸರಕಾರ ಬ್ಯಾಂಕುಗಳ 'ಕಾರ್ಯಶೀಲವಲ್ಲದ" ಆಸ್ತಿಗಳನ್ನು (ಅಂದರೆ ವಾಸ್ತವವಾಗಿ ದೊಡ್ಡ ವ್ಯಾಪಾರಸ್ಥರು ಬಾಕಿ ಮಾಡಿರುವ ಸಾಲಗಳಿವು) ಸರಕಾರದ ಗ್ಯಾರಂಟಿ ಇರುವ ಹೊಸದೊಂದು ಸಂಸ್ಥೆಗೆ ವರ್ಗಾಯಿಸಲಾಗುವುದು. ಈ ಸಂಸ್ಥೆ ಇವನ್ನು ಸೆಕ್ಯೂರಿಟಿಗಳಾಗಿ ಮಾಡಿ ಈ ಸಾಲಗಳನ್ನು ಮಾರಲಿದೆ. ಹೀಗೆ ಮಾರುವ ಬೆಲೆ ಸಾಲದ ಮೂಲ ಬೆಲೆಗಿಂತ ಕಮ್ಮಿ ಇರುವುದರಿಂದ ವಾಸ್ತವವಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳು ದೊಡ್ಡ ವ್ಯಾಪಾರಸ್ಥರಿಗೆ ನೀಡಿದ ಸಾಲದ ಒಂದು ಭಾಗವನ್ನು ಮನ್ನಾ ಮಾಡಿದಂತಾಗುತ್ತದೆ ಎಂಬ ಸಂಗತಿಯತ್ತ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಗಮನ ಸೆಳೆದಿದೆ.

ದುಡಿಯುವ ಜನಗಳ ಮೇಲೆ ಧಾಳಿ

ಬಿಜೆಪಿಯ ಈ ನಿಲುವಿಗನುಗುಣವಾಗಿಯೇ ಸರಕಾರ ಸಾರ್ವಜನಿಕ ವಲಯದ ಆಸ್ತಿಗಳಿಂದ ಶ್ರಮಶಕ್ತಿಯನ್ನು 'ಪ್ರತ್ಯೇಕಿಸುವ' ನಿರ್ಣಯವನ್ನು ಕೈಗೊಂಡಿದೆ. ಅಂದರೆ ಕಾರ್ಮಿಕರನ್ನು ಹೊರಕಳಿಸಲು ಒಂದು ಪ್ರತ್ಯೇಕ "ಸುವರ್ಣ ಹಸ್ತಲಾಘವ"ಕ್ಕೆ ಯೋಜನೆಗೆ ಹಣ ಒದಗಿಸಿ ಉಳಿದ ಆಸ್ತಿಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ಯೋಜನೆ ಈ ಸರಕಾರದ್ದು. ಈ ಹಿಂದೆ ಪ್ರಕಟಿಸಿದ ನಗರ ಭೂಮಿತಿ ಶಾಸನದ ರದ್ಧತಿಯೊಂದಿಗೆ ಈ ನಿರ್ಣಯವನ್ನು ಕೈಗೊಂಡಿರುವ ಅರ್ಥವೆಂದರೆ ಉದ್ಯೋಗಾವಕಾಶಗಳ ನಾಶ, ಉತ್ಪಾದಕ ಚಟುವಟಿಕೆಗಳ ಸ್ಥಗಿತತೆ ಮತ್ತು ಜಮೀನು ಮತ್ತಿತರ ಆಸ್ತಿಗಳ ಮಾರಾಟದಲ್ಲಿ ಸಟ್ಟಾಕೋರತನಕ್ಕೆ ಪ್ರೋತ್ಸಾಹ.

ಹೀಗೆ ಹಣಕಾಸು ಸಂಗ್ರಹಿಸಲು ಹಣದುಬ್ಬರಕಾರೀ ಕ್ರಮಗಳನ್ನು ಅನುಸರಿಸಿದರೂ, ಬೆಲೆ ಬಾಳುವ ಸಾರ್ವಜನಿಕ ಆಸ್ತಿಗಳನ್ನು ಮಾರಿದರೂ ಕೇಂದ್ರ ಬಜೆಟ್ ಮೊತ್ತದಲ್ಲಿ ಅಲ್ಲ ಹೆಚ್ಚಳವನ್ನು ತುಂಬಲು ಮಾರುಕಟ್ಟೆಯಿಂದ ಸಾಲ ತರಬೇಕಾಗಿದೆಯಷ್ಟೇ ಅಲ್ಲ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಯೋಜನೆಗಳಿಗೆ ನೀಡಬೇಕಾದ ನೆರವಿನಲ್ಲಿ ಹೆಚ್ಚಳ ತರಲು ಆದಕ್ಕಾಗಿಲ್ಲ. ಈ ನೆರವು ಶೇ. 9 ರಷ್ಟು ಹೆಚ್ಚುತ್ತದೆ ಎಂದು ಹೇಳಲಾಗಿದೆಯಾದರೂ ಹಣದುಬ್ಬರವನ್ನು ಲೆಕ್ಕಕ್ಕೆ ತಗೊಂಡರೆ ಈ ನೆರವು ಮೊತ್ತ ಸ್ಥಗಿತಗೊಂಡಿದೆಯೆಂದು ಹೇಳಬಹುದಷ್ಟೇ ಎಂದು ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಜನ ವಿರೋಧಿ ಬಜೆಟ್
ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಖಂಡನೆ

ಬಿ.ಜೆ.ಪಿ. ನೇತೃತ್ವದ ಸರಕಾರವು ಲೋಕಸಭೆಯಲ್ಲಿ ಮಂಡಿಸಿದ ಬಜೆಟ್ ಬಡ, ಮಧ್ಯಮ ಮತ್ತು ದುಡಿಯುವ ಜನತೆಯ ಮೇಲೆ ಹೆಚ್ಚಿನ ಹೊರೆಯನ್ನು ಹೇರಿದೆ. ಪರೋಕ್ಷ ತೆರಿಗೆಗಳ ಮೂಲಕ ಆದಾಯವನ್ನು ಸಂಗ್ರಹಿಸಲು ನಿರ್ಧರಿಸಿದ ಕೇಂದ್ರ ಸರಕಾರದ ಬಜೆಟ್ ಸ್ವದೇಶಿ ಘೋಷಣೆಯಿಂದಲೂ ಆರ್ಥಿಕ ಬೆಳವಣಿಗೆಗೂ ಸಹಕಾರಿಯಾಗಿಲ್ಲ ಎಂದು ಸಿ.ಪಿ.ಐ(ಎಂ) ಕರ್ನಾಟಕ ರಾಜ್ಯ ಖಂಡಿಸಿದೆ.

ಮಧ್ಯಮ ವರ್ಗದ ನೌಕರರ ಕಣ್ಣಿಗೆ ಮಣ್ಣೆರೆಚಿದ ಬಿ.ಜೆ.ಪಿ. ಸರಕಾರವು ಆದಾಯ ತೆರಿಗೆಯಲ್ಲಿ ಅಲ್ಪ ರಿಯಾಯಿತಿ ಯನ್ನು ತೋರಿಸಿ ಲೀಟರಿಗೆ ರೂ. ೪-೫೦ ಪೆಟ್ರೋಲ್ ದರ ಹೆಚ್ಚಿಸುವ ಮೂಲಕ ಕೊಡಲಿ ಪೆಟ್ಟು ನೀಡಿದೆ. ಪೆಟ್ರೋಲ್ ಬೆಲೆಯೇರಿಕೆಯಿಂದಾಗಿ ಔಷಧ, ಸಾರಿಗೆ ಮತ್ತಿತರ ವಸ್ತುಗಳ ಬೆಲೆಗಳಲ್ಲಿ ತೀವ್ರ ಹೆಚ್ಚಳ ಉಂಟಾಗುತ್ತದೆ. ಸಾರ್ವಜನಿಕ ಉದ್ದಿಮೆಗಳ ಶೇರುಗಳನ್ನು ಖಾಸಗಿಯವರಿಗೆ ವಿತರಿಸುವುದರಿಂದಾಗಿ (ಶೇ. ೭೪ ರಷ್ಟು) ಮಹತ್ವದ ಇಂಡಿಯನ್ ಏರ್‌ಲೈನ್ಸ್ ಮತ್ತು ವಿಮಾ ಉದ್ದಿಮೆಯನ್ನು ಅಗ್ಗದ ದರದಲ್ಲಿ ಖಾಸಗಿಯವರಿಗೆ ನೀಡುವ ಹುನ್ನಾರ ನಡೆಯುತ್ತಿದೆ. ರೋಗಗ್ರಸ್ತ ಖಾಸಗಿ ಕಾರ್ಖಾನೆಗಳನ್ನು ಮುಚ್ಚುವ ನೆಪದಲ್ಲಿ ಲಕ್ಷಾಂತರ ಕಾರ್ಮಿಕರು ಬೀದಿ ಪಾಲಾಗಲಿದ್ದಾರೆ.

ಇಂತಹ ಜನವಿರೋಧಿ ಬಜೆಟನ್ನು ವಿರೋಧಿಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಪಕ್ಷದ ಎಲ್ಲಾ ಘಟಕಗಳಿಗೂ ಹಾಗೂ ನಾಡಿನ ಜನತೆಯಲ್ಲಿ ಮನವಿ ಮಾಡಿದೆ.

ಇತ್ತೀಚೆಗೆ ಬಾಂಬು ಸ್ಫೋಟದಿಂದ ಉದ್ಭವಿಸಿದ ಆರ್ಥಿಕ ದಿಗ್ಬಂದನವನ್ನು ಹೇಗೆ ಎದುರಿಸುವುದೆಂದು ಬಜೆಟ್‌ನಲ್ಲಿ ಯಾವುದೇ ಉಲ್ಲೇಖ ಇಲ್ಲ, ಅಂದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ಹೊರೆಗಳು ಜನತೆಯ ಮೇಲೆ ಬೀಳಲಿವೆ. ಒಟ್ಟಾರೆಯಾಗಿ ಬಿ.ಜೆ.ಪಿ. ನೇತೃತ್ವದ ಕೇಂದ್ರ ಸರಕಾರದ ಬಜೆಟ್ ಶ್ರೀಮಂತರ ಪರವಾಗಿದ್ದು ಜನಸಾಮಾನ್ಯರ ವಿರೋಧಿಯಾಗಿದೆ ಎಂದು ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಹೇಳಿದೆ.

ಜೂನ್ 15ರಂದು ಪ್ರತಿಭಟನಾ ಕಾರ್ಯಾಚರಣೆಗೆ ಎಡಪಕ್ಷಗಳ ಕರೆ

ಬಿ.ಜೆ.ಪಿ. ನೇತೃತ್ವದ ಸರಕಾರದ ಮೊದಲ ಬಜೆಟ್ ಜನಗಳ ಜೀವನ ಪರಿಸ್ಥಿತಿಗಳ ಮೇಲೆ ಒಂದು ತೀವ್ರ ಹಲ್ಲೆಯೇ ಆಗಿದೆ. ಇದು ದೊಡ್ಡ ವ್ಯಾಪಾರಸ್ಥರ ಲಾಭ ಹೆಚ್ಚಿಸಲೆಂದು, ಸಾರ್ವಜನಿಕ ವಲಯವನ್ನು ಧ್ವಂಸ ಮಾಡಲೆಂದು ತಯಾರಿಸಿರುವ ಬಜೆಟ್ ಎಂದು ಟೀಕಿಸಿರುವ ಎಡಪಕ್ಷಗಳು ಇದರ ವಿರುದ್ಧ ದೇಶಾದ್ಯಂತ ಜೂನ್ 15ರಂದು ಪ್ರತಿಭಟನಾ ಕಾರ್ಯಾಚರಣೆ ನಡೆಸಲು ಕರೆ ನೀಡಿವೆ.


ಬಿ.ಜೆ.ಪಿ. ಸರಕಾರ ಸಾರ್ವಜನಿಕ ಆಸ್ತಿಗಳನ್ನು ಬೇಕಾಬಿಟ್ಟಿಯಾಗಿ ಖಾಸಗೀಕರಿಸಲು ನಿಧರಿಸಿದೆ. ಇದು ಸ್ವಾವಲಂಬನೆಯನ್ನು ಬುಡಮೇಲ ಮಾಡುವುದು, ದೇಶದ ಹಿತಾಸಕ್ತಿಗಳಿಗೆ ಅನುಗುಣವಾದದ್ದಲ್ಲ, ದೇಶ ಆಗಲೇ ನಿರ್ಬಂಧಗಳನ್ನು ಎದುರಿಸುತ್ತಿರುವಾಗ ಆರ್ಥಿಕ ಸಂಕಷ್ಟಗಳನ್ನು ಮತ್ತಷ್ಟು ಹೆಚ್ಚಿಸುವ ಬಜೆಟ್ ಇದು ಎಂದು ಎಡ ಪಕ್ಷಗಳು ಟೀಕಿಸಿವೆ.

ಪೆಟ್ರೋಲ್ ಬೆಲೆಗಳಲ್ಲಿ, ಅಂಚೆ ಮತ್ತು ರೈಲ್ವೇ ದರಗಳಲ್ಲಿ ತೀವ್ರ ಹೆಚ್ಚಳವನ್ನು ಖಂಡಿಸಿರುವ ಎಡಪಕ್ಷಗಳು ಯೂರಿಯಾ ಬೆಲೆಗಳಲ್ಲಿ ಚೀಲಕ್ಕೆ 25 ರೂ. ಹೆಚ್ಚಳ ರೈತರ ಮೇಲೆ ಒಂದು ದೊಡ್ಡ ಹೊರೆ ಎಂದು ಖಂಡಿಸಿವೆ. (ಪ್ರತಿಪಕ್ಷಗಳ ಭಾರೀ ಟೀಕೆಗೆ ಜನಗಳ ಪ್ರತಿಭಟನೆಗಳಿಗೆ ತಲೆಬಾಗಲೇ ಬೇಕಾಗಿ ಬಂದ ಸರಕಾರ ಪೆಟ್ರೋಲ್ ಮೇಲೆ ಅಬಕಾರಿ ಸುಂಕ ಹೆಚ್ಚಳವನ್ನು, ಯೂರಿಯಾ ಬೆಲೆ ಯೇರಿಕೆಯನ್ನು ಬಜೆಟ್ ಮೇಲೆ ಚರ್ಚೆ ಆರಂಭವಾಗುವ ಮೊದಲೇ ಹಿಂತೆಗೆದು ಕೊಳ್ಳಬೇಕಾಗಿ ಬಂದಿದೆ ಎಂದು ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ವರದಿಯಾಗಿದೆ). ಇವಲ್ಲದೆ ಹಲವು ಸರಕುಗಳ ಮೇಲೆ ಅಬಕಾರಿ ಸುಂಕದ ಏರಿಕೆ ಹಣದುಬ್ಬರಕ್ಕೆ ಕಾರಣವಾಗುತ್ತದೆ, ಇದು ಬೃಹತ್ ಪ್ರಮಾಣದ ಬೆಲೆಯೇರಿಕೆ ತರಲಿದೆ. ಜನ ಸಾರ್ವಜನಿಕ ಸಾರಿಗೆ, ಚಹಾ, ಆಹಾರ ಮತ್ತಿತರ ಅವಶ್ಯಕ ಸಾಮಗ್ರಿಗಳಿಗೆ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ ಎಂದು ಎಚ್ಚರಿಸುತ್ತಾ ಎಡಪಕ್ಷಗಳು ಈ ಬಜೆಟ್‌ನ ಪ್ರಸ್ತಾವಗಳು ಜ್ಯಾರಿಯಾದರೆ ಕಾರ್ಮಿಕ ವರ್ಗ ಭಯಂಕರ ಧಾಳಿಗೆ ಒಳಗಾಗುತ್ತದೆ ಎಂದಿವೆ.

ಅಗ್ಗದರದಲ್ಲಿ ಸಾರ್ವಜನಿಕ ವಲಯದ ಮಾರಾಟ, ಕಾರ್ಮಿಕರಿಗೆ ಅಲ್ಪ ಪರಿಹಾರ - ಇದು ಬಿ.ಜೆ.ಪಿ. ಸರಕಾರ ನೀಡಿರುವ ಸಂಕೇತ. ಆದರೆ ಈ ಎಲ್ಲಾ ನೀತಿಗಳನ್ನು ಎಡ ಪಕ್ಷಗಳು ದೃಢವಾಗಿ ವಿರೋಧಿಸುತ್ತವೆ ಎಂದಿರುವ ಸಿ.ಪಿ.ಐ.(ಎಂ), ಸಿ.ಪಿ.ಐ, ಆರ್.ಎಸ್.ಪಿ. ಹಾಗೂ ಫಾರ್ವರ್ಡ್ ಬ್ಲಾಕ್ ಮುಖಂಡರು ಈ ಕ್ರಮಗಳನ್ನು ಪ್ರತಿರೋಧಿಸುವ ಐಕ್ಯ ಕಾರ್ಮಿಕ ಆಂದೋಲನಕ್ಕೆ ತಾವು ಸಂಪೂರ್ಣ ಬೆಂಬಲ ನೀಡುವುದಾಗಿ ಹೇಳಿದ್ದಾರೆ. ○

ವಾರದ ವ್ಯಂಗ್ಯ ಚಿತ್ರ

'ದಿ ಹಿಂದು' ನಲ್ಲಿ ಸುರೇಂದ್ರನ್



ಬಾಂಬಿನ ನಂತರದ ಬಜೆಟ್



ಜಿ.ಎಸ್.ಮಣಿ

ಬಿಜೆಪಿ ನೇತೃತ್ವದ ಸರ್ಕಾರದ 1998-99 ರ ಬಜೆಟ್ಟನ್ನು ಜೂನ್ 1 ರಂದು ಹಣಕಾಸು ಮಂತ್ರಿ ಶ್ರೀ ಯಶವಂತ ಸಿನ್ಹಾ ಮಂಡಿಸಿದರು. ಸಾಮಾನ್ಯವಾಗಿ ಫೆಬ್ರವರಿ ತಿಂಗಳಲ್ಲಿ ಮಂಡನೆಯಾಗಬೇಕಾಗಿದ್ದ ಬಜೆಟ್ ಈ ಸಾರಿ ಲೋಕಸಭೆಯ ಚುನಾವಣೆಗಳಿಂದಾಗಿ ಮಂಡನೆಯಾಗಲಿಲ್ಲ. ಚುನಾವಣೆಯ ನಂತರ ಸರ್ಕಾರ ರಚಿಸಿದ ಬಿಜೆಪಿ ಮತ್ತು ಮಿತ್ರ-ಪಕ್ಷಗಳು ತಾತ್ಕಾಲಿಕ ವಾಗಿ ಲೇಖಾನುದಾನ ಪಡೆದವು. ಈಗ ಪೂರ್ಣ ಪ್ರಮಾಣದ ಬಜೆಟ್ ಮಂಡನೆಯಾಗಿದೆ.

ಈ ಪೂರ್ಣಪ್ರಮಾಣದ ಬಜೆಟ್ ಎಂತಹದ್ದು ಮತ್ತು ಯಾವ ರೀತಿಯ ಫಲಗಳನ್ನು ನಿರೀಕ್ಷಿಸಬಹುದು? ಯಾವ ವರ್ಗಗಳಿಗೆ ಈ ಬಜೆಟ್ ಲಾಭಕೊಡುತ್ತದೆ ಮತ್ತು ಯಾವ ವರ್ಗಗಳಿಗೆ ಹೊರೆ ಎಂಬುದು ವಿಶ್ಲೇಷಣೆಯಿಂದಲೇ ಗೊತ್ತಾಗಬೇಕು. ಬಿಜೆಪಿಯ ವಕ್ತಾರರು ಇದು ಅತ್ಯಂತ ಸಾಮರಸ್ಯದ ಬಜೆಟ್. ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಿದ ಪ್ರಗತಿಪರ ಬಜೆಟ್ ಎಂದು ಹೊಗಳಿದ್ದಾರೆ.

ಬಜೆಟ್ಟಿನ ಮುಖ್ಯ ಅಂಶಗಳನ್ನು ನೋಡೋಣ

1998-99ರ ಬಜೆಟ್ಟಿನ ಮುಖ್ಯಾಂಶಗಳು ಹೀಗಿವೆ

- ಹಿಂದೆಂದೂ ಇರದಷ್ಟು ತೆರಿಗೆ ಹೇರಿಕೆ.
- ತೆರಿಗೆ ಬಲೆಯ ವಿಸ್ತರಣೆ
- ಆಮದಿನ1/3 ರಷ್ಟರ ಮೇಲೆ ಶೇ 8 ರಷ್ಟು ಆಮದು ಸುಂಕ
- ಅಬಕಾರಿಯಿಂದ 5000 ಕೋಟಿ ರೂಪಾಯಿಗಳು
- ಆಮದು ಸುಂಕದಿಂದ 3304 ಕೋಟಿ ರೂಪಾಯಿಗಳ ಸಂಗ್ರಹಣೆ.
- ಕೃಷಿ ವಲಯಕ್ಕೆ ವಿಶೇಷ ಯೋಜನೆ
- ಶಕ್ತಿ, ಸಾಗಾಣಿಕೆ, ಸಂಪರ್ಕ ಮತ್ತು ವಿದ್ಯುತ್‌ಗಳ ಮೇಲೆ ಶೇ 35 ರಷ್ಟು ಹೆಚ್ಚು ತೆಗೆದಿರಿಸುವಿಕೆ.
- ಯೋಜನಾ ವೆಚ್ಚದಲ್ಲಿ ಶೇ 19 ರಷ್ಟು ಹೆಚ್ಚಳ
- ವಿಮಾ ವಲಯವನ್ನು ಭಾರತೀಯ ಕಂಪನಿಗಳಿಗೆ ತೆರೆಯಲಾಗಿದೆ.
- ಕಲ್ಲಿದ್ದಲು, ಲಿಗ್ನೈಟ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ನಿರ್ಲೈಸನ್ಸೀಕರಣ
- ಫೆರಾ ಕಾಯಿದೆಯನ್ನು ಫೆಮಾದಿಂದ ಬದಲಾಯಿಸುವುದು.
- ಖಾಸಗೀಕರಣ ಈಗ ಸರ್ಕಾರಿ ನೀತಿ
- ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳ ಶೇ 74 ರಷ್ಟು ಮಾರಾಟದಿಂದ 5000 ಕೋಟಿ ರೂಪಾಯಿಗಳ ಸಂಗ್ರಹಣೆ.
- ಇಂಡಿಯನ್ ಏರ್‌ಲೈನ್ಸ್‌ನ ಪುನರ್‌ರಚನೆ, ಸರ್ಕಾರಿ ಶೇರುಗಳನ್ನು 5 ವರ್ಷಗಳ ಅವಧಿಯಲ್ಲಿ ಶೇ 49 ಕ್ಕೆ ಇಳಿಸುವುದು.
- ಇಂಡಿಯನ್ ಆಯಿಲ್ ಕಾರ್ಪೋರೇಷನ್ (ಐಓಸಿ) ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್(ಗೇಲ್) ವಿದೇಶ ಸಂಚಾರ ನಿಗಮ ಲಿಮಿಟೆಡ್ (ವಿಎಸ್‌ಎನ್‌ಎಲ್) ಮತ್ತು ಕಾನ್‌ಕಾರ್‌ಗಳ ಶೇರುಗಳ ಮಾರಾಟ.
- ಇನ್ಸೂರೆನ್ಸ್ ರೆಗುಲೇಟರಿ ಅಥಾರಿಟಿಗೆ ಕಾನೂನುಬದ್ಧ ಸ್ಥಾನ.
- 5 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ವರಮಾನವಿರುವವರಿಗೆ ಸ್ಟಾಂಡರ್ಡ್ ಡಿಡಕ್ಷನ್ ಇಲ್ಲ.
- ಪ್ರತಿ ಲೀಟರ್ ಪೆಟ್ರೋಲಿಗೆ 1 ರೂಪಾಯಿಯಷ್ಟು ಹೆಚ್ಚುವರಿ ತೆರಿಗೆ
- ವಸತಿ, ಸಣ್ಣ ಕೈಗಾರಿಕೆ, ಅನಿವಾಸಿ ಭಾರತೀಯರು, ಹಣಕಾಸು ವಲಯ ಇತ್ಯಾದಿಗಳಿಗೆ ವಿಶೇಷ ಯೋಜನೆಗಳು, ಇತ್ಯಾದಿ.

ಹೀಗೆ ಬಜೆಟ್ಟಿನ ಮುಖ್ಯಾಂಶಗಳಿವೆ. ಇವುಗಳಲ್ಲಿ ಯಾವುವು ಜನಸಾಮಾನ್ಯರ ಪರವಾದ ಕ್ರಮಗಳು? ಈ ದೇಶದ ಜನಸಮಾನ್ಯರಿಗೆ ಏನು ಬೇಕು. ಸಮರ್ಥ ಸಾರ್ವಜನಿಕ ವಿತರಣಾ ವ್ಯವಸ್ಥೆ, ಆರೋಗ್ಯ, ಉದ್ಯೋಗದ ಹೆಚ್ಚಳ, ಕುಡಿಯುವ ನೀರು, ರಸ್ತೆ, ಪ್ರಾಥಮಿಕ ಶಿಕ್ಷಣ, ಇತ್ಯಾದಿಗಳೆಲ್ಲ ಜನಸಾಮಾನ್ಯರಿಗೆ ಆಸರೆ ನೀಡಬಹುದಾದ ಕ್ರಮಗಳು. ಆದರೆ ಬಜೆಟ್ಟಿನಲ್ಲಿ ಇವುಗಳ ಬಗ್ಗೆ ಹೆಚ್ಚಿನ ಉಲ್ಲೇಖವಿಲ್ಲ. ಬದಲಿಗೆ ಹಣವಿರುವವರಿಗೆ ಏನೆಲ್ಲ ಅನುಕೂಲ ಮಾಡಿಕೊಡಬಹುದು ಎಂಬ ಕಡೆ ಗಮನ ವಿರುವಂತಿದೆ. ಒಂದು ಲಕ್ಷ ರೂಪಾಯಿಗಳವರೆಗೆ ವಾರ್ಷಿಕ ವರಮಾನವಿರುವವರಿಗೆ ಆದಾಯ ತೆರಿಗೆ ರಿಯಾಯಿತಿಯನ್ನು ತೋರಿಸಲಾಗಿದೆ. ಆದರೆ 50 ಸಾವಿರ ರೂಪಾಯಿಗಳಿಗಿಂತ ಕಡಿಮೆ ಆದಾಯ ವಿರುವವರೇ ಹೆಚ್ಚಿರುವಾಗ ಅವರಿಗೆ ಲಾಭ ಸಿಗಬೇಕಾದರೆ ಅವರ ಜೀವನ ಮಟ್ಟ ಸುಧಾರಿಸಬೇಕಾದರೆ ಅವರ ಆದಾಯ ಹೆಚ್ಚುವಂತೆ ಮಾಡಬೇಕು ಅಥವಾ ಬೆಲೆಗಳು ಸ್ಥಿರವಾಗಿರಬೇಕು. ಬದಲಿಗೆ ಹಣದುಬ್ಬರವೂ ಇದೆ. ಇವರ ಆದಾಯವೂ ಹೆಚ್ಚುತ್ತಿಲ್ಲ.

ಹಾಗೇ ಈ ಬಜೆಟ್ಟಿನ ಬಗ್ಗೆ ಇರುವ ಟೀಕೆ ಇದು ಹೆಚ್ಚು ಹಣದುಬ್ಬರ ಉಂಟು ಮಾಡುವಂತಹದ್ದು ಎಂಬುದು. ಸಾರ್ವಜನಿಕ ವಲಯದ ಉದ್ದಿಮೆಗಳೆಂದರೆ ನಮ್ಮ ಆರ್ಥಿಕದ ಕಾಮಧೇನುಗಳು. ಹಲವು ಇತರೆ ಉದ್ದಿಮೆಗಳಿಗೆ ಅನುಕೂಲ ಮಾಡಿಕೊಡುವಂತಹವು. ಇವು ಲಕ್ಷ ಲಕ್ಷ ಜನರಿಗೆ ಉದ್ಯೋಗವನ್ನು ನೇರ ಯಾ ಪರೋಕ್ಷವಾಗಿ ಒದಗಿಸುವಂತಹವು. ಈಗ ಈ ಬಜೆಟ್ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟದಿಂದಲೇ ಹಣ ಮಾಡುವ ಹುನ್ನಾರ ಮಾಡಿದೆ.

ದೇಶದ ಸ್ವಾವಲಂಬನೆಗೆ ಬೆನ್ನೆಲುಬಾಗಿರುವ ಈ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಅತ್ಯುತ್ತಮವಾದವುಗಳ ಮಾರಾಟ ಮತ್ತು ರೋಗಗ್ರಸ್ತವಾಗಿರುವವುಗಳ ಮುಚ್ಚುವಿಕೆ ಇವು ಬಜೆಟ್ಟಿನ ಕ್ರಮಗಳು. ಸ್ವಾವಲಂಬನೆಗೆ ತೀವ್ರ ಹೊಡೆತ ನೀಡುವ ಈ ಕ್ರಮಗಳು ಯಾರ ಪ್ರಯೋಜನಕ್ಕೆ?

ಸಾರ್ವಜನಿಕ ವಲಯದ ಉದ್ಯೋಗಿಗಳು ಕೆಲಸ ಕಳೆದುಕೊಳ್ಳುತ್ತಾರೆ. ಕಾರ್ಮಿಕರು ಕೆಲಸ ಕಳೆದುಕೊಂಡರೆ ಅವರಿಗೆ ಪರಿಹಾರವೆಂದು ಒಂದು ಸಣ್ಣ ಮೊತ್ತವನ್ನು ನೀಡಿ ಕೈತೊಳೆದುಕೊಳ್ಳುವ ನೀತಿಯನ್ನು ಸರ್ಕಾರ ಉಚ್ಚರಿಸಿದೆ. ಯಾಕೆಂದರೆ ಕಾರ್ಮಿಕರೆಂದರೆ ಉತ್ಪಾದನೆಗೆ ಮತ್ತು ಆ ಮೂಲಕ ಲಾಭಕ್ಕೆ ಸಾಧನಗಳು. ಅವರು ಮನುಷ್ಯರು ಅವರ ಜೀವನಮಟ್ಟ ಸುಧಾರಿಸಬೇಕು. ಮತ್ತು ಆ ಮೂಲಕ ಇಡೀ ಮಾನವಕುಲದ ಹಿತ ಸಾಧನೆಯಾಗಬೇಕೆಂಬ ಕಾಳಜಿ ಸರ್ಕಾರಕ್ಕಿಲ್ಲ.


ಅಣು ಸಾಧನ ಪರೀಕ್ಷೆಯ ನಂತರದ ಬಜೆಟ್ಟಾದ್ದರಿಂದ ಅದರ ಛಾಯೆ ಈ ಬಜೆಟ್ಟಿನ ಮೇಲೆ ಬಿದ್ದಿದೆ. ರಕ್ಷಣಾ ವೆಚ್ಚದ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಅಣು ಸಂಶೋಧನೆಗೂ ಹೆಚ್ಚು ಹಣ ತೆಗೆದಿರಿಸಲಾಗಿದೆ. ಹೀಗೆ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಬಹುದಾದ ಹಣ ರಕ್ಷಣಾ ವೆಚ್ಚಕ್ಕೆ ಹೋಗುತ್ತದೆ. ಇದು ಬಿಜೆಪಿಯ ಸ್ವಯಂಕೃತ ಪರಿಸ್ಥಿತಿಯ ಪರಿಣಾಮ.

ಶೇ 8 ರಷ್ಟು ಆಮದು ಸುಂಕ ವಿಧಿಸುವ ಮೂಲಕ ದೇಶಿ ಉದ್ದಿಮೆಗಳಿಗೆ ರಕ್ಷಣೆಯ ಭ್ರಮೆಯನ್ನು ಬಜೆಟ್ ಮೂಡಿಸಿದೆ. ಆದರೆ ಬೇಡಿಕೆ ಕುಸಿದಿರುವಾಗ ಬೇಡಿಕೆಯನ್ನು ಹೆಚ್ಚಿಸುವ ಕ್ರಮಗಳ ಅವಶ್ಯಕತೆಯಿತ್ತು.

'ಎಕನಾಮಿಕ್ಸ್ ಟೈಂಸ್' ನಲ್ಲಿ ಪೊನ್ನಪ್ಪರವರ ವ್ಯಂಗ್ಯ
- ನಿವಾಸಿ ಭಾರತೀಯರ ಹೆಗಲೇರಿ ಅನಿವಾಸಿಗಳಿಗೆ ಭಕ್ಷೀಸು



ಜನಸಾಮಾನ್ಯರ ಜೇಬಿಗೆ ಹಣಕಾಸು ಮಂತ್ರಿಗಳ ಕೈ.
'ಇಂಡಿಯನ್ ಎಕ್ಸ್‌ಪ್ರಸ್'ನಲ್ಲಿ ಉನ್ನಿ



"ಸ್ವದೇಶಿಯೂ ಅಲ್ಲದ ಅಭಿವೃದ್ಧಿ-ಮುಖಿಯೂ ಅಲ್ಲದ ಬಜೆಟ್"

ಸೀತಾರಾಂ ಯೆಚೂರಿ

ಈ ಬಜೆಟ್ಟು ಸರ್ಕಾರಕ್ಕೆ ಸ್ಪಷ್ಟ ದೃಷ್ಟಿಕೋನವೂ ಇಲ್ಲ ಮತ್ತು ಆದ್ಯತೆಗಳೂ ಇಲ್ಲ ಎಂಬುದನ್ನು ಎತ್ತಿ ತೋರಿಸಿದೆ ಎಂದು ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ ಹೇಳಿದ್ದಾರೆ. ಅವರ ಪ್ರಕಾರ ಬಿಜೆಪಿ ಸರ್ಕಾರದ ಈ ಬಜೆಟ್ ಅತ್ತ ಸ್ವದೇಶಿಯೂ ಅಲ್ಲ, ಇತ್ತ ಅಭಿವೃದ್ಧಿ ಮುಖಿಯೂ ಅಲ್ಲ.

ಭಾರತದ ಆರ್ಥಿಕದ ಇಂದಿನ ಮುಖ್ಯ ಸಮಸ್ಯೆಯೆಂದರೆ ಹಿಂಜರಿತ. ಇದು ಬೇಡಿಕೆಯ ಕುಸಿತದಿಂದ ಉಂಟಾದದ್ದು. ಬಜೆಟ್ಟು ಬೇಡಿಕೆಯನ್ನು ಹೆಚ್ಚಿಸುವ ಪ್ರಯತ್ನ ಮಾಡಬೇಕಾಗಿತ್ತು. ಆದರೆ ಅಂತಹ ಪ್ರಯತ್ನವನ್ನೇ ಅದು ಮಾಡಿಲ್ಲ ಎಂದಿದ್ದಾರೆ ಅವರು.

ಬಜೆಟ್ಟಿನ ಬಹುತೇಕ ಆದಾಯ ಕಂದಾಯ ಸಂಗ್ರಹಣೆ ಮತ್ತು ಪರೋಕ್ಷ ತೆರಿಗೆಯ ಮೂಲಕ ಈ ಪರೋಕ್ಷ ತೆರಿಗೆಗಳು ಹೊರೆಯನ್ನು ಬಳಕೆದಾರರ ಹೆಗಲಿಗೆ ವರ್ಗಾಯಿಸುತ್ತದೆ. ನೇರ ತೆರಿಗೆ ಹೆಚ್ಚಿದ ಕಾರಣ ಶ್ರೀಮಂತರು ತೆರಿಗೆಯ ಹೊರೆಯಿಂದ ತಪ್ಪಿಸಿಕೊಂಡಿದ್ದಾರೆ. ಪರೋಕ್ಷ ತೆರಿಗೆಗಳಲ್ಲಿ ಅಬಕಾರಿ ತೆರಿಗೆಯದೇ ದೊಡ್ಡ ಪಾಲು. ಬಿಜೆಪಿ ಸರ್ಕಾರ ನಿಜವಾಗಿಯೂ ಸ್ವದೇಶಿಯಾಗಿದ್ದರೆ ಅದು ಆಮದು ಸುಂಕವನ್ನು ಹೆಚ್ಚಿಸಬಹುದಾಗಿತ್ತು. ಬದಲಿಗೆ ಕಂಪ್ಯೂಟರ್ ಸಾಫ್ಟ್‌ವೇರ್ ಇತ್ಯಾದಿಗಳ ಮೇಲೆ ಆಮದು ಸುಂಕವನ್ನು ಕಡಿಮೆ ಮಾಡಲಾಗಿದೆ.

ಅಬಕಾರಿ ಸುಂಕದೊಳಗೂ ಪೆಟ್ರೋಲಿನ ಮೇಲೆ ಹೇರಿರುವ ಸುಂಕದಿಂದ ಸಂಗ್ರಹವಾಗುವ ಮೊತ್ತವೇ ಅತಿದೊಡ್ಡದು. ಅಲ್ಲದೆ ಅಂಚೆದರದಲ್ಲಿ ಹೆಚ್ಚಳ ಮತ್ತು ರೈಲ್ವೆ ಪ್ರಯಾಣ ದರದ ಹೆಚ್ಚಳ ಎಲ್ಲವೂ ಜನ ಸಾಮಾನ್ಯರಿಗೆ ಹೊರೆ ಹೆಚ್ಚಿಸುವಂತಹವೇ. ಇದರಿಂದಾಗಿಯೇ ಆಂತರಿಕ ಬೇಡಿಕೆ ಕೆಳಮಟ್ಟದಲ್ಲೇ ಉಳಿದುಬಿಡುತ್ತದೆ ಎಂದಿದ್ದಾರೆ ಅವರು.

ಸ್ವಾವಲಂಬನೆಯನ್ನು ಬದಿಗೊತ್ತಿ ಹಣಕಾಸು ಮಂತ್ರಿಗಳು ಉತ್ತಮ ಸಾರ್ವಜನಿಕ ವಲಯದ ಉದ್ದಿಮೆಗಳ ಮಾರಾಟ ಮಾಡುತ್ತಿದ್ದಾರೆ. ಕಾರ್ಮಿಕರಿಗೆ 'ಪರಿಹಾರ ನೀಡಿ ಸಾರ್ವಜನಿಕ ವಲಯದ ಉದ್ದಿಮೆಗಳ ಆಸ್ತಿ ಮಾರಾಟ ಮಾಡುವುದು ಹಾಗೂ ನಗರ ಭೂಮಿತಿ ಕಾಯಿದೆಯನ್ನು ತೆಗೆದು ಹಾಕಿರುವುದು ದೊಡ್ಡ ಬಂಡವಾಳಿಗರಿಗೆ ಅನುಕೂಲಕರವಾಗುತ್ತದೆ ಎಂದಿದ್ದಾರೆ ಅವರು.

ಜನತೆಗೆ ಯಾವುದೇ ರೀತಿಯ ಪರಿಹಾರ ನೀಡದೇ ಹಣದುಬ್ಬರ ಹೆಚ್ಚಿಸುವ ಬಜೆಟ್ ಇದು. ಜನರ ಖರೀದಿ ಸಾಮರ್ಥ್ಯವನ್ನು ಕುಂಠಿತಗೊಳಿಸಿ ಆ ಮೂಲಕ ಬೇಡಿಕೆ ಹೆಚ್ಚದಂತೆ ತಡೆವ ಬಜೆಟ್ ಇದು ಎಂದಿದ್ದಾರೆ ಅವರು.

ಹೇಳಿದ್ದು ಮಾಡಿದ್ದು

ಬಿಜೆಪಿಯ ಚುನಾವಣಾ ಪ್ರಣಾಳಿಕೆಯ ಅಜೆಂಡಾ ಹೇಳಿದ್ದು ಮತ್ತು ಬಜೆಟ್ ಮಾಡಿದ್ದು ಹೀಗಿದೆ.

1998 ರ ಬಿಜೆಪಿ ಪ್ರಣಾಳಿಕೆ ಹೇಳಿದ್ದು	ರಾಷ್ಟ್ರೀಯ ಅಜೆಂಡಾ ಹೇಳಿದ್ದು	1998-99 ರ ಬಜೆಟ್ ಮಾಡಿದ್ದು
ಒಟ್ಟುತ್ಪಾದನೆಯ ಬೆಳವಣಿಗೆಯ ಗುರಿ ಶೇ 8-9	ಒಟ್ಟುತ್ಪಾದನೆಯ ಬೆಳವಣಿಗೆಯ ಗುರಿ ಶೇ 7-8	ಒಟ್ಟುತ್ಪಾದನೆ ಗುರಿ ಶೇ 6.5
ಯೋಜನೆಯ ಶೇ 60 ರಷ್ಟು ಹಣ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ	ಯೋಜನೆಯ ಶೇ 60 ರಷ್ಟು ಹಣ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ	ಶೇ 60 ಕ್ಕಿಂತ ಕಡಿಮೆ
ಬೆಳೆ ಮತ್ತು ಜಾನುವಾರು ವಿಮೆ ಎಲ್ಲ ರೈತರಿಗೆ	ಪರಿಣಾಮಕಾರಿ ಬೆಳೆ ವಿಮೆ ಯೋಜನೆ	24 ಜಿಲ್ಲೆಗಳಿಗೆ ಸೀಮಿತವಾದ ಬೆಳೆವಿಮೆ 100 ಕೋಟಿ ರೂಗಳ ವರೆಗೆ
ಹಂತಹಂತವಾಗಿ ಶಿಕ್ಷಣದ ಮೇಲಿನ ಸರ್ಕಾರಿ ಮತ್ತು ಸರ್ಕಾರೇತರ ಖರ್ಚು ಒಟ್ಟುತ್ಪಾದನೆಯ ಶೇ 6 ಕ್ಕೆ ಏರಿಸುವುದು	ಅದೇ	ಶೇ 50 ರಷ್ಟು ಹೆಚ್ಚಳ ಒಟ್ಟುತ್ಪಾದನೆಯಶೇ 6 ಕ್ಕೆ ಹಂತಹಂತವಾಗಿ ಏರಿಸುವ ಮಾತು
ಖಾಸಗಿ ವಲಯವನ್ನು ವಿಮೆಯಲ್ಲಿ ತೊಡಗಿಸುವುದು	ಏನೂ ಹೇಳಿಲ್ಲ	ವಿಮಾ ವಲಯವನ್ನು ಖಾಸಗಿ ಭಾರತೀಯ ಕಂಪನಿಗಳಿಗೆ ತೆರೆದಿದ್ದು.

ಆದಾಯ ತುಂಬಲು ಜನಸಾಮಾನ್ಯರ ಮೇಲೆ ರೈಲ್ವೆ ದರ ಏರಿಕೆ ಹೊರೆ: ಸಿಪಿಐ(ಎಂ) ಖಂಡನೆ

1998-99 ರ ಕೇಂದ್ರ ರೈಲ್ವೆ ಬಜೆಟ್ಟಿನಲ್ಲಿ ಪ್ರಯಾಣ ದರಗಳಲ್ಲಿ ವಿಪರೀತ ಏರಿಕೆ ಮಾಡಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಪ್ರಯಾಣ ದರಗಳಲ್ಲಿ ಏರಿಕೆಯಿಂದ 400 ಕೋಟಿ ರೂ. ವೆಚ್ಚದ ಆದಾಯ ಪಡೆಯುವ ನಿರೀಕ್ಷೆಯನ್ನು ಈ ಬಜೆಟ್ ಇಟ್ಟುಕೊಂಡಿದ್ದು ಇದರಲ್ಲಿ 350 ಕೋಟಿ ರೂ. ಹೊರೆಯನ್ನು ಸಾಮಾನ್ಯ, ಮೇಲ್ ಹಾಗೂ ಎಕ್ಸ್‌ಪ್ರಸ್ ರೈಲುಗಳ ಪ್ರಯಾಣಿಕರೇ ಹೊರಬೇಕಾಗಿದೆ. ಉಪನಗರೀಯ ರೈಲು ಪ್ರಯಾಣಿಕರಿಗೂ ಈ ಹೊರೆ ತಪ್ಪಿಲ್ಲ ಎಂದು ಪೊಲಿಟ್ ಬ್ಯೂರೋ ಪ್ರತಿಭಟಿಸಿದೆ.

ಸಾಗಾಣಿಕೆ ದರಗಳನ್ನು ಹೆಚ್ಚಿಸಿಲ್ಲ, ಆದರೆ ಆದಾಯ-ಖರ್ಚಿನ ಕೊರತೆಯನ್ನು ತುಂಬಲು ಸಂಪೂರ್ಣವಾಗಿ ಜನಸಾಮಾನ್ಯರ ಮೇಲೆಯೇ ಹೊರೆ ಹಾಕಲಾಗಿದೆ ಎಂದು ಪೊಲಿಟ್‌ಬ್ಯೂರೋ ಖಂಡಿಸಿದೆ.

ವಾರ್ಷಿಕ ಯೋಜನಾ ಖರ್ಚಿನಲ್ಲಿ ಗಮನಾರ್ಹ ಹೆಚ್ಚಳದ ಪ್ರಸ್ತಾಪವನ್ನು ಈ ಬಜೆಟ್ ಇಟ್ಟಿದೆ. ಈ ಬಾರಿ 9500 ಕೋಟಿ ರೂ. ಇರಿಸಿದ್ದು ಕಳೆದ ವರ್ಷಕ್ಕಿಂತ 120 ಕೋಟಿ ರೂ. ಜಾಸ್ತಿ. ಆದರೆ ಈ ಯೋಜನೆಗೆ ಸಂಪನ್ಮೂಲಗಳನ್ನು ಸಂಗ್ರಹಿಸುವಲ್ಲಿ 2900 ಕೋಟಿ ರೂ. ಮಾರುಕಟ್ಟೆ ಸಾಲಗಳಿಂದಲೇ ಬರಬೇಕೆಂಬ ಅಂಶವನ್ನು ನೋಡಿದರೆ ಈ ಗುರಿ ಈಡೇರುವಂತೆ ಕಾಣುವುದಿಲ್ಲ ಎಂದು ಸಿಪಿಐ(ಎಂ) ಸಂದೇಹ ವ್ಯಕ್ತಪಡಿಸಿದೆ.

ರೈಲ್ವೆ ವಿಸ್ತರಣೆಯನ್ನು ತರ್ಕಬದ್ಧಗೊಳಿಸಲು ರೈಲ್ವೇ ಮಂತ್ರಿಗಳು ಆರ್ಥಿಕವಾಗಿ ಸಮರ್ಥವಾದ ಯೋಜನೆಗಳಿಗೆ ಆದ್ಯತೆ ನೀಡುತ್ತಾರಂತೆ. ಇದೊಂದು ಸಂಕುಚಿತ ನಿಲುವು ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಇದು ಕಳೆದೆರಡು ವರ್ಷಗಳಲ್ಲಿ ಈಶಾನ್ಯ ಪ್ರದೇಶ ಹಾಗೂ ಇತರ ಹಿಂದುಳಿದ ಪ್ರದೇಶಗಳಲ್ಲಿ ರೈಲ್ವೇ ಅಭಿವೃದ್ಧಿಗೆ ನೀಡಿದ ಒತ್ತಿಗೆ ಅಪಾಯ ತಂದಿದೆ ಎಂದು ಖಂಡಿಸಿದೆ.

ಎಲ್ಲಾ ವಿಧದ ದ್ವಿತೀಯ ದರ್ಜೆಯ ರೈಲ್ವೇ ಪ್ರಯಾಣಕ್ಕೆ ವಿಧಿಸಿರುವ ದರ ಏರಿಕೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಪೊಲಿಟ್‌ಬ್ಯೂರೋ ಆಗ್ರಹ ಪಡಿಸಿದೆ. ಈ ಹೊಸ ಹೊರೆಯ ವಿರುದ್ಧ ಜನಗಳನ್ನು ಅಣಿನೆರೆಸಬೇಕು ಎಂದು ಅದು ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಕರ್ನಾಟಕದಲ್ಲಿ ಕಳೆದವಾರ

ಮೇ 29

➡ ಎಸ್.ಎಸ್.ಎಲ್.ಸಿ. ಪರೀಕ್ಷೆ 44.55% ತೇರ್ಗಡೆ. ಒಟ್ಟು 459145 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಬಾಲಕಿಯರ ತೇರ್ಗಡೆ ಪ್ರಮಾಣ 47.44% ಬಾಲಕರದ್ದು, 42.36%. ಪಟ್ಟಣ ಪ್ರದೇಶಗಳ ತೇರ್ಗಡೆ ಪ್ರಮಾಣ 50.36%, ಗ್ರಾಮಾಂತರ ಪ್ರದೇಶಗಳಲ್ಲಿ 39.54%.

➡ ರೈಲ್ವೆ ಬಜೆಟ್ಟಿಗೆ ರಾಜ್ಯಾದ್ಯಂತ ವಿರೋಧ. ಜನಸಾಮಾನ್ಯರ ಏಕೈಕ ಸುಲಭ ಸಂಪರ್ಕ ಸಾಧನವೂ ಕೈಗೆಟುಕದಂತಾಗಿದೆ ಎಂದು ಮುಖ್ಯಮಂತ್ರಿಗಳು

ಮೇ 30

➡ 14ನೇ ವಯಸ್ಸಿನವರೆಗೆ ಉಚಿತ ಶಿಕ್ಷಣ ಕೊಡಬೇಕೆಂಬ ಸಂವಿಧಾನದ ನಿರ್ದೇಶನದ ಪಾಲನೆಯ ದೃಷ್ಟಿಯಿಂದ ಖಾಸಗಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಶುಲ್ಕವನ್ನು ಸರ್ಕಾರ ಪೋಷಕರಿಗೆ ಅಥವಾ ಶಿಕ್ಷಣ ಸಂಸ್ಥೆ ತುಂಬಿ ಕೊಡಬೇಕು ಎಂದು ಹೈಕೋರ್ಟ್ ಆದೇಶ.

ಜೂನ್ 31

➡ ಭದ್ರಾವತಿ ಕಾಗದ ಕಾರ್ಖಾನೆ ಶಿವಮೊಗ್ಗ ತಾಲೂಕಿನ 20 ಸಾವಿರ ಹೆಕ್ಟೇರ್ ಅರಣ್ಯ ಭೂಮಿಯಲ್ಲಿನ ಮರ ಕಡಿಯುವಲ್ಲಿ ನಿಯಮಗಳ ಉಲ್ಲಂಘನೆಯಾಗಿದೆಯೇ ಎಂದು ಪರಿಶೀಲಿಸಿ ವರದಿ ಮಾಡಲು ಹೈಕೋರ್ಟ್‌ನಿಂದ ಕೋರ್ಟ್ ಕಮಿಷನರ್ ನೇಮಕ.

➡ ಆಗಸ್ಟ್ ಒಳಗೆ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಸಮವಸ್ತ್ರ ಒದಗಿಸುವುದಾಗಿ ಶಿಕ್ಷಣ ಸಚಿವರು.

ಜೂನ್ 2

➡ ಕೇಂದ್ರ ಬಜೆಟ್ ಪರಿಣಾಮವಾಗಿ ಬೆಂಗಳೂರು ನಗರದಲ್ಲಿ ಪೆಟ್ರೋಲ್ ಬೆಲೆಯೇರಿಕೆ ಲೀಟರಿಗೆ ರೂ.4.80 - ಗೊಂದಲ, ಪ್ರತಿಭಟನೆ.

➡ ದಿಗ್ಬಂಧನದಿಂದ ರಾಜ್ಯ ಅಭಿವೃದ್ಧಿ ಯೋಜನೆಗಳ ಮೇಲೆ ಪರಿಣಾಮವಿಲ್ಲ ಎಂದು ಮುಖ್ಯಮಂತ್ರಿಗಳು.

ಜೂನ್ 3

➡ ರಾಜ್ಯದಲ್ಲಿ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಉಪಚುನಾವಣೆ - ಶೇ 55 ಮತದಾನ. ಬೆಂಗಳೂರಿನ ಉತ್ತರಹಳ್ಳಿ ಕ್ಷೇತ್ರದಲ್ಲಿ ಅತಿಕಮ್ಮಿ - ಶೇ 30.

➡ ಬೆಂಗಳೂರು ನಗರದಲ್ಲಿ ಪೆಟ್ರೋಲ್ ಬೆಲೆ ಏರಿಕೆ ರೂ. 1.47 ಎಂದು ಪ್ರಕಟಣೆ.

ಜೂನ್ 4

➡ ಪರಿಸರದ ಉಗಮ ಹಾಗೂ ಇಂದಿನ ಪರಿಸ್ಥಿತಿಯನ್ನು ರೂಪಿಸುವ 1000 ಅಡಿಗಳ ಕಲಾಕೃತಿ ರಚಿಸುವ ಕಾರ್ಯ ಕಲಾವಿದ ಬಿ.ಕೆ.ಎಸ್. ವರ್ಮಾರಿಂದ ಬೆಂಗಳೂರಿನಲ್ಲಿ ಆರಂಭ.

ಬಿಜೆಪಿ ಸರಕಾರದ ರೈಲ್ವೆ ಬಜೆಟ್ - ಕರ್ನಾಟಕಕ್ಕೆ ನ್ಯಾಯ ಸಿಕ್ಕಿಲ್ಲ

ಎನ್.ಕೆ.ಉಪಾಧ್ಯಾಯ

ಬಿಜೆಪಿ ಸರಕಾರದ ಈ ವರ್ಷದ ರೈಲ್ವೆ ಬಜೆಟನ್ನು ರೈಲ್ವೆ ಮಂತ್ರಿಗಳಾದ ನಿತೀಶ್ ಕುಮಾರ್ ಅವರು ಲೋಕಸಭೆಯಲ್ಲಿ ಮಂಡಿಸಿ ಜನಸಾಮಾನ್ಯರ ಮೇಲೆ ಹೊಸ ಹೊರೆ ಹೇರಿದ್ದಾರೆ. ಜೂನ್ 20 ರಿಂದ ಜಾರಿಗೆ ಬರಲಿರುವ ಪ್ರಯಾಣ ದರ ಹೆಚ್ಚಳದಿಂದ ರೂ. 2611 ಕೋಟಿ ಆದಾಯ ಪಡೆಯುವ ನಿರೀಕ್ಷೆ ಹೊಂದಿದ್ದಾರೆ. ರೈಲ್ವೆ ಪ್ರಯಾಣದಲ್ಲಿ ಪ್ರಯಾಣಿಕರಿಗೆ ಯಾವುದೇ ಸೌಲಭ್ಯ ಒದಗಿಸದೆ, ಕುಡಿಯಲಿಕ್ಕೆ ನೀರೂ ಸಿಗದಂಥ ಪರಿಸ್ಥಿತಿಯಲ್ಲಿ ಬಿಜೆಪಿ ಸರಕಾರ ಪ್ರಯಾಣಕ್ಕೆ ರೈಲ್ವೆಯನ್ನೇ ಹೊಂದಿಕೊಂಡಿರುವ ದೇಶದ ಬಡ-ಮಧ್ಯಮ ವರ್ಗದ ಮೇಲೆ ಕೋಟ್ಯಾವಧಿ ರೂಪಾಯಿ ಹೊರೆ ಹೇರಿ ತಾನು ಬಡಜನರ ಪರವಾದ ಸರಕಾರವೆಂದು ಹೆಮ್ಮೆ ಕೊಚ್ಚಿ ಕೊಳ್ಳುತ್ತಿದೆ. ತಮ್ಮ ಬಂಧುಬಳಗದವರನ್ನು ಕಳುಹಿಸಲು ಬರುತ್ತಿರುವವರಿಗೆ ಪ್ಲಾಟ್ ಫಾರ್ಮ್ ಟಿಕೇಟ್ ದರವನ್ನು ರೂ. 2 ರಿಂದ ರೂ. 3.ಕ್ಕೆ ಏರಿಸಿದೆ. ಕಂಪ್ಯೂಟರಿನಲ್ಲಿ ಮುಂಗಡ ಟಿಕೆಟ್ ಕಾಯ್ದಿರಿಸುವ ಸೇವಾ ಶುಲ್ಕ ರೂ. 5ಕ್ಕೆ ಏರಿದೆ. ಸೂಪರ್‌ಫಾಸ್ಟ್ ರೈಲುಗಳಲ್ಲಿ ಪೂರಕ ಶುಲ್ಕದ ಪ್ರಮಾಣ ರೂ. 10 ರಿಂದ ರೂ 50 ಕ್ಕೇರಿದೆ. ಎರಡನೇ ದರ್ಜೆ ಸಾಮಾನ್ಯ ರೈಲು ಪ್ರಯಾಣ ದರವನ್ನು ರೂ. 5ರಿಂದ ರೂ 25. ಕ್ಕೆ ಏರಿಸಲಾಗಿದೆ. ಕಲ್ಲಿದ್ದಲು, ಆಹಾರ ಧಾನ್ಯಗಳಂತ ಸಾಗಾಣಿಕೆ ದರದಲ್ಲಿ ಹೆಚ್ಚಳ ಇಲ್ಲದಿದ್ದರೂ, ಕಬ್ಬಿಣದ ಅದಿರು, ಮರ, ಸೋಡಬೂದಿ, ಕಚ್ಚಾ ರಬ್ಬರ್ ದರಗಳನ್ನು ಹೆಚ್ಚಿಸಲಾಗಿದೆ. ಹವಾನಿಯಂತ್ರಿತ ಮತ್ತು ಪ್ರಥಮ ದರ್ಜೆ ಪ್ರಯಾಣ ದರ ಹೆಚ್ಚಿಸಿರು ವುದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಅದೇ ಸಮಯದಲ್ಲಿ ಬಡ ಮತ್ತು ಮಧ್ಯಮ ವರ್ಗದವರ ಪ್ರಯಾಣ ತುಟ್ಟಿ ಮಾಡಿರುವುದನ್ನು ಖಂಡಿಸುತ್ತೇವೆ.

1998-99 ನೇ ವರ್ಷದ ರೈಲ್ವೆಯ ಯೋಜನಾಗಾತ್ರವನ್ನು ರೂ. 9500 ಕೋಟಿಗಳಿಗೆ ನಿಗದಿ ಪಡಿಸಲಾಗಿದೆ. ಇದರಲ್ಲಿ ತಮಿಳುನಾಡಿಗೆ ಒಟ್ಟು ರೂ. 147 ಕೋಟಿ, ಮಹಾರಾಷ್ಟ್ರಕ್ಕೆ ರೂ. 174 ಕೋಟಿ, ಆಂಧ್ರ ಪ್ರದೇಶಕ್ಕೆ 155 ಕೋಟಿ ಈಶಾನ್ಯ ರಾಜ್ಯಗಳಿಗೆ ರೂ. 182 ಕೋಟಿ ಮೀಸಲಿಡಲಾಗಿದೆ. ಆದರೆ ಕರ್ನಾಟಕಕ್ಕೆ ವಿವಿಧ ಯೋಜನೆಗಳಿಗಾಗಿ ರೂ. 135 ಕೋಟಿ ಮಾತ್ರ ನೀಡಲಾಗಿದೆ. ಇದರಲ್ಲಿ ಹೊಸ ರೈಲು ಮಾರ್ಗಗಳಿಗಾಗಿ ರೂ. 35 ಕೋಟಿ, ಗೇಜ್ ಪರಿವರ್ತನೆಗೆ ರೂ. 7.5 ಕೋಟಿ, ಜೋಡಿ ಮಾರ್ಗ ನಿರ್ಮಾಣದ ಕಾಮಗಾರಿಗೆ ರೂ. 25 ಕೋಟಿ ನೀಡಲಾಗಿದೆ.

1947 ರಲ್ಲಿ ದೇಶ ಸ್ವಾತಂತ್ರ್ಯ ಗಳಿಸಿದ ನಂತರ ಕೇಂದ್ರದಲ್ಲಿ ಐದಾರು ಜನ ಕೆಂಗಲ್ ಹನುಮಂತಯ್ಯ, ಪೂಣಚ್ಚ, ಪಿ.ಎ.ಪೈ, ದಾಸಪ್ಪ, ಜಾಫರ್ ಶರೀಫ್ ಮೊದಲಾದವರೆಲ್ಲ ರೈಲ್ವೆ ಮಂತ್ರಿಗಳಾಗಿದ್ದರೂ ಕರ್ನಾಟಕದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಹೇಳಿಕೊಳ್ಳುವಂಥ ರೈಲ್ವೆ ಮಾರ್ಗಗಳ ವಿಸ್ತರಣೆ, ಗೇಜ್ ಪರಿವರ್ತನೆ, ಜೋಡಿ ಮಾರ್ಗ ರಚನೆ, ವಿದ್ಯುತ್ ರೈಲ್ವೆ ಮಾರ್ಗಗಳಂಥ ಕೆಲಸಗಳನ್ನೇನೂ ಮಾಡಲಿಲ್ಲ. ಜಾಫರ್‌ಶರೀಫ್ ಅವರು ಮಂತ್ರಿಯಾಗಿದ್ದಾಗ, ಬೆಂಗಳೂರು - ಮೈಸೂರು ಮಾರ್ಗದ ಗೇಜ್ ಪರಿವರ್ತನೆಯಾಯಿತಲ್ಲದೆ, ಜೋಡಿ ಮಾರ್ಗ ನಿರ್ಮಾಣವಾಗಲಿಲ್ಲ. ವಿದ್ಯುದೀಕರಣವೂ ಆಗಲಿಲ್ಲ. ಹುಬ್ಬಳ್ಳಿ-ಮೀರಜ್, ಹುಬ್ಬಳ್ಳಿ- ಹೊಸಪೇಟೆ ಮಾರ್ಗಗಳು ಮಾತ್ರ ಗೇಜ್ ಪರಿವರ್ತನೆ ಕಂಡವು. ಹೊಸ ಮಾರ್ಗಗಳಿಗೆ ಅಡಿಗಲ್ಲು ಹಾಕುವುದರಲ್ಲಿ ಮಾತ್ರ ಸಮಾಧಾನ ಕೊಳ್ಳಗಾಗಬೇಕಾಯಿತಲ್ಲದೆ, ಆ ಹೊಸ ಮಾರ್ಗಗಳ ಸರ್ವೆ ಕೂಡ ನಡೆಯಲಿಲ್ಲ. ಪಾಸ್ವಾನ್ ಅವರು ರೈಲ್ವೆ ಮಂತ್ರಿಯಾಗಿದ್ದಾಗ, ಮೈಸೂರು-ಹಾಸನ, ಹಾಸನ-ಅರಸಿಕೆರೆ ಗೇಜ್ ಪರಿವರ್ತನೆ ಪ್ರಾರಂಭಿಸಿದ್ದು ಅದೀಗ ಪೂರ್ಣ ಗೊಳ್ಳುತ್ತಿದೆ. ಆದರೆ ಬಹಳ ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಉತ್ತರ ಕರ್ನಾಟಕಕ್ಕೆ ಅತ್ಯವಶ್ಯವಾದ ಹುಬ್ಬಳ್ಳಿ-ಕಾರವಾರ, ಗುಲ್ಬರ್ಗ-ಬೀದರ್, ರಾಯಚೂರು- ಹೈದರಾಬಾದ್, ಶಿವಮೊಗ್ಗ-ಹೊನ್ನಾವರ ಮೊದಲಾದ ಹೊಸ ರೈಲ್ವೆ ಮಾರ್ಗಗಳ ಕುರಿತು ನೂತನ ರೈಲ್ವೆ ಮಂತ್ರಿ ಹೆಚ್ಚು ಗಮನ ಹರಿಸಿದಂತೆ ಕಂಡುಬರುವುದಿಲ್ಲ. ಅದೇ ರೀತಿ ಬಯ್ಯಪ್ಪನಹಳ್ಳಿ-ಯಶವಂತಪುರ, ಸೋಲಾಪುರ-ಗದಗ ಲೋಂಡಾ- ಮಾರ್ಗೋವಾ ಗೇಜ್ ಪರಿವರ್ತನೆ ಕಾರ್ಯಗಳಿಗೆ ಹೆಚ್ಚು ಗಮನ ಹರಿಸಿದಂತಿಲ್ಲ.

ಸಂಯುಕ್ತ ರಂಗ ಸರಕಾರದ ರೈಲ್ವೆ ಮಂತ್ರಿಗಳಾಗಿದ್ದ ರಾಮ್ ವಿಲಾಸ್ ಪಾಸ್ವಾನ್ ಅವರು ಘೋಷಿಸಿದ್ದ ಹಾಸನ-ಬೆಂಗಳೂರು, ಹುಬ್ಬಳ್ಳಿ-ಅಂಕೋಲ, ಬೆಂಗಳೂರು- ಸತ್ಯಮಂಗಲ, ಬೀದರ್-ಗುಲ್ಬರ್ಗ, ರಾಯಚೂರು-ಗದ್ವಾಲ್, ಮೈಸೂರು- ಚಾಮರಾಜನಗರ, ಮೆಟ್ಟುಪಾಳ್ಯ, ಹೊಸಪೇಟೆ-ಗುಂಟಕಲ್ ಹೊಸ ರೈಲು ಮಾರ್ಗಗಳಿಗೆ ಪ್ರಸ್ತುತ ಆಯವ್ಯಯದಲ್ಲಿ ಹಣ ಬಿಡುಗಡೆ ಮಾಡದೆ ನಿರ್ಲಕ್ಷಿಸಲಾಗಿದೆ.

ಕೊಂಕಣ ರೈಲ್ವೆ ಮಾರ್ಗದಲ್ಲಿ ರೈಲು ಚಲಿಸಲು ಪ್ರಾರಂಭಿಸಿರುವುದರಿಂದ ಆ ಮಾರ್ಗದಲ್ಲಿ ಇನ್ನೂ ಹಲವಾರು ರೈಲುಗಳನ್ನು ಓಡಿಸಲು ನಿರ್ಧರಿಸಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಬಹಳ ಪ್ರಯೋಜನವಾಗಲಿದೆ. ಆದರೆ ಇಡೀ ಕರ್ನಾಟಕ ರಾಜ್ಯದ ದೃಷ್ಟಿಯಿಂದ ನೋಡಿದ್ದಾದರೆ ಹೊಸ ರೈಲ್ವೆ ಬಜೆಟ್ಟನಿಂದ ಕರ್ನಾಟಕಕ್ಕೆ ಹೆಚ್ಚಿನ ಲಾಭವೇನಾಗಲಿಲ್ಲವೆಂದೇ ಹೇಳಬೇಕಾಗುತ್ತದೆ.

ಕರ್ನಾಟಕ ನೈಸರ್ಗಿಕ ಸಂಪನ್ಮೂಲಗಳ ನೆಲಬೀಡಾಗಿದೆ. ವಿಪುಲ ಅರಣ್ಯಸಂಪತ್ತನ್ನು ಹೊಂದಿದೆ. ಗಂಧದ ಮರ, ಬಣ್ಣಬಣ್ಣದ ಉತ್ತಮ ಪರ್ಸಿಕಲ್ಲುಗಳು, ವಿದೇಶಗಳಿಗೆ ಅಪಾರ ರವಾನೆಯಾಗುತ್ತಿವೆ. ಬಂಗಾರ, ತಾಮ್ರ, ಕಬ್ಬಿಣ, ಸುಣ್ಣ ತುಂಬಾ ನೆಲೆನಿಂತಿದೆ. ಅರಣ್ಯ ಮತ್ತು ಕೃಷಿ ಸಂಪತ್ತು ವಿದೇಶಗಳಲ್ಲಿ ಬಹಳ ಆಕರ್ಷಿತ ವಸ್ತುಗಳಾಗಿವೆ. ಇವುಗಳಿಗೆಲ್ಲ ಸುಲಭವಾದ ಸಾಗಾಣಿಕ ವ್ಯವಸ್ಥೆ ಅಗತ್ಯ. ಅದು ರೈಲ್ವೆ ಮೂಲಕ ಒದಗಿಸಿದ್ದಾದರೆ ಉತ್ತಮ. ಆ ಕಾರಣದಿಂದಲೇ ರಾಜ್ಯದ ರೈಲ್ವೆಗಳನ್ನು ವಿಸ್ತರಿಸಬೇಕು. ಒಂದೇ ಗೇಜಿನ ರೈಲು ಮಾರ್ಗವಾಗಿ ಪರಿವರ್ತಿಸಲ್ಪಡಬೇಕು. ಅದು ರಾಜ್ಯದ ಕೃಷಿ- ಕೈಗಾರಿಕೆಗಳ ಬೆಳವಣಿಗೆಗೆ ಪೂರಕವಾಗಿ ಬರುತ್ತದೆ. ತಮ್ಮ ಪ್ರದೇಶಗಳನ್ನು ನಿರ್ಲಕ್ಷಿಸಲಾಗುತ್ತಿದೆಂಬ ಕೂಗು ಮುಂಬಯಿ ಕರ್ನಾಟಕ- ಹೈದರಾಬಾದ ಕರ್ನಾಟಕಗಳಿಂದ ಕೇಳ ಬರುತ್ತಿದೆ. ಆ ಪ್ರದೇಶಗಳ ಅಭಿವೃದ್ಧಿಗೆ ಹುಬ್ಬಳ್ಳಿ-ಕಾರವಾರ, ಗುಲ್ಬರ್ಗ-ಬಿದರ್, ರಾಯಚೂರು- ಹೈದರಾಬಾದ್, ಶಿವಮೊಗ್ಗ-ಹೊನ್ನಾವರ, ಸಾಗರ-ಭಟ್ಕಳ ರೈಲ್ವೆ ಮಾರ್ಗಗಳ ಅವಶ್ಯಕತೆ ಇದೆ. ಹಾಗೆಯೇ ಬೆಂಗಳೂರು ಮೈಸೂರಿಗೆ ಜೋಡಿ ಮಾರ್ಗ ಮಾತ್ರವಲ್ಲ, ವಿದ್ಯುದೀಕೃತ ರೈಲ್ವೆ ಮಾರ್ಗಕೂಡ ಅತ್ಯಗತ್ಯ. ಇವುಗಳನ್ನೆಲ್ಲಾ ಕಡೆಗಣಿಸಿರುವ ಬಿಜೆಪಿ ಸರಕಾರವನ್ನು ಖಂಡಿಸಲೇಬೇಕು. ಕರ್ನಾಟಕಕ್ಕೆ ಬೇಕಾಗಿರುವ ರೈಲ್ವೆ ಮಾರ್ಗಗಳ ಅವಶ್ಯಕತೆ ಕುರಿತು ಜನಾಂದೋಲನ ನಡೆಸಲೇಬೇಕು.

ಬಾಗೇಪಲ್ಲಿ : 704 ಲಕ್ಷ ರೂ. ವೆಚ್ಚದ ಕಾಮಗಾರಿ ಮುಖ್ಯಮಂತ್ರಿಗಳಿಂದ ಉದ್ಘಾಟನೆ ಮತ್ತು ಶಂಕುಸ್ಥಾಪನೆ

ಸ್ವಾತಂತ್ರ್ಯದ 50 ವರ್ಷಗಳನ್ನು ನಾವು ಕಳೆದಿದ್ದೇವೆಯಾದರೂ ಮೂಲಭೂತ ಹಾಗೂ ಪ್ರಾಥಮಿಕ ಸೌಲಭ್ಯಗಳಾದ ಕುಡಿಯುವ ನೀರು, ಶಿಕ್ಷಣ, ಆರೋಗ್ಯ, ವಸತಿ, ರಸ್ತೆ ಇತ್ಯಾದಿ ಸಮಸ್ಯೆಗಳು ಮಾತ್ರ ಕಾಡುತ್ತಿವೆ ಎಂದು ಮುಖ್ಯಮಂತ್ರಿಗಳು ಜೂನ್ 3 ರಂದು ಬಾಗೇಪಲ್ಲಿ ಕ್ಷೇತ್ರದ ವಿವಿಧ ಇಲಾಖಾ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೇರವೇರಿಸಿ ಬಾಗೇಪಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಏರ್ಪಡಿಸಿದ್ದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಬಾಗೇಪಲ್ಲಿ ತಾಲ್ಲೂಕು ತಿಮ್ಮಂಪಲ್ಲಿ ಗ್ರಾಮದ ನೂತನ 66/11 ಕೆ.ವಿ. ವಿದ್ಯುತ್ ಉಪವಿತರಣಾ ಕೇಂದ್ರದ ಉದ್ಘಾಟನೆ, ಯರ್ರಗುಡಿಯ ಪ್ರಾಥಮಿಕ ಆರೋಗ್ಯ ಕೇಂದ್ರ ಉದ್ಘಾಟನೆ, ಜಿ.ಮುದ್ದೆಪಲ್ಲಿ ಕ್ರಾಸಿನಲ್ಲಿ ಪಶು ಚಿಕಿತ್ಸಾಲಯದ ಉದ್ಘಾಟನೆ ಮತ್ತು ಬಾಗೇಪಲ್ಲಿ ಟೌನ್‌ನಲ್ಲಿ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವಿದ್ಯಾರ್ಥಿ ನಿಲಯದ ಕಟ್ಟಡ ಉದ್ಘಾಟನೆ ಹಾಗೂ ಬಾಗೇಪಲ್ಲಿ ಟೌನ್‌ನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕಟ್ಟಡದ ಅಡಿಗಲ್ಲು, ಗೌರಿಬಿದನೂರು-ಬಾಗೇಪಲ್ಲಿ ನೂತನ 66 ಕೆ.ವಿ. ವಿದ್ಯುತ್ ಡಿ.ಸಿ. ಲೈನ್ ಕಾಮಗಾರಿ ಪ್ರಾರಂಭೋತ್ಸವ, ಪಾತಪಾಳ್ಯ ಹೋಬಳಿ ಗೊಲ್ಲಪಲ್ಲಿ ಹತ್ತಿರ ವಂಡಮಾನ್ ನದಿಗೆ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿದ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್, ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಇಂದು ದೇಶದ ಗಂಭೀರ ಸಮಸ್ಯೆಗಳ ಬಗ್ಗೆ ಚರ್ಚೆಯಾಗುತ್ತಿಲ್ಲ, ಸದನಗಳು ಧರಣಿ ಹಾಗೂ ಸಭಾತ್ಯಾಗಗಳಿಗೆ ಸೀಮಿತವಾಗಿರುವ ಸಂದರ್ಭದಲ್ಲಿ ಆಳವಾದ ಅಭ್ಯಾಸದೊಂದಿಗೆ ವಿಮರ್ಶಾತ್ಮಕವಾದ ಚರ್ಚೆ ಮೂಲಕ ಶಾಸಕರಾದ ಶ್ರೀರಾಮರೆಡ್ಡಿ ಸದನದ ಘನತೆ ಎತ್ತರಿಸಿದ್ದಾರೆ ಎಂದು ಶ್ಲಾಘಿಸಿದ ಮುಖ್ಯಮಂತ್ರಿಗಳು ರಾಜ್ಯದ ಉತ್ತಮ ಸಂಸದೀಯ ಪಟುಗಳಲ್ಲೊಬ್ಬರೆಂದು ಪ್ರಶಂಸಿಸಿದರು.

ರಾಜ್ಯದ ರೈತರಿಗೆ ತುಂಬಾ ಸಮಸ್ಯೆಯಾಗಿರುವ ವಿದ್ಯುತ್ ಕೊರತೆ ನೀಗಿಸಲು ಮುಂದಿನ ವರ್ಷ ಒಂದು ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಯೋಜನೆ ಪ್ರಾರಂಭವಾಗಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ರೈತರು ಬೆಳೆದ ಪದಾರ್ಥಗಳಿಗೆ ಬೆಲೆ ನಿಗದಿ ಮಾಡುವಂತಹ ವ್ಯವಸ್ಥೆ ನಮ್ಮಲ್ಲಿ ಇನ್ನೂ ಜಾರಿಗೆ ಬಂದಿಲ್ಲವೆಂದು ವಿಷಾದಿಸಿದ ಪಟೇಲರು, ಬೆಳೆ ವಿಮೆ ಯಶಸ್ವಿಯಾಗಲು ಬ್ಯಾಂಕುಗಳು ರೈತರಿಂದ ಪ್ರೀಮಿಯಂ ಹಣ ವಸೂಲಿ ಮಾಡಬೇಕು. ಸರ್ಕಾರ ಸಕಾಲದಲ್ಲಿ ಪ್ರೀಮಿಯಂ ಹಣ ತುಂಬಿ ಬೆಳೆನಷ್ಟ ಪರಿಹಾರ ಕೊಡುವಂತಹ ವ್ಯವಸ್ಥೆಯಾಗಬೇಕಾದರೆ ಇದಕ್ಕೆ ರಾಷ್ಟ್ರಮಟ್ಟದಲ್ಲಿ ನೀತಿ ರೂಪುಗೊಳ್ಳಬೇಕೆಂದರು.

ಒಣಬಾಂಬು!

ಸ್ಕೂಲ್ ಕಟ್ಟಿ, ಆಸ್ಪತ್ರೆ ಕಟ್ಟಿ ರೈತ ಬೆಳೆದ ಬೆಳೆಗೆ ಬೆಲೆ ಕಟ್ಟಿ ಅಂದರೆ ಅಣುಬಾಂಬ್ ಹಾರಿಸ್ತೀವಿ ಅಂತ ಒಣ ಬಾಂಬ್ ಹಾರಿಸ್ತಿದ್ದಾರೆ ಕೇಂದ್ರದ ಬಿಜೆಪಿ ಸರ್ಕಾರ ಎಂದ ಮುಖ್ಯ ಮಂತ್ರಿಗಳು ದೇಶವನ್ನು ನಿರುದ್ಯೋಗ, ಬಡತನ, ಭಿಕ್ಷಾಟನೆ, ರೈತರ ಆತ್ಮಹತ್ಯೆ ಮುಂತಾದ ಸಮಸ್ಯೆಗಳು ಕಾಡುತ್ತಿದ್ದು ಅವುಗಳನ್ನು ಬಗೆಹರಿಸುವುದನ್ನು ಬಿಟ್ಟು ಅಣುಬಾಂಬ್ ತಯಾರಿಸುವತ್ತ ತಿರುಗಿ ನೋಡುತ್ತಿರುವುದು ವಿಷಾದನೀಯ ಎಂದು ಪಟೇಲರು ನುಡಿದರು.

ಕೋಲಾರ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವ ದಲಿತರು ಮತ್ತು ಸವರ್ಣೀಯರ ನಡುವಿನ ಜಾತಿ ಸಂಘರ್ಷ ನಿವಾರಣೆಗೆ ಕ್ರಮಕ್ಕೆ ಕೈಗೊಳ್ಳುವಂತೆ ಜಿಲ್ಲಾ ಆಡಳಿತಕ್ಕೆ ಮುಖ್ಯಮಂತ್ರಿಗಳು ಕರೆ ನೀಡಿದರು.



ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಿ.ಭೈರೇಗೌಡ ಮಾತನಾಡಿ ಕೆ.ಜಿ.ಎಫ್. ನ ಚಿನ್ನದ ಗಣಿ ಕಾರ್ಯ ಸ್ಥಗಿತಗೊಂಡಿದ್ದು, ಅಲ್ಲಿನ ನೌಕರರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಅಗತ್ಯತೆಯ ಬಗ್ಗೆ ಹೇಳಿದರು.


ಪಶುಪಾಲನಾ ಖಾತೆ ರಾಜ್ಯ ಸಚಿವ ಬಿ.ಬಿ.ನಿಂಗಯ್ಯ ಮಾತನಾಡಿ ಪಶು ಸಂಖ್ಯೆಗೆ ಅನುಗುಣವಾಗಿ ಪ್ರತಿಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಪಶು ಆಸ್ಪತ್ರೆ ಪ್ರಾರಂಭಿಸುವುದು ಅತ್ಯಾವಶ್ಯಕವಾಗಿದೆ ಎಂದ ಅವರು ಇದೇ ವರ್ಷದಲ್ಲಿ ಬಾಗೇಪಲ್ಲಿ ಕ್ಷೇತ್ರಕ್ಕೆ 5 ಆಸ್ಪತ್ರೆಗಳನ್ನು ಮಂಜೂರು ಮಾಡುವುದಾಗಿ ಘೋಷಿಸಿ, ಶ್ರೀರಾಮರೆಡ್ಡಿಯವರ ಕಾರ್ಯವನ್ನು ಶ್ಲಾಘಿಸಿ, ಸದನದಲ್ಲಿ ಶ್ರೀರಾಮರೆಡ್ಡಿ 'ಕಪ್ಪು ಮಣಿಗಳ ಮಧ್ಯೆ ಕೆಂಪು ಮಣಿ' ಇದ್ದ ಹಾಗೆ ಕಂಗೊಳಿಸುತ್ತಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ ಜಿ.ವಿ.ಶ್ರೀರಾಮರೆಡ್ಡಿ ಬಾಗೇಪಲ್ಲಿ ತಾಲ್ಲೂಕು ಜಿಲ್ಲೆಯಲ್ಲಿ ಅತಿ ಹಿಂದುಳಿದಿದ್ದು, ಅತ್ಯಂತ ಕಡಿಮೆ ತಲಾದಾಯ ಹೊಂದಿ ಎಲ್ಲಾ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿರುವ ಕ್ಷೇತ್ರವಾಗಿದೆ. ಇಲ್ಲಿನ ಅಭಿವೃದ್ಧಿ ಕಾರ್ಯಗಳಿಗೆ ವಿಶೇಷ ಒತ್ತು ನೀಡಬೇಕೆಂದ ಅವರು ರೈತರ ಆಶ್ರಯದಾಣಗಳಾದ ಕೆರೆಗಳ ಹೂಳೆತ್ತುವ ಕೆಲಸವಾಗಬೇಕಾದ ಅವಶ್ಯಕತೆ ಇದ್ದು, ಸರ್ಕಾರಿ ಬಾಲಕಿಯರ ಜೂನಿಯರ್ ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಶಿಕ್ಷಕರ ತರಬೇತಿ ಕೇಂದ್ರ ಹಾಗೂ ಐಟಿಐಗಳ ಸೌಲಭ್ಯ ತುರ್ತಾಗಿ ಆಗಬೇಕಾಗಿದೆ ಎಂದು ವಿವರಿಸಿದರು.

ಸಮಾರಂಭದಲ್ಲಿ ಸಚಿವರಾದ ಮಹಾದೇವಪ್ಪ, ಕೃಷ್ಣಾರೆಡ್ಡಿ, ಶರಣಬಸಪ್ಪ ದರ್ಶನಾಪುರ, ಶಾಸಕರಾದ ಜ್ಯೋತಿರೆಡ್ಡಿ, ಶಿವಾನಂದ, ಕೆ.ವಿ.ಸುಬ್ಬಾರೆಡ್ಡಿ, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಮುನಿನಾರಾಯಣಪ್ಪ, ಉಪಾಧ್ಯಕ್ಷರಾದ ಭಾಗ್ಯಮ್ಮ ಮುಂತಾದ ಗಣ್ಯರು ಸಮಾರಂಭದಲ್ಲಿ ಹಾಜರಿದ್ದರು.

ಸಮಾರಂಭದಲ್ಲಿ 5 ಸಾವಿರಕ್ಕೂ ಹೆಚ್ಚು ಜನ ಸ್ವಯಂ ಸ್ಫೂರ್ತಿಯಿಂದ ಭಾಗವಹಿಸಿದ್ದು ವಿಶೇಷವಾಗಿತ್ತು. ತಹಸೀಲ್ದಾರ್ ಸ್ವಾಗತ ಕೋರಿದರೆ ಉಪನ್ಯಾಸಕರಾದ ಉದಯ ಕುಮಾರ್ ವಂದನೆ ಸಲ್ಲಿಸಿದರು.

ವರದಿ : ಎಂ.ಜಯರಾಮು



ಬೆಂಗಳೂರು

ಜೂನ್ 11-14, 1998

● 16 ಮಾರ್ಚ್ 1998: ಸುಪ್ರೀಂ ಕೋರ್ಟ್ ನ್ಯಾಯಾಲಯ ತನ್ನ ಐತಿಹಾಸಿಕ ತೀರ್ಪಿನಲ್ಲಿ ಕ್ವಿನಕ್ರಿನ್ ಎಂಬ ಗರ್ಭನಿರೋಧಕದ ಬಳಕೆಯನ್ನು ನಿಷೇಧಿಸಿ ಆಜ್ಞೆ ಹೊರಡಿಸಿತು. ವಿದೇಶಗಳಲ್ಲಿ ನಿಷೇಧಕ್ಕೊಳಗಾಗಿದ್ದ ಭಾರತದಲ್ಲಿ ಸಾವಿರಾರು ಮಹಿಳೆಯರ ಮೇಲೆ ಪ್ರಯೋಗಿಸಲ್ಪಡುತ್ತಿದ್ದ ಈ ಗರ್ಭನಿರೋಧಕ ಈ [illegible] ಭಾರತೀಯ ಮಹಿಳೆಯರ ಆರೋಗ್ಯದ ಮೇಲೆ ಮತ್ತಷ್ಟು ದುಷ್ಪರಿಣಾಮ ಬೀರುತ್ತಿತ್ತು. ಇದನ್ನು ಅರಿತ ಜನವಾದಿ ಮಹಿಳಾ ಸಂಘಟನೆ ತನ್ನ [illegible] ಮೂಲಕ ಈ ಗರ್ಭನಿರೋಧಕದ ವಿರುದ್ಧ ಜನಾಭಿಪ್ರಾಯ ರೂಪಿಸಿತು. ಹಾಗೂ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿಯ ಮೂಲಕ ನ್ಯಾಯಾಲಯದ ಮೊರೆ ಹೊಕ್ಕಿತು. ಅದರ ಫಲವೇ 1998 ಮಾರ್ಚ್ 16 ರ ತೀರ್ಪು.

● 1996 ರ ನವೆಂಬರ್ 17: ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎನ್ನುವಂತೆ ವಿಶ್ವ ಸೌಂದರ್ಯ ಸ್ಪರ್ಧೆಯ ವಿರುದ್ಧ ಬೆಂಗಳೂರಿನಲ್ಲಿ ಅಂದು ನಡೆದ ಬೃಹತ್ ಮತ ಪ್ರದರ್ಶನದಲ್ಲಿ ಭಾರತದ ಎಲ್ಲ ರಾಜ್ಯಗಳಿಂದ ಬಂದಿದ್ದ ಆರು ಸಾವಿರ ಮಹಿಳೆಯರು ಸೇರಿದ್ದರು. ಈ ಹೋರಾಟಕ್ಕೆ ಬೆಂಬಲವಾಗಿ ಸಾವಿರಾರು ಪುರುಷರೂ ಬೀದಿಗಿಳಿದಿದ್ದರು. ಮುಂಬೈನ ಅಮಿತಾಬ್ ಬಚ್ಚನ್ ಕಾರ್ಪೋರೇಷನ್ ಲಿಮಿಟೆಡ್, ರಾಜ್ಯ ಸರ್ಕಾರದ ಸಂಪೂರ್ಣ ಸಹಕಾರ ಹಾಗೂ ರಕ್ಷಣೆಯೊಂದಿಗೆ ಏರ್ಪಡಿಸಿದ್ದ ವಿಶ್ವ ಸೌಂದರ್ಯ ಸ್ಪರ್ಧೆಯನ್ನು ವಿರೋಧಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಇಂತಹ ಸ್ಪರ್ಧೆಗಳ ಹಿಂದಿನ ಕುಟಿಲತೆಯನ್ನು ಬಹಿರಂಗಪಡಿಸುವ ಚಳುವಳಿಯನ್ನು ರೂಪಿಸಿತ್ತು.

ಮಹಿಳೆಯರನ್ನು ರಕ್ಷಿಸುವ ಬದಲು ಅವರನ್ನು ವಿವಸ್ತ್ರಗೊಳಿಸಲು ಹೊರಟ ಸರ್ಕಾರಕ್ಕೆ ಮಹಿಳಾ ಸಮುದಾಯ ಛೀಮಾರಿ ಹಾಕಿತು. ಪರಿಣಾಮ ದೇಶದ ಪ್ರಸಿದ್ಧ ಜಾಹೀರಾತು ಸಂಸ್ಥೆಯೊಂದು ಎಬಿಸಿಎಲ್ ಪರವಾಗಿ ಪ್ರಚಾರ ಕಾರ್ಯ ನಡೆಸಲು ನಿರಾಕರಿಸಿತು. ಸೌಂದರ್ಯ ಸ್ಪರ್ಧೆಯ ಅಂಗವಾಗಿದ್ದ ಈಜುಡುಗೆ ಸ್ಪರ್ಧೆಯನ್ನು ಬೆಂಗಳೂರಿನಿಂದ ಸ್ಥಳಾಂತರಿಸಲಾಯಿತು. ಮುಂದಿನ ಮೂರು ವರ್ಷಗಳಲ್ಲೂ ತಾನೇ ಈ ಸ್ಪರ್ಧೆಯನ್ನು ಭಾರತದಲ್ಲೇ ನಡೆಸಲು ಉದ್ದೇಶಿಸಿದ್ದ ಎಬಿಸಿಎಲ್ ಒಂದೇ ಸ್ಪರ್ಧೆಗೆ ತನ್ನ ಗುತ್ತಿಗೆಯನ್ನು ಕೈ ಬಿಟ್ಟಿತು. ಸ್ಪಾಸ್ಟಿಕ್ ಸೊಸೈಟಿ ಆಫ್ ಇಂಡಿಯಾಗೆ ಕೊಡುಗೆಯಾಗಿ ನೀಡುವುದಾಗಿ ಹೇಳಿದ್ದ 40 ಲಕ್ಷ ರೂಪಾಯಿಗಳನ್ನು ಎಬಿಸಿಎಲ್ ಸಂಸ್ಥೆ ಇಂದಿನವರೆಗೂ ಕೊಟ್ಟಿಲ್ಲ.

● 1998ರಲ್ಲಿ ಕುದುರೆಮೋತಿಯಲ್ಲಿ ನಡೆದ ಮಕ್ಕಳೆಯರ ಬೆತ್ತಲೆ ಮೆರವಣಿಗೆ ವಿರುದ್ಧ ನಡೆದ ಹೋರಾಟ, ದೇವದಾಸಿಯರ ಪುನರ್ವಸತಿಗಾಗಿ ಸಮೀಕ್ಷೆ ಮತ್ತು ಸರಕಾರದ [illegible] ಸಿದ್ಧ ಉಡುಪು ಕಾರ್ಖಾನೆಗಳಲ್ಲಿ ದುಡಿಯುವ ಮಹಿಳೆಯರಿಗೆ ಕನಿಷ್ಠ ಕೂಲಿಗಾಗಿ ನಡೆದ ಹೋರಾಟ; ಹೊಸಳ್ಳಿಯಲ್ಲಿ ಭೂ ವಿವಾದಕ್ಕೆ ಸಂಬಂಧಿಸಿದಂತೆ ಮಹಿಳೆಯರ ಬೆತ್ತಲೆ ಮೆರವಣಿಗೆ ವಿರುದ್ಧದ ಹೋರಾಟ; ಗುಲ್ಬರ್ಗದಲ್ಲಿ ಟೈಲರಿಂಗ್ ಕೇಂದ್ರದ ಮಹಿಳೆಯರ ಬಾಕಿ ವೇತನ ಪಾವತಿಗಾಗಿ ನಡೆದ ಹೋರಾಟ; ಬಾಗಲಕೋಟೆಯ [illegible] ಕಾಲೋನಿಗೆ ಕುಡಿಯುವ ನೀರು ಮತ್ತು ಬೀದಿದೀಪದ ಸೌಲಭ್ಯಕ್ಕಾಗಿ ನಡೆದ ಹೋರಾಟಗಳ ನೇತೃತ್ವ ವಹಿಸಿದ್ದು ಜನವಾದಿ ಮಹಿಳಾ ಸಂಘಟನೆ.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಮಹಿಳೆಯರ ಒಟ್ಟು ಬದುಕನ್ನು ಹಸನುಗೊಳಿಸಲು ದೇಶದಾದ್ಯಂತ ನಡೆಸುತ್ತಿರುವ ಅನೇಕ ಹೋರಾಟಗಳಲ್ಲಿ ಕೆಲವೇ ಕೆಲವು ಉದಾಹರಣೆ ಮಾತ್ರ.

ದೇಶದ 23 ರಾಜ್ಯಗಳಲ್ಲಿ ಒಟ್ಟು 38 ಲಕ್ಷ ಮಹಿಳೆಯರ ಸದಸ್ಯ ಬಲವನ್ನು ಹೊಂದಿರುವ ಸಂಘಟನೆ ಕೌಟುಂಬಿಕ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹೀಗೆ

ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯದ ವಿರುದ್ಧ ಅವಿರತ ಹೋರಾಟ ನಡೆಸುತ್ತಿದೆ. ಲಿಂಗಾಧಾರಿತ ತಾರತಮ್ಯದ ನಿವಾರಣೆಗಾಗಿ ಸಮಾನ ಶಿಕ್ಷಣದ ಅವಕಾಶ, ಸಮಾನ ಕೆಲಸಕ್ಕೆ ಸಮಾನ ವೇತನ, ಉದ್ಯೋಗದ ಹಕ್ಕು, ಉತ್ತಮ ಆಹಾರ ಮತ್ತು ಆರೋಗ್ಯದ ಹಕ್ಕು, ಆಸ್ತಿ ಮೇಲಿನ ಒಡೆತನ, ಕೌಟುಂಬಿಕ ಸಮಸ್ಯೆಗಳಿಗೆ ಕಾನೂನಿನ ನೆರವು, ಮೂಲಭೂತ

ಬೆಂಗಳೂರಿನಲ್ಲಿ ಅಖಿಲ ಭಾರತ ಮಹಿಳಾ ಮುಖಂಡರು

ಸೌಲಭ್ಯಗಳ ಒದಗಿಸುವಿಕೆ ಇತ್ಯಾದಿಗಳಿಗಾಗಿ ನಿರಂತರ ಹೋರಾಟ ನಡೆಸಿದೆ. ಮಹಿಳೆಯರಲ್ಲಿ ಅವರ ಹಕ್ಕಿನ ಬಗ್ಗೆ ಅರಿವು ಮೂಡಿಸುವ ಮೂಲಕ ದೌರ್ಜನ್ಯಗಳಿಗೆ ಬಲಿಯಾಗುವ ಮಹಿಳೆ ಸ್ವತಃ ಹೋರಾಟಕ್ಕೆ ಸಜ್ಜಾಗುವಂತೆ ಮಹಿಳಾ ಚಳುವಳಿಯನ್ನು ರೂಪಿಸುತ್ತಿದೆ. ಎಲ್ಲಾ ಕ್ಷೇತ್ರಗಳಲ್ಲಿ ನೀತಿ ನಿರೂಪಣೆಯ ಸ್ಥಾನಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಾಗುವಂತೆ ಮಾಡಲು ಶ್ರಮಿಸುತ್ತಿದೆ. ರಾಜಕೀಯದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತಾಗಲು ಮೀಸಲಾತಿ ಕೋರಿ ದೇಶದಾದ್ಯಂತ ನಡೆಯುತ್ತಿರುವ ಹೋರಾಟದಲ್ಲಿ ಜನವಾದಿ ಮಹಿಳಾ ಸಂಘಟನೆ ಮುಂಚೂಣಿಯಲ್ಲಿದೆ.

ಇತರೆ ಸಮಾನ ಮನಸ್ಕ ಮಹಿಳಾ ಸಂಘಟನೆಗಳನ್ನು ಒಂದೇ ವೇದಿಕೆಗೆ ತರುವುದಲ್ಲದೆ ರೈತರು, ಕಾರ್ಮಿಕರು, ವಿದ್ಯಾರ್ಥಿ-ಯುವಜನರ ಸಂಘಟನೆಗಳ ಜೊತೆಗೂ ಕೈ ಜೋಡಿಸಿ ಕೆಲಸ ಮಾಡುತ್ತಿದೆ.

ಇದೀಗ ಈ ಸಂಘಟನೆಯ 5ನೇ ಅಖಿಲ ಭಾರತ ಸಮ್ಮೇಳನ ಜೂನ್ 11ರಿಂದ 14 ರವರೆಗೆ ಬೆಂಗಳೂರಿನ ಪುರಭವನದಲ್ಲಿ ನಡೆಯಲಿದೆ. ದೇಶದ ಎಲ್ಲೆಡೆಯಿಂದ ಒಂದು ಸಾವಿರ ಮಹಿಳೆಯರು ಪ್ರತಿನಿಧಿಗಳಾಗಿ ಆಗಮಿಸುತ್ತಿದ್ದಾರೆ. ಅನೇಕ ಸಂಸತ್ ಸದಸ್ಯರು, ರಾಜ್ಯ ವಿಧಾನಸಭೆಗಳ ಸದಸ್ಯರು ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಮೊದಲಾದ ರಾಜ್ಯಗಳ ಪಂಚಾಯತ್ ಸದಸ್ಯರು, ಮಹಿಳಾ ಚಳುವಳಿಯೊಂದಿಗೆ ಹೆಗಲು ನೀಡುತ್ತಿರುವ ಕಾನೂನು ತಜ್ಞರು, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ರಂಗಭೂಮಿ ಕಲಾವಿದರು, ಸಮೂಹ ಮಾಧ್ಯಮ ತಜ್ಞರು, ಕೃಷಿ ಹಾಗೂ ಕಾರ್ಮಿಕ ಚಳುವಳಿಗಳ ಹಿರಿಯ ನಾಯಕರು ಪ್ರತಿನಿಧಿಗಳಾಗಿ ಬರಲಿದ್ದಾರೆ.

ಆರ್ಥಿಕ ಉದಾರೀಕರಣ, ನೂತನ ರಾಜಕೀಯ ವ್ಯವಸ್ಥೆ ಹಾಗೂ ಹೆಚ್ಚುತ್ತಿರುವ ಕೋಮುವಾದಿ ಚಟುವಟಿಕೆಗಳ ಹಿನ್ನಲೆಯಲ್ಲಿ ಮಹಿಳೆಯರು ಆಡಳಿತಾಧಿಕಾರ ಹೊಂದುವಂತೆ ಮಾಡುವುದರ ಬಗ್ಗೆ ಸಮ್ಮೇಳನ ಚರ್ಚೆ ನಡೆಸಲಿದೆ. ನಾಲ್ಕು ದಿನಗಳ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಹತ್ತು ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಯಾವಾಗ? ಎಲ್ಲಿ? ಏನು?

ಜೂನ್ 6: ಸಂಜೆ 4 ಗಂಟೆಗೆ, ಯವನಿಕಾ
'ಮಹಿಳಾ ಹಕ್ಕುಗಳು ಮತ್ತು ಕಾನೂನು ಸುಧಾರಣೆ' ಕುರಿತು ವಿಚಾರ ಸಂಕಿರಣ
ಭಾಗವಹಿಸುವವರು: ಸುಭಾಷಿಣಿ ಅಲಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಸಹ ಕಾರ್ಯದರ್ಶಿ; ಗೀತಾದೇವಿ ಮತ್ತು ಹೇಮಲತಾ ಮಹಿಷಿ, ನ್ಯಾಯವಾದಿಗಳು; ಎ.ಜೆ.ಸದಾಶಿವ, ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ.

ಜೂನ್ 6 : ಸಂಜೆ 5 ಗಂಟೆಗೆ
ಸಂಪಂಗಿರಾಮನಗರ 18ನೇ ಅಡ್ಡರಸ್ತೆ
'ಬೀದಿ ನಾಟಕ ಸಪ್ತಾಹ' ಆರಂಭ; ನಾಟಕಗಳು : 'ಭಾಂವ್ರಿ ದೇವಿ' ಮತ್ತು 'ನೇಣು' - ಸಮುದಾಯ ತಂಡ
ಉದ್ಘಾಟಕರು: ಕಾಳಿಂದಿ ದೇಶಪಾಂಡೆ

ಜೂನ್ 7 : ಬೆಳಿಗ್ಗೆ 10 ಗಂಟೆಗೆ, ಮಹಾರಾಣಿ ವಿಜ್ಞಾನ ಕಾಲೇಜು ಆವರಣ
'ಮಹಿಳೆ ಮತ್ತು [illegible]' ಕುರಿತು ಪೋಸ್ಟರ್ ರಚನೆ [illegible]
ಉದ್ಘಾಟಕರು: [illegible], ಅಧ್ಯಕ್ಷರು, ಕರ್ನಾಟಕ ಲಲಿತಕಲಾ ಅಕಾಡೆಮಿ.
ಮುಖ್ಯ ಅತಿಥಿಗಳು: [illegible] ಉಪಾಧ್ಯಕ್ಷರು, [illegible]

ಜೂನ್ 11: ಬೆಳಿಗ್ಗೆ 10 ಗಂಟೆಗೆ, ಪುರಭವನ
ಗೋದಾವರಿ ಪರುಳೇಕರ್ ಸಭಾಂಗಣ
ಅಖಿಲ ಭಾರತ ಜನವಾದಿ ಮಹಿಳಾ [illegible]
ಉದ್ಘಾಟಕರು: ಶ್ರೀಮತಿ ಸುಶೀಲಾ ಗೋಪಾಲನ್, ಕೈಗಾರಿಕಾ ಸಚಿವೆ, ಕೇರಳ ಸರ್ಕಾರ; ಹಿರಿಯ ಕಾರ್ಮಿಕ ನಾಯಕರು.
[illegible] ಹೋರಾಟಗಳಲ್ಲಿ [illegible] ಮುಂದಿ ಹಿರಿಯ ಮಹಿಳೆಯರಿಗೆ ಗೌರವ ಅರ್ಪಣೆ.
ಜೂನ್ 12: ಮಧ್ಯಾಹ್ನ 4.30 ಕ್ಕೆ, ಗೋದಾವರಿ ಪರುಳೇಕರ್ ಸಭಾಂಗಣದಲ್ಲಿ [illegible]



ವಿವಿಧ ರಾಜ್ಯಗಳಿಂದ ಆಗಮಿಸುವ ಪಂಚಾಯತ್ ರಾಜ್ ಸದಸ್ಯರೊಂದಿಗೆ ಸಂವಾದ

ಜೂನ್ 13: ಮಧ್ಯಾಹ್ನ 2 ಕ್ಕೆ, ಚಿಕ್ಕಲಾಲ್‌ಬಾಗ್‌ನಿಂದ ಮಲ್ಲೇಶ್ವರಂ ಮೈದಾನಕ್ಕೆ
ಸಾವಿರಾರು ಮಹಿಳೆಯರ ಬೃಹತ್ ರ್ಯಾಲಿ
ಸಂಜೆ 4 ಕ್ಕೆ : ಮಲ್ಲೇಶ್ವರಂ ಮೈದಾನದಲ್ಲಿ ಬಹಿರಂಗ ಸಭೆ;
ಭಾಷಣಕಾರರು: ಜನವಾದಿ ಮಹಿಳಾ ಸಂಘಟನೆಯ ಅಖಿಲ ಭಾರತ ನಾಯಕಿಯರಾದ ಬೃಂದಾ ಕಾರಟ್, ಸುಭಾಷಿಣಿ ಅಲಿ, ಲಕ್ಷ್ಮಿ ಸೈಗಲ್, ರಾಜ್ಯ ಸಮಿತಿ ಅಧ್ಯಕ್ಷೆ ಕೆ.ಎಸ್. ವಿಮಲ, ಪ್ರಧಾನ ಕಾರ್ಯದರ್ಶಿ [illegible], ಸ್ವಾಗತ ಸಮಿತಿ ಉಪಾಧ್ಯಕ್ಷೆ [illegible]
ಸಂಜೆ [illegible] ಕ್ಕೆ ಪುರಭವನ: ಬೆಂಗಳೂರು ಸಮುದಾಯ ತಂಡದಿಂದ 'ರುಡಾಲಿ' ನಾಟಕ ಪ್ರದರ್ಶನ

ಜೂನ್ 14 : ಬೆಳಿಗ್ಗೆ [illegible] ಕ್ಕೆ, ಗೋದಾವರಿ ಪರುಳೇಕರ್ ಸಭಾಂಗಣದಲ್ಲಿ
ಮಹಿಳೆಯರಿಗೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಕಾರ್ಯಾಗಾರಗಳು
ವಿಷಯಗಳು: 1. ನೂತನ ಆರ್ಥಿಕ ವ್ಯವಸ್ಥೆ ಮತ್ತು ಮಹಿಳೆ, 2. ರಾಜಕೀಯದಲ್ಲಿ ಮಹಿಳೆ, [illegible] ಜನಸಂಖ್ಯಾ ನೀತಿ, 4. ದಲಿತ ಮಹಿಳೆಯರ ಹೋರಾಟ, 5. ಗೃಹ ಕೈಗಾರಿಕೆಗಳಲ್ಲಿ ಮಹಿಳೆಯರು, 6. ಮಹಿಳಾ ಕೃಷಿ ಕಾರ್ಮಿಕರ ಸಮಸ್ಯೆಗಳು, 7. ಭಾರತೀಯ ಸಮಾಜದಲ್ಲಿ ಮಹಿಳೆಯ ಸ್ಥಾನ ಹಾಗೂ [illegible] ಆರ್.ಎಸ್.ಎಸ್. [illegible] ಮತ್ತು ಮಹಿಳೆ

ಭಾರತ ಒಂದು ಪರಮಾಣು ಬಾಂಬ್ [illegible] ತಯಾರಿಸಬೇಕು ಎಂಬುದು ಆರ್.ಎಸ್.ಎಸ್ [illegible] ಬಹುದಿನದ ಕನಸು. ಬಿಜೆಪಿ ನೇತೃತ್ವದ ಸರಕಾರ ಅದ[illegible] ಸಾಕಾರಗೊಳಿಸುವತ್ತ ಸಾಗಿದೆ. ಪೋಖ್ರಾನ್‌ನಲ್ಲಿ ನಡೆ[illegible] ಐದು ಪರೀಕ್ಷಣೆಗಳ ಅರ್ಥ ಇದೇ. ಆದರೆ [illegible] ಸಂದರ್ಭದಲ್ಲಿ ಎಬ್ಬಿಸಿದ ಭಾವೋದ್ರೇಕವ[illegible] ಗಮನಿಸಿದಾಗ, ಶಿಕ್ಷಿತ ಜನಾಭಿಪ್ರಾಯದಲ್ಲೂ ಹಲ[illegible] ಅವಿವೇಕಗಳನ್ನು ಕಾಣಬಹುದು. ಇವು ಆರ್.ಎಸ್.ಎಸ್ [illegible] ಬಿಜೆಪಿ ಕೂಟದ ಯೋಜನೆಗಳಿಗೆ ನೆರವು ನೀಡುವಂತ[illegible] ಮೌಢ್ಯಗಳು.

ಮೊದಲನೆಯದು ಇದೊಂದು ವೈಜ್ಞಾನಿಕ-ತಾಂತ್ರಿ[illegible] ಸಾಧನೆಯಲ್ಲವೇ, ಇದರಲ್ಲಿ ಹೆಮ್ಮೆ ಪಡುವುದರ[illegible] ತಪ್ಪೇನು? ಬಿಜೆಪಿಯ ರಾಷ್ಟ್ರಾಂಧತೆಯನ್ನು, ಸಂಕುಚಿ[illegible] ದೃಷ್ಟಿಯನ್ನು ಒಪ್ಪದವರೂ ಕೇಳುವ ಪ್ರಶ್ನೆಯಿದು. [illegible] ಎದ್ದು ಕಾಣುವುದೆಂದರೆ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವುದಕ್ಕೂ, ಹಿಂದುತ್ವದ ಅಜೆಂಡಾಕ್ಕೂ ಇರು[illegible] ಸಂಬಂಧವನ್ನು ಕಾಣಲಾಗದ ಮೊದ್ದುತನ. [illegible] ಮೊದ್ದುತನದ ಅಲೆಯ ಮೇಲೆ ಬಿಜೆಪಿ ತಾನೇ ಏಕಮಾ[illegible] ರಾಷ್ಟ್ರೀಯವಾದಿ ಶಕ್ತಿ ಎಂದು ತೋರಿಸಿಕೊಳ್ಳ[illegible] ಪ್ರಯತ್ನಿಸುತ್ತಿದೆ.

ಆರ್.ಎಸ್.ಎಸ್. ಕಣ್ಣೋಟವೆಂದರೆ ಭಾರತ ಒಂದು ಬಹುಸಂಖ್ಯಾತರ ಆಳ್ವಿಕೆಯ ಮೇಲೆ ಆಧರಿಸಿ[illegible] ಸಂಕುಚಿತವಾದೀ ಮಿಲಿಟರಿ ಶಾಹಿ ಪ್ರಭುತ್ವವಾಗಬೇ[illegible] ಎಂದು. ಇದಕ್ಕಾಗಿ ಒಂದು ಆಕ್ರಾಮಕ ಮುಸ್ಲಿಂ-ವಿರೋ[illegible] ವೇದಿಕೆ ಸೃಷ್ಟಿಸಿ ಹಿಂದೂ-ಮುಸಲ್ಮಾನರ ನಡುವೆ ಕಂದ[illegible] ಏರ್ಪಡಿಸುವುದು ಅವರ ಕಾರ್ಯಶೈಲಿ. ಆದ್ದರಿಂದಲ[illegible] ರಾಮಮಂದಿರದ ಪ್ರಶ್ನೆ ಧಾರ್ಮಿಕ-ರಾಜಕೀಯ ಅರ್ಥ[illegible] ಪಡೆದುಕೊಳ್ಳುವ ಮೊದಲೇ ಬಾಂಬ್ ತಯಾರಿಕೆಯೆಂಬುದು ಬಿಜೆಪಿಯ ಹಿಂದಿನ ಅವತಾ[illegible] ಜನಸಂಘಕ್ಕೆ ಒಂದು ಲಾಂಛನವೇ ಆಗಿಬಿಟ್ಟಿತು ಎಂಬುದ[illegible] ಇಲ್ಲಿ ನೆನಪಿಸಿಕೊಳ್ಳಬಹುದು. ರಾಮಮಂದಿ[illegible] ಆಂದೋಲನ ದೇಶದ ಜಾತ್ಯಾತೀತ ತಳಪಾಯಕ್ಕೆ ಏಟ[illegible] ನೀಡಿದ್ದರೆ ಈಗ ತೋರುತ್ತಿರುವ ಆಕ್ರಾಮ[illegible] ಸಂಕುಚಿತವಾದದ ಹಿಂದೆ ಬಾಂಬ್ ಮತ್ತು ಹಿಂದುತ್ವ[illegible] ನಡುವಿನ ನಂಟು ಅಡಗಿದೆ ಎಂಬುದನ್ನು ಅರ್ಥ[illegible] ಮಾಡಿಕೊಳ್ಳದಿದ್ದರೆ ಭಾರತ ಒಂದು ಸರ್ವಾಧಿಕಾರಶಾಹಿ ಹಿಂದೂ ಬಹುಸಂಖ್ಯಾತ ತತ್ವದ ಮೇಲೆ ನಿಂ[illegible] ಪ್ರಭುತ್ವವಾಗಲಿದೆ.


'ಅಗ್ಗ'ದ ಬಾಂಬ್ - ಮತ್ತೊಂದು ಅವಿವೇಕ

ಈಗ ಚಲಾವಣೆಗೊಳ್ಳುತ್ತಿರುವ ಇನ್ನೊಂದ[illegible] ನಿಲುವೆಂದರೆ ಪರಮಾಣು ಶಸ್ತ್ರವನ್ನು ಭಾರತದ ರಾಜಕೀಯ ಮತ್ತು ರಾಜಕೀಯ ಕಾರ್ಯತಂತ್ರದ ಒಂದು ಸಾಧನವಾ[illegible] ಸ್ವೀಕರಿಸಬೇಕು ಎಂಬ ವಾದ. ಇದು ಇನ್ನೊಂದು ಅವಿವೇಕತನ. ಅಣು ಶಕ್ತಿ ಆಯೋಗದ ಮಾಜಿ ಅಧ್ಯಕ್ಷ[illegible] ಪರಮಾಣು ಬಾಂಬ್‌ನ್ನು ಒಂದು ಯುದ್ಧ ವಿಮಾನಕ್ಕಿಂ[illegible] ಅಗ್ಗದಲ್ಲಿ ಒಂದು ಕೋಟಿ ರೂಪಾಯಿ ಖರ್ಚಿನೊಳ[illegible] ಮಾಡಬಹುದು ಎಂದು ಹೇಳಿದ್ದಾರೆ! ಆದರೆ ಈ 'ಅಗ್ಗ' ಬಾಂಬಿನ ತಯಾರಿಕೆಗೆ ಬೇಕಾದ ಸೌಕರ್ಯಗಳನ್ನು ಒದಗಿಸಲು, ನಂತರ ಅದರ ಉಹಾವಣೆಗೆ ಬಹಳಷ್ಟು ಹಣ ಬೇಕು ಎಂಬುದನ್ನು ಮಾತ್ರ ಅವರು ಹೇಳಿಲ್ಲ. ಇವೆ[illegible] ಸೇರಿ ಸಾವಿರಾರು ಕೋಟಿ ರೂ. ಗಳಾಗುತ್ತದೆ. ಇಷ್ಟೇ ಅಲ್ಲ, ನಾವು ಬಾಂಬು ತಯಾರಿಸುವುದೆಂದರೆ ಪಾಕಿಸ್ತಾನ[illegible] ಒಂದು ಬಹಿರಂಗ ಆಹ್ವಾನ - ಈ ಪೈಪೋಟಿಯ[illegible] ಸೇರಿಕೊಳ್ಳಲು. ಇದರಿಂದಾಗಿ ನಮ್ಮ ಸಂಪನ್ಮೂಲಗ[illegible] ಮೇಲೆ ಮತ್ತಷ್ಟು ಹೊರೆ.

ಪರಮಾಣು ಶಸ್ತ್ರಾಸ್ತ್ರಗಳನ್ನು ನಮ್ಮ ನೆರೆದೇಶಗಳೊಂದಿ[illegible] ಇರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಸಾಧನವಾ[illegible] ಬಳಸಬಹುದೆಂಬ ಮಾತಂತೂ ಮತ್ತೊಂದು ಮುಠ್ಠಾಳತನ. ಹೀಗೆ ಹೇಳುವವರು ಅಣುಬಾಂಬು ಸಾಮೂಹಿ[illegible] ವಿಧ್ವಂಸದ ಅಸ್ತ್ರವೆಂಬುದನ್ನು ಮರೆಯುತ್ತಾರೆ. ಪರಮಾಣು ಅಸ್ತ್ರಗಳನ್ನು ವಿರೋಧಿಸುವವರು ಮುಂದಿಡುವ ಮುಖ್ಯ ತರ್ಕ ಕೂಡಾ ಇದೇ - ಅಣುಬಾಂಬು ಇಡೀ ನಾಗರೀಕತೆಯನ್ನು ನೆಲಸಮ ಮಾಡಿ ಮಾನವಕುಲ ಮ[illegible] ಶಿಲಾಯುಗಕ್ಕೆ ಹೋಗುವಂತೆ ಮಾಡುತ್ತದೆ ಎಂದು. ಪರಮಾಣು ಅಸ್ತ್ರಗಳನ್ನು ಸಾಮರಿಕ ವ್ಯೂಹದ ಚೌಕಟ್ಟಿನಲ್ಲಿ [illegible] 'ತಜ್ಞ'ರು ಮೇ 17 [illegible] ಆರ್.ಎಸ್.ಎಸ್. ಮುಖ್ಯವಾಣಿ 'ಆರ್ಗನೈಸರ್' [illegible] ಪೋಖ್ರಾನ್ ವಿಶೇಷಾಂಕದಲ್ಲಿ ಪ್ರಸಾರವಾದ ಲೇಖನಗಳನ್ನು ಓದಬೇಕು. 'ಪಾಕಿಸ್ತಾನವನ್ನು ಪಳಗಿಸಲು', 'ಚೀಣಾಕ್ಕೆ ಪಾಠ ಕಲಿಸಲು' ಎಂಬ [illegible] ಲೇಖನಗಳಿಂದ ಅದು ತುಂಬಿ ಹೋಗಿದೆ.

ಮಿಲಿಟರಿಶಾಹಿ/ ಫ್ಯಾಸಿಸ್ಟ್ ಶಕ್ತಿಗಳ ಲಕ್ಷಣ

ರಾಷ್ಟ್ರಾಂಧತೆ, ಮಿಲಿಟರಿ ಶಾಹಿಯ[illegible] [illegible] ಶಕ್ತಿಗಳ[illegible] [illegible] ಫ್ಯಾಸಿಸ್ಟ್ ಶಕ್ತಿಗಳ ಮುಖ್ಯ[illegible] ಲಕ್ಷಣವೆಂಬುದನ್ನು ಮರೆಯುವಂತಿಲ್ಲ. ದೇಶದ ಒಳಗೆ ಅಥವಾ ಹೊರಗೋ ಒಬ್ಬ ಶತ್ರುವನ್ನು ಕಲ್ಪಿಸಿ ಅದರ ವಿರುದ್ಧ ಭಾವೋದ್ರೇಕ ಎಬ್ಬಿಸುವುದು ಅವರ ಮುಖ್ಯ ತಂತ್ರ. ಇದಕ್ಕೆ ಇತಿಹಾಸದ ಪುಟಗಳಲ್ಲಿ ಅಸಂಖ್ಯ[illegible] ಉದಾಹರಣೆಗಳಿವೆ. ಬಿಜೆಪಿ-ಆರ್.ಎಸ್.ಎಸ್. ಕೂಟದ[illegible] ಸಂದರ್ಭದಲ್ಲಿ ಹೇಳುವುದಾದರೆ ದೇಶದ ಒಳಗೆ[illegible]



ಬಾಂಬು ತಯಾರಿಸುವ ತನ್ನ ಬಹುದಿನದ ಮಿಲಿಟರಿಶಾಹಿ ಕನಸನ್ನು ನನಸಾಗಿಸಿಕೊಳ್ಳುವಲ್ಲಿ ಆರ್.ಎಸ್.ಎಸ್. - ಬಿಜೆಪಿ ಕೂಟ ಆಳುವ ವರ್ಗಗಳ ವಿಭಿನ್ನ ಶಕ್ತಿಗಳನ್ನು ಒಟ್ಟುಗೂಡಿಸಿ ತನ್ನ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ ನಡೆಸಿದೆ. ಆದರೆ ಮಿಲಿಟರಿಶಾಹಿಯ ವಿಚಾರದಲ್ಲಾಗಲೀ, ಕೋಮುವಾದದ ವಿಚಾರದಲ್ಲಾಗಲೀ, ಉದಾರೀಕರಣದ ವಿಚಾರದಲ್ಲಾಗಲೀ ಸಾಕಷ್ಟು ಶಕ್ತಿಗಳನ್ನು ಆರ್.ಎಸ್.ಎಸ್. - ಬಿಜೆಪಿ ಆಟದ ವಿರುದ್ಧ ಅಣಿನೆರೆಸಲು ಸಾಧ್ಯ. ಇದನ್ನು ಈಗ ಮಾಡಬೇಕಾಗಿದೆ ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್.

ಇದೀಗ ಮಿಲಿಟರಿಶಾಹಿ-ಕೋಮುವಾದಿ-ಉದಾರೀಕರಣವಾದಿ ಆಕ್ರಮಣ !

ಅಲ್ಪಸಂಖ್ಯಾತರ ಟೀಕೆ ಹಾಗೂ ಹೊರಗೆ 'ಮುಸ್ಲಿಂ ಪಾಕಿಸ್ತಾನ' ದ ವಿರುದ್ಧ, ಅದನ್ನು ಬೆಂಬಲಿಸುತ್ತದೆನ್ನುವ ಚೀಣಾದ ವಿರುದ್ಧ ಅರಚಾಟ ಇವು ಪರಸ್ಪರ ಪೂರಕ ಕೃತ್ಯಗಳು. ಭಾರತ ಪರಮಾಣು ಶಸ್ತ್ರಗಳನ್ನು ಹೊಂದಬೇಕು ಎಂದರೂ ಬಿಜೆಪಿ ನೆರೆದೇಶಗಳ ಬಗ್ಗೆ ಬಿಜೆಪಿಯ ಯುದ್ಧಕೋರ ನಿಲುವನ್ನು ವಿರೋಧಿಸುವವರು ಬಹಳ ಮಂದಿಯಿದ್ದಾರೆ. ಇವರು ಗಮನಿಸಬೇಕಾದ ಸಂಗತಿಯೆಂದರೆ ಬಿಜೆಪಿ-ಆರ್.ಎಸ್.ಎಸ್.ಗೆ ಬಾಂಬ್ ತಯಾರಿಕೆ ಒಂದು ಸಂಕುಚಿತವಾದಿ ವಿದೇಶಾಂಗ ಧೋರಣೆಯ ಒಂದು ಅಂಗಮಾತ್ರ. ಹಿಂದಿನ ಜನಸಂಘ ತೈವಾನ್ ಟಿಬೆಟ್ ಬಗ್ಗೆ ತಳೆದ ನಿಲುವಿಗೂ ಈಗಿನ ಬಿಜೆಪಿ ನಿಲುವಿಗೂ ಬಹಳ ವ್ಯತ್ಯಾಸವೇನಿಲ್ಲ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿಯಿದೆ. ಬಿಜೆಪಿ-ಆರ್.ಎಸ್.ಎಸ್. ಕೂಟದ ತಂತ್ರಗಳಿಗೆ ದೊಡ್ಡ ಪ್ರಭಾವೀ ಪತ್ರಿಕೆಗಳಿಂದ ಭಾರೀ ಪ್ರೋತ್ಸಾಹ ದೊರೆಯುತ್ತಿದೆ. ಈ ಹಿಂದೆ ವಿದೇಶಿ ಬಂಡವಾಳಕ್ಕೆ ದೇಶವನ್ನು ತೆರೆಯಬೇಕು, ಆರ್ಥಿಕ ರಂಗದಲ್ಲಿ ಭಾರತ ತನ್ನ ಸಾರ್ವಭೌಮ ಅಧಿಕಾರವನ್ನು ಬಿಟ್ಟುಕೊಡಬೇಕು ಎಂದು ಪ್ರತಿಪಾದಿಸುತ್ತಿದ್ದ ಸಂಪಾದಕರುಗಳೇ ಈಗ ಬಾಂಬ್ ತಯಾರಿಕೆಯ 'ಹೆಮ್ಮೆ'ಯ ಬಗ್ಗೆ ಮಾತನಾಡುತ್ತಾರೆ. ಬಿಜೆಪಿಯ ಎಗ್ಗಿಲ್ಲದ ಮಿಲಿಟರಿ ಶಾಹಿ ವೈಭವೀಕರಣ ಮಾಡುತ್ತಿದ್ದಾರೆ.

ಅಮೆರಿಕಾಕ್ಕೆ ಶರಣಾಗಲು ಸಿದ್ಧ!

ಅಮೆರಿಕಾ ನಿರ್ಬಂಧ ಹೇರಿದ ಬಗ್ಗೆ ಬಿಜೆಪಿ ಮುಖಂಡರು ಕೋಪೋದ್ರಿಕ್ತ ಹೇಳಿಕೆಗಳನ್ನು ನೀಡಿದ್ದಾರೆ. ಆದರೆ ಕೇವಲ ಒಂದು ತಿಂಗಳ ಹಿಂದೆ ಏನು ನಡೆಯಿತು ಎಂಬುದನ್ನು ಮರೆಯಲು ಸಾಧ್ಯವಿಲ್ಲ. ಒಂದು ತಿಂಗಳ ಹಿಂದೆ ಭಾರತಕ್ಕೆ ಬಂದಿದ್ದ ಅಮೆರಿಕದ ವಿಶೇಷ ರಾಯಭಾರಿ ಬಿಲ್ ರಿಚರ್ಡ್‌ಸನ್ 'ಒಂದು ಆಕರ್ಷಕ ಹೊಸ ಸರಕಾರ'ದ ಬಗ್ಗೆ ಹೊಗಳಿ ಹೋಗಿದ್ದರು. ನಿರ್ಬಂಧಗಳ ವಿರುದ್ಧ ಹೇಳಿಕೆಗಳು ಸ್ವಲ್ಪ ಸಮಯದಲ್ಲೇ ಬದಿಗೆ ಸರಿದು ಕ್ಲಿಂಟನ್ ಆಡಳಿತ ಮತ್ತು ವಾಜಪೇಯಿ ಸರಕಾರಗಳ ನಡುವೆ ಚೌಕಾಸಿ ಆರಂಭವಾಗಬಹುದು. ಬಿಜೆಪಿ ಸರಕಾರಕ್ಕೆ ಬೇಕಾಗಿರುವುದು ದಕ್ಷಿಣ ಏಶ್ಯಾದಲ್ಲಿ ಭಾರತ ಒಂದು ಪರಮಾಣು ಅಸ್ತ್ರ ಇರುವ ಪ್ರಧಾನ ಪ್ರಾದೇಶಿಕ ಶಕ್ತಿಯೆಂದು ಅಮೆರಿಕಾ ಒಪ್ಪಿಕೊಳ್ಳಬೇಕು - ಅದಕ್ಕೆ ಪ್ರತಿಯಾಗಿ ಭಾರತವನ್ನು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಕೊಳ್ಳೆಯ ಹಾಗೂ ಚೀಣಾ-ವಿರೋಧಿ ಧೋರಣೆಯ ನೊಗಕ್ಕೆ ದೃಢವಾಗಿ ಸಿಲುಕಿಸಿಡುವ ಗ್ಯಾರಂಟಿಯನ್ನು ಬಿಜೆಪಿ ಸರಕಾರ ಅಮೆರಿಕಕ್ಕೆ ಕೊಡಲು ಸಿದ್ಧವಿದೆ.

ನಮ್ಮ ಪ್ರದೇಶದಲ್ಲಿ ಇಂತಹ ಒಂದು ದಾರಿಯ ಪರಿಣಾಮಗಳು ಒಂದೊಂದಾಗಿ ಕಾಣಬರುತ್ತಿದೆ. ಭಾರತ-ಚೀಣಾ ಸಂಬಂಧಗಳ ಸುಧಾರಣೆಯ ಪ್ರಕ್ರಿಯೆ ಈಗ ತಿರುಗುಮುರುಗಾಗುತ್ತಿದೆ. ಇದು ಅಮೆರಿಕಕ್ಕೆ ಬಹಳ ಲಾಭಕರ ಬೆಳವಣಿಗೆ. ಪರಮಾಣು ಅಸ್ತ್ರಗಳ ಬಗ್ಗೆ ಘರ್ಷಣೆ ಕೇವಲ ತಾತ್ಕಾಲಿಕ. ಬಿಜೆಪಿ ತನ್ನ ಚೀಣಾ-ವಿರೋಧಿ ನಿಲುವಿನಿಂದಾಗಿ ಅಮೆರಿಕಾದೊಂದಿಗೆ ಒಂದು ಸಾಮರಿಕ ಸಂಬಂಧ ಬೆಳೆಸಲು ಸಿದ್ಧವಿದೆ.

ಪೋಖ್ರಾನ್ ಸ್ಫೋಟಗಳ ಸ್ವಲ್ಪವೇ ಮೊದಲು ಚೀಣಾದ ಮತ್ತು ಅಮೆರಿಕಾದ ಸೇನಾಧಿಕಾರಿಗಳ ಭೇಟಿಯ ಸಮಯದಲ್ಲಿ ಬಿಜೆಪಿ ನೇತೃತ್ವದ ಸರಕಾರದ ವರ್ತನೆಗಳು ಇದಕ್ಕೆ ಉದಾಹರಣೆಗಳು. ಮೊದಲು ಅಮೆರಿಕಾದ ಮೂರು ಪಡೆಗಳ ಸೇನಾಧಿಪತಿಯ ಭೇಟಿಯಿತ್ತು. ವಾಸ್ತವವಾಗಿ ಚೀಣಾ ಸೇನಾಧಿಪತಿಯ ಭೇಟಿಗೆ ಭಾರತ ಸರಕಾರ ಹೆಚ್ಚಿನ ಗಮನ ನೀಡಬೇಕಾಗಿತ್ತು. ಏಕೆಂದರೆ ಇದು ಭಾರತ-ಚೀಣಾ ಬಾಂಧವ್ಯ ಸುಧಾರಣೆಯ ಅಂಗವಾಗಿ ಎರಡೂ ದೇಶದ ಅತ್ಯುನ್ನತ ಮುಖಂಡರ ಪರಸ್ಪರ ಭೇಟಿಯ ಒಂದು ಅಂಗವಾಗಿತ್ತು. ಆದರೆ ಇದನ್ನು ಮೊದಲೇ ನಿರ್ಧರಿಸಿದ್ದರಿಂದ ರದ್ದು ಮಾಡಲಾಗದೇ ಬಿಜೆಪಿ ನೇತೃತ್ವದ ಸರಕಾರ ಅರೆ ಮನಸ್ಸಿನಿಂದ ಸ್ವಾಗತಿಸಿತು. ಕಮ್ಯುನಿಸ್ಟರ ವಿರುದ್ಧ ಹಲವು 'ಶೀತಲ ಯುದ್ಧಗಳ ಯೋಧ' ಫರ್ನಾಂಡೀಸ್ ಚೀಣಾ ಪಾಕಿಸ್ತಾನಕ್ಕೆ ನೆರವು ನೀಡುತ್ತಿರುವುದರಿಂದ ಭಾರತದ ಭದ್ರತೆಯ ಬಗ್ಗೆ ಉಂಟಾಗಿರುವ ಆತಂಕವನ್ನು ಚೀಣೀ ಸೇನಾಧಿಪತಿಯೊಂದಿಗೆ ವ್ಯಕ್ತಪಡಿಸಿದ್ದರಂತೆ. ಆದರೆ ಅಮೆರಿಕಾ, ಪಾಕಿಸ್ತಾನಕ್ಕೆ ನೀಡುವ ಮಿಲಿಟರಿ ನೆರವು, ಹಿಂದೂ ಮಹಾಸಾಗರ ಡಿಗೋಗಾರ್ಸಿಯಾದಲ್ಲಿ ಪರಮಾಣು ಅಸ್ತ್ರಗಳಿಂದ ಸಜ್ಜಿತ ಮಿಲಿಟರಿ ನೆಲೆ ಹೊಂದಿರುವುದರ ಬಗ್ಗೆ ಈ ಫರ್ನಾಂಡೀಸರು ಯಾವುದೇ ಆತಂಕ ವ್ಯಕ್ತಪಡಿಸಲಿಲ್ಲ. ಬದಲಿಗೆ ಅಮೆರಿಕಾದ ಸೇನಾಪತಿಗೆ ಆದರದ ಸ್ವಾಗತ!

ಅಮೆರಿಕಾದೊಂದಿಗೆ ಹೆಚ್ಚೆಚ್ಚು ಗೆಳೆತನ, ಚೀಣಾದೊಂದಿಗೆ ಹೆಚ್ಚೆಚ್ಚು ಬಿಗುಮಾನ - ಇದು ಬಿಜೆಪಿ ಸರಕಾರದ ಯೋಜನಾ ವೈಖರಿ. ಕ್ಲಿಂಟನ್‌ರಿಗೆ ವಾಜಪೇಯಿಯವರ ಗುಪ್ತ ಪತ್ರವೂ ಇದನ್ನೇ ಎತ್ತಿ ಹಿಡಿದಿದೆ.

ಸಿರಿವಂತರಿಗೆ ಆಂತರಿಕ ಭದ್ರತೆ!

ಇನ್ನು ಒಳಗೆ ದುಡಿಯುವ ಜನಗಳ ಆಂದೋಲನಗಳ ಮೇಲೆ ನೇರ ಆಕ್ರಮಣ ಈ ಮಿಲಿಟರಿ ಶಾಹಿ ಹಾಗೂ ಪರಮಾಣು ಬಾಂಬಿನ ರಾಜಕೀಯ ಬಳಕೆಯ ಆಂತರಿಕ ಪರಿಣಾಮ. ನೆರೆ ದೇಶಗಳೊಂದಿಗೆ ಬಿಗುವು ಹೆಚ್ಚಿಸಿರುವಾಗ ಮಿಲಿಟರಿ ತಯಾರಿಯ ಕರೆ ಬರುತ್ತದೆ. ಅದಕ್ಕೆ ತ್ಯಾಗ ಮಾಡಬೇಕಾದ ಕರೆ ಬರುತ್ತದೆ. ಈ ತ್ಯಾಗ ಮಾಡಬೇಕಾದವರು ಸಾಮಾನ್ಯ ಜನರು ತಾನೇ? ಆಹಾರ, ವಸತಿ, ಆರೋಗ್ಯ ಮತ್ತಿತರ ಬಾಬ್ತುಗಳಿಗೆ ದುಡ್ಡು ಕಡಿಮೆಯಾಗುತ್ತದೆ ಎಂಬ ನೆಪ. ದೊಡ್ಡ ಬಂಡವಾಳಿಗರಿಗೆ 'ದೇಶದ ಹಿತದೃಷ್ಟಿ'ಯಿಂದ ಪ್ರೋತ್ಸಾಹ ನೀಡಬೇಕು, ಅದಕ್ಕಾಗಿ ಬಡವರ ಹಿತಾಸಕ್ತಿಗಳನ್ನು ತ್ಯಾಗ ಮಾಡಬೇಕು! ಅದಕ್ಕೆ ಅಸಮಾಧಾನ ವ್ಯಕ್ತಪಡಿಸಿದರೆ, ಪ್ರತಿಭಟಿಸಿದರೆ ದಮನ-ಹೊರಗಿನ ಶತ್ರುಗಳ ವಿರುದ್ಧ ರಾಷ್ಟ್ರೀಯ ಭದ್ರತೆ, ಶ್ರೀಮಂತರಿಗೆ ಆಂತರಿಕ ಭದ್ರತೆ ಮತ್ತು ಜತೆಗೆ ಹೆಚ್ಚೆಚ್ಚು ಮಿಲಿಟರಿ ಶಾಹಿ ಅರಚಾಟದೊಂದಿಗೆ ಬಡವರ ದಮನ - ಇದು ಈ ಸರಕಾರದ ಒಂದು ಏಕೀಕೃತ ಅಜೆಂಡಾ ಆಗಲಿದೆ.

ಇದು ಸರ್ವಾಧಿಕಾರಶಾಹಿಯತ್ತ ಸಾಗುವ ದಾರಿ. ಸ್ಥಿರತೆಯ ಕೂಗಿನೊಂದಿಗೆ ರಾಜಕೀಯ ವ್ಯವಸ್ಥೆಯನ್ನು ಬದಲಿಸುವ ಕೂಗು ಎಬ್ಬಿಸಲಾಗುತ್ತಿದೆ. ಈ ಸಂದರ್ಭದಲ್ಲೇ ಅಧ್ಯಕ್ಷೀಯ ಮಾದರಿಯನ್ನು ಹೇರಿ ಒಕ್ಕೂಟವಾದವನ್ನು ಸಮಾಪ್ತಿಗೊಳಿಸುವ ಬಿಜೆಪಿ ಪ್ರಯತ್ನವೂ ನಡೆಯುತ್ತದೆ.


ಭಾರತದ ಆಳುವ ವರ್ಗಗಳಿಗೆ ಇದು ಒಂದು ಆಕರ್ಷಕ ದಾರಿಯಾಗಿ ಕಾಣುತ್ತಿದೆ. ಆಳುವ ವರ್ಗಗಳು ಅತ್ಯಂತ ಬಲಪಂಥೀಯ, ಪ್ರತಿಗಾಮೀ ಶಕ್ತಿಗಳಿಂದ ಬಿಜೆಪಿಗೆ ಇದರಲ್ಲಿ ಬೆಂಬಲ ಸಿಗುತ್ತದೆ, ಅದುವೇ ಅದರ ಶಕ್ತಿ. ಅದೇ ರೀತಿ ಅಧಿಕಾರಶಾಹಿ ಹಾಗೂ ವೈಜ್ಞಾನಿಕ-ಮಿಲಿಟರಿ ವ್ಯವಸ್ಥೆಯ ಉನ್ನತಸ್ಥಾನಗಳಲ್ಲಿರುವವರಿಂದಲೂ ಬೆಂಬಲ ಸಿಗುತ್ತದೆ.

ಆದರೂ ಬಿಜೆಪಿಯ ದಾರಿ ಅಷ್ಟೇನೂ ಸುಗಮವಲ್ಲ. ಈ ಎಲ್ಲಾ ನೀತಿಗಳಿಂದ ತಮ್ಮ ಬದುಕು ಹದಗೆಡುತ್ತಿರುವುದನ್ನು ಕಾಣುವ ಜನಸಾಮಾನ್ಯರು ಸುಮ್ಮನೆ ಕೂರಲಾಗುವುದಿಲ್ಲ. ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ಹಿನ್ನೆಲೆಯಲ್ಲಿ ವಾಜಪೇಯಿ ಸರಕಾರದ ಎಲ್ಲ ನೀತಿಗಳ ವಿರುದ್ಧ ಹೋರಾಟ ನಡೆಸುತ್ತಾರೆ. ಕ್ರಮೇಣ ಪರಮಾಣು ಧೋರಣೆಯ ದುಷ್ಪರಿಣಾಮಗಳು ಒಂದೊಂದಾಗಿ ಪ್ರಕಟವಾಗುತ್ತಿದ್ದಂತೆ ಅದನ್ನು ಬೆಂಬಲಿಸಿದ ಬೂರ್ಜ್ವಾ ಪಕ್ಷಗಳು, ಮಧ್ಯಮ ವರ್ಗಗಳ ಜನಗಳೂ ವಿರೋಧ ನಿಲುವು ತಳೆಯಲಾರಂಭಿಸುತ್ತಾರೆ. ಹೀಗೆ ಪರಮಾಣು ಧೋರಣೆಯ ಸುತ್ತ ಬಿಜೆಪಿ ನಿರ್ಮಿಸಬೇಕೆಂದಿರುವ ಆಳುವ ವರ್ಗಗಳ ಐಕ್ಯತೆ ಬಹಳ ದಿನ ಉಳಿಯಲಾರದು.

ಸರಿಯಾದ ನೀತಿ ಯಾವುದು?

ಶಾಂತಿ ಮತ್ತು ಅಲಿಪ್ತತೆಗೆ ಬದ್ಧವಾದ ಸ್ವತಂತ್ರ ವಿದೇಶಾಂಗ ನೀತಿಯ ಜತೆಗೆ ಅನುಸರಿಸುವ, ಪರಮಾಣು ಶಸ್ತ್ರೀಕರಣಕ್ಕೆ ಹೋಗದ ಒಂದು ಪರಮಾಣು ನೀತಿಯೇ ಭಾರತ ದೇಶದ ಅಗತ್ಯಗಳನ್ನು ಪೂರೈಸಬಲ್ಲ ಸರಿಯಾದ ನೀತಿಯಾಗಬಲ್ಲದು. ಪೋಖ್ರಾನ್ ಪರೀಕ್ಷಣೆಗಳ ನಂತರವೂ ಕೆಲವು ರಾಜಕೀಯ ನಿರ್ಧಾರಗಳಿಗೆ ಬರಲು ಸಾಧ್ಯ- ಮೊದಲನೆಯದಾಗಿ, ಭಾರತ ಪರಮಾಣು ಅಸ್ತ್ರಗಳನ್ನು ತಯಾರಿಸುವುದಿಲ್ಲ, ನೆಲೆಗೊಳಿಸುವುದಿಲ್ಲ; ಎರಡನೆಯದಾಗಿ, ಎನ್.ಪಿ.ಟಿ., ಸಿಟಿಬಿಟಿಗಳಂತಹ ಪಕ್ಷಪಾತಪೂರ್ಣ ಸಂಧಿಗಳಿಗೆ ಸಹಿ ಹಾಕಲು ನಿರಾಕರಿಸುತ್ತಲೇ ಅವುಗಳ ಮರುಪರಿಶೀಲನೆಗಾಗಿ, ಈ ಮೂಲಕ ಸಾರ್ವತ್ರಿಕ ಪರಮಾಣು ನಿಶ್ಶಸ್ತ್ರೀಕರಣದತ್ತ ಸಾಗಲು ಒಂದು ನೈಜ ತಳಹದಿ ಏರ್ಪಡುವಂತೆ ಮಾಡಲು ಜಾಗತಿಕ ಪ್ರಚಾರ-ಪ್ರಕ್ಷೋಭೆ ನಡೆಸುವುದು ಅದುವರೆಗೆ ಭಾರತ ಸತತವಾಗಿ ತನ್ನ ಚಾರಿತ್ರಿಕ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಿಕೊಳ್ಳುತ್ತಾ ಪರಮಾಣು ಆಯ್ಕೆಯನ್ನು ತೆರೆದಿಡುವುದು.

ಮಿಲಿಟರಿಶಾಹಿ ಮತ್ತು ಕೋಮುವಾದಿ ರಾಷ್ಟ್ರಾಂಧತೆಯನ್ನು ನಿರಂತರವಾಗಿ ವಿರೋಧಿಸುವ ಎಡಪಕ್ಷಗಳು ಇತರ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಮಿತ್ರ ಪಕ್ಷಗಳನ್ನು ಅಣಿನೆರೆಸಬೇಕಾಗಿದೆ. ಕೋಮುವಾದಿ - ರಾಷ್ಟ್ರಾಂಧ - ಉದಾರೀಕರಣವಾದಿ ಆಕ್ರಮಣವನ್ನು ಎದುರಿಸುವ ಎಲ್ಲಾ ರೀತಿಯ ಚಟುವಟಿಕೆಗಳ ಮೂಲಕ ಸಾಧ್ಯವಾದಷ್ಟು ವ್ಯಾಪಕ ಐಕ್ಯತೆಯನ್ನು ಮೂಡಿಸಬೇಕು. ಎಲ್ಲಾ ಮೂರು ರಂಗಗಳಲ್ಲೂ ಅಣಿನೆರೆಸಬಹುದಾದ ಶಕ್ತಿಗಳಿವೆ. ಪರಮಾಣು-ಮಿಲಿಟರಿ ಧೋರಣೆಯ ವಿಷಯದಲ್ಲಿ ಹೇಳುವುದಾದರೆ ಭಾರತ ಶಸ್ತ್ರಾಸ್ತ್ರ ಪೈಪೋಟಿಯಲ್ಲಿ ಸಿಲುಕಿಕೊಳ್ಳಬಾರದು, ನೆರೆದೇಶಗಳೊಂದಿಗೆ ಮಾತಿನ ಚಕಮಕಿಯಲ್ಲಿ ಸಿಲುಕಿಕೊಳ್ಳಬಾರದು ಎಂದು ಬಯಸುವ ಹಲವಾರು ದೇಶಪ್ರೇಮಿಗಳಿದ್ದಾರೆ. ಇನ್ನು ಕೋಮುವಾದದ ಬಗ್ಗೆ ಹೇಳುವುದಾದರೆ ಧರ್ಮನಿರಪೇಕ್ಷ ಭಾವನೆಯ ನಾಗರಿಕರು ಹಾಗೂ ಶಕ್ತಿಗಳನ್ನು ಒಟ್ಟು ಸೇರಿಸಲು ಸಾಧ್ಯವಾದಷ್ಟೂ ವ್ಯಾಪಕ ಐಕ್ಯತೆ ತರಲು ಸಾಧ್ಯ. ಕೊನೆಯದಾಗಿ ಉದಾರೀಕರಣದ ವಲಯದಲ್ಲೂ ಆರ್ಥಿಕ ನಿರ್ಬಂಧಗಳನ್ನು ಎದುರಿಸುವ ನೆಪದಲ್ಲಿ ಉದಾರೀಕರಣವನ್ನು ತೀವ್ರಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಹಿಂದೆಂದಿಗಿಂತಲೂ ದೊಡ್ಡ ಪ್ರಮಾಣದಲ್ಲಿ ದುಡಿಯುವ ಜನಗಳನ್ನು ಅಣಿನೆರೆಸಲು ಸಾಧ್ಯ. ಪ್ರತಿರೋಧದ, ಐಕ್ಯ ಪ್ರತಿಭಟನೆಯ ಈ ಮೂರು ಪ್ರವಾಹಗಳು ಸೇರಿ ಬಿಜೆಪಿ-ಆರ್.ಎಸ್.ಎಸ್. ಆಟವನ್ನು ವಿಫಲಗೊಳಿಸಲು ಸಾಧ್ಯ.



ಪಾಕಿಸ್ತಾನೀ ಪರಮಾಣು ಪರೀಕ್ಷಣೆ
ಇದರಿಂದ ಬಿಜೆಪಿ ಧೋರಣೆಯ ಸಮರ್ಥನೆಯಾಗದು
ಸಿಪಿಐ(ಎಂ) ಪೊಲಿಟ್‌ಬ್ಯೂರೋ

ಪೋಖ್ರಾನ್‌ನಲ್ಲಿ ಭಾರತದ ಅಣು ಪರೀಕ್ಷಣೆಗಳಿಗೆ ಪ್ರತಿಯಾಗಿ ಪಾಕಿಸ್ತಾನ ಛಗ್ಯಾ ಬೆಟ್ಟಗಳಲ್ಲಿ ಐದು ಪರೀಕ್ಷಣೆಗಳನ್ನು ನಡೆಸಿದೆ. ಇದು ಪ್ರಧಾನ ಮಂತ್ರಿಗಳು ಹೇಳಿಕೊಂಡಿರುವಂತೆ ಬಿಜೆಪಿ ನೇತೃತ್ವದ ಸರಕಾರ ಅಂಗೀಕರಿಸಿದ ಧೋರಣೆಯನ್ನೇನೂ ಸಮರ್ಥಿಸುವುದಿಲ್ಲ. ಅದರ ಬದಲು ಭಾರತದ ದೀರ್ಘಕಾಲದ ಪರಮಾಣು ಧೋರಣೆಯನ್ನು ಬದಲಿಸಿದ್ದು ಹೇಗೆ ತಪ್ಪು ಎಂಬುದನ್ನು ಅನಿವಾರ್ಯವಾಗಿಯೇ ಇದು ದೃಢಪಡಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ನಮ್ಮ ನೆರೆಯವರೊಂದಿಗೆ ಉತ್ತಮ ಸಂಬಂಧಗಳನ್ನು ಬೆಳೆಸುವಲ್ಲಿ, ಈ ಪ್ರದೇಶದಲ್ಲಿ ಶಾಂತಿ ತರುವಲ್ಲಿ ಆಗಿರುವ ಪ್ರಗತಿಯನ್ನು ಈ ಧೋರಣೆ ಇಲ್ಲವಾಗಿಸಿದೆ. ವಾಜಪೇಯಿ ಸರಕಾರದ ಮಂದದೃಷ್ಟಿಯ ಕ್ರಮ ಹಾಗೂ ಅದಕ್ಕೆ ಪಾಕಿಸ್ತಾನೀ ಸರಕಾರದ ಪ್ರತಿಕ್ರಿಯೆ ನಮ್ಮ ಉಪಖಂಡದಲ್ಲಿ ಹಂತ-ಹಂತವಾಗಿ ಪರಮಾಣು ಶಸ್ತ್ರಾಸ್ತ್ರ ಪೈಪೋಟಿಯನ್ನು ಹೆಚ್ಚಿಸಿ, ಅದರ ಜತೆಗೆ ಅನಿವಾರ್ಯವಾಗಿ ಬರುವ ಬಿಗುವುಗಳನ್ನು ಹೆಚ್ಚಿಸಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಇಂತಹ ಒಂದು ದಾರಿ ಎರಡೂ ದೇಶಗಳ ಜನಗಳಿಗೆ ಕೇಡು ತರುವ ದಾರಿ. ಏಕೆಂದರೆ ಅದು ಭಾರತ ಮತ್ತು ಪಾಕಿಸ್ತಾನ ಎರಡನ್ನೂ ಕಿತ್ತು ತಿನ್ನುತ್ತಿರುವ ಬಡತನ, ಅಭಿವೃದ್ಧಿಯ ಬೃಹತ್ ಸಮಸ್ಯೆಗಳಿಂದ ಗಮನವನ್ನು ಹಾಗೂ ಸಂಪನ್ಮೂಲಗಳನ್ನು ಬೇರೆಡೆಗೆ ತಿರುಗಿಸುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅತ್ಯಲ್ಪ ಬಹುಮತವಿರುವ ಬಿಜೆಪಿ ಸರಕಾರ ಭಾರತದ ಇದುವರೆಗಿನ ಸರಿಯಾದ ವಿದೇಶಿ ಹಾಗೂ ಪರಮಾಣು ಧೋರಣೆಗಳನ್ನು ಬುಡಮೇಲು ಮಾಡಿದರೆ, ಅತ್ತ ಇನ್ನೂ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿರುವ ಪಾಕಿಸ್ತಾನೀ ಸರಕಾರಕ್ಕೆ ಜನಗಳ ಗಮನವನ್ನು ಬೇರೆಡೆಗೆ ತಿರುಗಿಸಲು ಇದು ಅನುಕೂಲ ಮಾಡಿಕೊಟ್ಟಿದೆ ಎಂದು ಹೇಳಿದೆ. ಎರಡೂ ದೇಶಗಳ ನಡುವಿನ ಬಿಗುವನ್ನು ಉದ್ರೇಕಿಸುವ ಯಾವುದೇ ಪ್ರಯತ್ನ ಎರಡೂ ದೇಶಗಳ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯ ಆಶಯಗಳಿಗೆ ತಡೆಯುಂಟು ಮಾಡುತ್ತದೆ.

ರಾಷ್ಟ್ರೀಯ ಒಮ್ಮತ ಹೇಗೆ ಸಾಧ್ಯ?

ವಾಜಪೇಯಿ ಸರಕಾರ ಪರಮಾಣು ಶಸ್ತ್ರಾಸ್ತ್ರಗಳಂತಹ ಸೂಕ್ಷ್ಮ ವಿಷಯದ ಮೇಲೆ ರಾಷ್ಟ್ರೀಯ ಭಾವೋದ್ರೇಕವನ್ನು ಎಬ್ಬಿಸಲು ಪ್ರಯತ್ನಿಸಬಾರದು ಎಂದು ಸಿಪಿಐ(ಎಂ) ಹೇಳಿದೆ. ಬಿಗುವನ್ನು ಇಳಿಸಲು ಅದು ಪಾಕಿಸ್ತಾನೀ ಸರಕಾರದೊಂದಿಗೆ ತಕ್ಷಣ ಮಾತುಕತೆ ಆರಂಭಿಸಬೇಕು. ಈ ವಿಷಯದಲ್ಲಿ ರಾಷ್ಟ್ರೀಯ ಒಮ್ಮತ ವಿಕಾಸಗೊಳ್ಳಲು ಸಾಧ್ಯವಾಗಬಹುದಾದ ಆಧಾರದ ಬಗ್ಗೆ ಸಿಪಿಐ(ಎಂ) ಹಾಗೂ ಸಿಪಿಐನ ವಿಚಾರಗಳನ್ನು ಪೊಲಿಟ್‌ಬ್ಯೂರೋ ಹೇಳಿಕೆ ಈ ರೀತಿ ಸ್ಪಷ್ಟಪಡಿಸಿದೆ. 1. ಭಾರತ ಶಸ್ತ್ರಾಸ್ತ್ರೀಕರಣದತ್ತ ಹೋಗಬಾರದು. ವಾಜಪೇಯಿ ಸರಕಾರ ಪರಮಾಣು ಶಸ್ತ್ರಾಸ್ತ್ರಗಳನ್ನು ತಯಾರಿಸಬಾರದು ಅಥವಾ ನೆಲೆಗೊಳಿಸಬಾರದು. 2. ಪರಮಾಣು ಶಸ್ತ್ರಗಳನ್ನು ಮೊದಲು ಬಳಸುವುದಿಲ್ಲ ಎಂದು ಸರಕಾರ ತಕ್ಷಣ ಘೋಷಿಸಬೇಕು 3. ಸಿಟಿಬಿಟಿ ಸಹಿ ಹಾಕುವತ್ತ ಭಾರತ ಸಾಗಬಾರದು 4. ಸಾರ್ವತ್ರಿಕ ಪರಮಾಣು ನಿಶ್ಶಸ್ತ್ರೀಕರಣದತ್ತ ಪ್ರಯತ್ನಗಳನ್ನು ಭಾರತ ತೀವ್ರಗೊಳಿಸಬೇಕು. 5. ಪೋಖ್ರಾನ್ ಪರೀಕ್ಷಣೆಯ ನಂತರದ ಅವಧಿಯಲ್ಲಿ ಏನು ಮಾಡಬೇಕು ಎಂಬ ಬಗ್ಗೆ ಎಲ್ಲಾ ರಾಷ್ಟ್ರೀಯ ರಾಜಕೀಯ ಪಕ್ಷಗಳೊಂದಿಗೆ ಚರ್ಚಿಸಿ ಒಂದು ಸಮಾನ ನಿಲುವನ್ನು ರೂಪೀಕರಿಸಬೇಕು.

ಪಶ್ಚಿಮ ಬಂಗಾಳ ಪಂಚಾಯತು ಚುನಾವಣೆಗಳಲ್ಲಿ ಜಯಭೇರಿ

ಪಶ್ಚಿಮ ಬಂಗಾಳದ ಪಂಚಾಯತು ಚುನಾವಣೆಗಳ ಫಲಿತಾಂಶ ತೃಣಮೂಲ-ಕಾಂಗ್ರೆಸ್-ಬಿಜೆಪಿ ಕೂಟದ ಅಬ್ಬರದಿಂದಾಗಿ ಇಡೀ ದೇಶದ ಗಮನ ಸೆಳೆದಿತ್ತು. ಈಗಿನ ಕಾಲಘಟ್ಟದಲ್ಲಿ ಎಡರಂಗ ಸಾಧಿಸಿರುವ ಮಹತ್ವದ ಜಯಭೇರಿ, ಈಗ ದೇಶಾದ್ಯಂತ ಎಡ, ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳಿಗೆ ಹೊಸ ಹುಮ್ಮಸ್ಸು ತುಂಬಿದೆ ಎನ್ನುತ್ತಾರೆ ಹಿರಿಯ ಸಿಪಿಐ(ಎಂ) ಮುಖಂಡ

ಸೂರ್ಯಕಾಂತ್ ಮಿಶ್ರಾ

ಈ ಚುನಾವಣೆಯ ನಂತರ ಬಿಜೆಪಿ ನೇತೃತ್ವದ ಕೇಂದ್ರ ಸರಕಾರಕ್ಕೆ ತೃಣಮೂಲ ಕಾಂಗ್ರೆಸ್ ತನ್ನ ಬೆಂಬಲವನ್ನು 'ಸಸ್ಪೆಂಡ್' ಮಾಡಿದೆ.



21 ವರ್ಷಗಳಲ್ಲಿ 21 ವಿಜಯ !

ಪಶ್ಚಿಮಬಂಗಾಳ ರಾಜ್ಯದಲ್ಲಿ ಮೇ 28ರಂದು ಮೂರು ಹಂತಗಳ ಪಂಚಾಯತೀ ರಾಜ್ಯ ಸಂಸ್ಥೆಗಳಿಗೆ ಐದನೇ ಸಾರ್ವತ್ರಿಕ ಚುನಾವಣೆಗಳು ನಡೆದವು. ಕಳೆದ ಎರಡು ದಶಕಗಳಲ್ಲಿ ನಿಯಮಿತವಾಗಿ ಪಂಚಾಯತೀ ಚುನಾವಣೆಗಳನ್ನು ನಡೆಸಿದ ಏಕೈಕ ರಾಜ್ಯ ಪಶ್ಚಿಮಬಂಗಾಳ.

ಇದುವರೆಗೆ ದೊರೆತ ಫಲಿತಾಂಶಗಳ ಪ್ರಕಾರ ಎಡರಂಗ ಎಲ್ಲಾ ಮೂರು ಹಂತಗಳಲ್ಲಿ ಪ್ರಚಂಡ ಜಯಗಳಿಸಿದೆ. ಇವುಗಳಲ್ಲಿ ಗ್ರಾಮಪಂಚಾಯತ್ ಸ್ಥಾನಗಳಲ್ಲಿ ಎಡರಂಗ ಶೇ 56, ಪಂಚಾಯತ್ ಸಮಿತಿ ಸ್ಥಾನಗಳಲ್ಲಿ ಶೇ. 67 ಹಾಗೂ ಜಿಲ್ಲಾ ಪರಿಷತ್ ಸ್ಥಾನಗಳಲ್ಲಿ ಶೇ. 89.8 ಪಡೆದಿದೆ. ಜಿಲ್ಲಾ ಪರಿಷತ್ ಮಟ್ಟದಲ್ಲಿ ಈ ಬಾರಿಯ ಫಲಿತಾಂಶ ನಾಲ್ಕು ಪಂಚಾಯತ್ ಚುನಾವಣೆಗಳಿಗೆ ಹೋಲಿಸಿದರೆ ಅತ್ಯುತ್ತಮವಾಗಿದೆ. ಆದರೆ ಗ್ರಾಮಪಂಚಾಯತಿ ಮತ್ತು ಪಂಚಾಯತು ಸಮಿತಿ ಮಟ್ಟದಲ್ಲಿ ಸ್ವಲ್ಪ ಇಳಿಮುಖವಾಗಿದೆ. ಪಂಚಾಯತಿ ಸಮಿತಿ ಮಟ್ಟದಲ್ಲಿ ಕೂಡಾ ಈ ಬಾರಿಯ ಫಲಿತಾಂಶ 1983ಕ್ಕಿಂತ ಉತ್ತಮವಾಗಿದೆ.

ಪೂರ್ಣ ಫಲಿತಾಂಶ ಬಂದ ಮೇಲಷ್ಟೆ ಚುನಾವಣೆ ಫಲಿತಾಂಶಗಳ ವಿಶ್ಲೇಷಣೆ ಸಾಧ್ಯವಾದರೂ, ಈಗಿನ ಗಂಭೀರ ಕಾಲಘಟ್ಟದಲ್ಲಿ ಪಶ್ಚಿಮ ಬಂಗಾಳದಲ್ಲಿ ಎಡರಂಗ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳ ಪ್ರಚಂಡ ವಿಜಯದ ಮಹತ್ವವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ತೃಣಮೂಲ-ಬಿ.ಜೆ.ಪಿ. ಕೂಟ ನಿರ್ದಿಷ್ಟವಾಗಿ ಸಿ.ಪಿ.ಐ.(ಎಂ) ಮತ್ತು ಒಟ್ಟಾರೆಯಾಗಿ ಎಡರಂಗದ ಮೇಲೆ ವಿಷ ಉಗುಳುವ ಪ್ರಚಾರ ನಡೆಸಿದರೂ, ಪಶ್ಚಿಮಬಂಗಾಳದ ಜನ ಎಡರಂಗದ ಪರವಾಗಿ ಒಂದು ಸ್ಪಷ್ಟ, ಸಕಾರಾತ್ಮಕ ಜನಾದೇಶ ನೀಡಿದ್ದಾರೆ. ತೃಣಮೂಲ- ಬಿ.ಜೆ.ಪಿ.ಯ ಬಾಲ ಹಿಡಿಯುವ ನೀತಿ ಬಾಹಿರ ಪತ್ರಕರ್ತರಿಗೆ ಇದು ಎಲ್ಲಿಲ್ಲದ ನಿರಾಸೆ ತಂದಿದೆ. ಎಡರಂಗ ಪಶ್ಚಿಮ ಬಂಗಾಳದಲ್ಲಿ 1977ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಕಳೆದ 21 ವರ್ಷಗಳಲ್ಲಿ 21 ಚುನಾವಣೆಗಳು ನಡೆದಿವೆ. ಲೋಕಸಭೆಗೆ 7, ರಾಜ್ಯ ವಿಧಾನಸಭೆಗೆ 5, ಮುನಿಸಪಲ್ ಸಂಸ್ಥೆಗಳಿಗೆ 4, ಹಾಗೂ ಪಂಚಾಯತೀ ರಾಜ್ಯ ಸಂಸ್ಥೆಗಳಿಗೆ 5. ಈ 21 ವರ್ಷಗಳಲ್ಲಿ 21ನೇ ಬಾರಿಗೆ ಜನತೆಯ ಶತ್ರುಗಳನ್ನು ನಿರ್ಣಾಯಕವಾಗಿ ಸೋಲಿಸಲಾಗಿದೆ.

ಬಲಪ್ರತಿಗಾಮಿ ಪಾಳೆಯದ ಬಾಡಿಗೆ ಪಂಡಿತರು ತಮ್ಮ ಲೆಕ್ಕಾಚಾರ ಎಲ್ಲಿ ತಪ್ಪಿತು ಎಂದು ತಲೆಕೆರೆದುಕೊಳ್ಳುತ್ತಿದ್ದಾರೆ. ತಮ್ಮ ಯಜಮಾನರನ್ನು ಸಂತೈಸಲು ಸೂಕ್ತ ವ್ಯಾಖ್ಯೆಗಳ ಹುಡುಕಾಟದಲ್ಲಿದ್ದಾರೆ. 'ಅಧಿಕಾರಸ್ಥ-ವಿರೋಧಿ' ಅಂಶ ಪಶ್ಚಿಮ ಬಂಗಾಳದಲ್ಲೇಕೆ ಕೆಲಸ ಮಾಡುತ್ತಿಲ್ಲ ಎಂದು ಅವರಿಗೆ ತಿಳಿಯುತ್ತಿಲ್ಲ.

ಕಳೆದ ಎರಡು ದಶಕಗಳಲ್ಲಿ ಮೊದಲ ಬಾರಿಗೆ ಎಡ-ವಿರೋಧಿ ಶಕ್ತಿಗಳೆಲ್ಲಾ ಕೈ ಮಿಲಾಯಿಸಿ ನಿರ್ದಿಷ್ಟವಾಗಿ ಸಿ.ಪಿ.ಐ.(ಎಂ) ಹಾಗೂ ಒಟ್ಟಾರೆಯಾಗಿ ಎಡರಂಗದ ವಿರುದ್ಧ ಒಂದು ಬಲಿಷ್ಠ ಕೂಟವನ್ನು ನಿಲ್ಲಿಸಿದ್ದರು. ತೃಣಮೂಲ-ಬಿ.ಜೆ.ಪಿ. ಕೂಟ ಈ ಎಲ್ಲಾ ಶಕ್ತಿಗಳನ್ನು ಒಟ್ಟುಗೂಡಿಸಲು ಮುಸ್ಲಿಂ ಲೀಗ್, ಝಾರ್ಖಂಡ್, ಎಸ್.ಯು.ಸಿ.ಐ., ಕೆಲವು ಕಡೆ ಕಾಂಗ್ರೆಸನ್ನು ಕೂಡಾ ಈ ಕೂಟದಲ್ಲಿ ಸೇರಿಸಿಕೊಳ್ಳಲು ಹಿಂಜರಿಯಲಿಲ್ಲ. ಜಾರ್ಜ್ ಫರ್ನಾಂಡೀಸ್ ಕೂಡಾ ಚುನಾವಣೆಯ ಪ್ರಚಾರದ ಕೊನೆಯ ವೇಳೆಗೆ ಈ ತಂಡದಲ್ಲಿ ಸೇರಿದ್ದರು. ಎಲ್ಲಾ ಸಮಾಜಘಾತುಕ ಶಕ್ತಿಗಳನ್ನು ಒಟ್ಟು ಸೇರಿಸಿ ಅವರಿಗೆ ಶಸ್ತ್ರಗಳನ್ನು ಒದಗಿಸಿ ಕೊಡಲಾಯಿತು; ಈ ಕ್ರಿಮಿನಲ್‌ಗಳ ಕೊಲೆಯಾಟದಲ್ಲಿ ಅವರನ್ನು ಬೆಂಬಲಿಸಲು ಪೋಲೀಸ್ ಪಡೆಯ ಮತ್ತು ಆಡಳಿತದ ಇತರ ವಲಯಗಳ ಒಂದು ವಿಭಾಗಕ್ಕೆ ಆಮಿಷವನ್ನೊಡ್ಡಿ ಸೆಳೆದುಕೊಂಡು 27 ಸಿ.ಪಿ.ಐ.(ಎಂ) ಸಂಗಾತಿಗಳ ಬಲಿ ಪಡೆಯಲಾಯಿತು. ಆದರೆ ಸಿ.ಪಿ.ಐ.(ಎಂ) ವಿರೋಧಿ ಪತ್ರಿಕಾ ವಲಯ ಇದಕ್ಕೆಲ್ಲಾ ಸಿ.ಪಿ.ಐ.(ಎಂ)ನ್ನೇ ಹೊಣೆ ಮಾಡಿತು. ತೃಣಮೂಲ ಕಾಂಗ್ರೆಸ್‌ನ ಒಬ್ಬ ಮಹಿಳಾ ಅಭ್ಯರ್ಥಿಯ ಮಾನಭಂಗ ಮಾಡಲಾಯಿತು ಎಂದು ಅವು ಬರೆದವು. ಆದರೆ ಜನ ನಂಬಲಿಲ್ಲ. ಸಿ.ಪಿ.ಐ.(ಎಂ)ನಿಂದ ಆ ಸ್ಥಾನ ಕಸಿದುಕೊಳ್ಳಲು ಆಗಲಿಲ್ಲ. ವಾತಾವರಣವನ್ನು ಹದಗೆಡಿಸುವ ಹತಾಶ ಪ್ರಯತ್ನದಲ್ಲಿ ಚುನಾವಣೆಯ ಕೇವಲ ಮೂರು ದಿನಗಳ ಮೊದಲು ಬಂದ್ ಕರೆ ನೀಡಿ, ಚುನಾವಣೆ ಪಕ್ರಿಯೆಯನ್ನು ತಡೆಯಲು ಕೋರ್ಟುಗಳಲ್ಲಿ ಹಲವು ಹತ್ತು ಕೇಸುಗಳನ್ನು ಹಾಕಿದರೂ ಪ್ರಯೋಜನವಾಗಲಿಲ್ಲ.

ಈ ರಾಜ್ಯ ಹಿಂದೆಂದೂ ಇಂತಹ ಹಣಬಲ ಮತ್ತು ಭುಜಬಲದ ನಗ್ನ ಪ್ರದರ್ಶನ ಕಂಡಿರಲಿಲ್ಲ. ರಾಜ್ಯ ಸರಕಾರ ಕೇಂದ್ರದಿಂದ 70 ಅರೆ ಸೈನಿಕ ಕಂಪನಿಗಳನ್ನು ಕೇಳಿತ್ತು. ಆದರೆ ಕಳಿಸಿದ್ದು ಕೇವಲ 25, ಅದೂ ಚುನಾವಣೆಯ ಎರಡು ದಿನಗಳ ಮೊದಲಷ್ಟೆ. ಈ ಅಲ್ಪ ಬೆಂಬಲವನ್ನು ಮತಎಣಿಕೆ ಮುಗಿಸುವ ಮೊದಲೇ ಹಿಂತೆಗೆದುಕೊಳ್ಳಲಾಯಿತು. ಮತ್ತೆ - ಮತ್ತೆ ರಾಜ್ಯದಲ್ಲಿ ಕೇಂದ್ರದ ಮಧ್ಯಪ್ರವೇಶವಾಗಬೇಕೆಂದು ಪ್ರಯತ್ನಿಸುತ್ತಿರುವ ತೃಣಮೂಲ - ಬಿ.ಜೆ.ಪಿ. ಕೂಟಕ್ಕೆ ಈ ವಿಷಯದಲ್ಲಿ ರಾಜ್ಯಕ್ಕೆ ನೆರವಾಗವು ಅಗತ್ಯವಿದೆ ಎಂದು ಕೇಂದ್ರದಲ್ಲಿನ ತಮ್ಮ ಸರಕಾರಕ್ಕೆ ಅರಿವು ಮಾಡಿಕೊಡಲು ಸಾಧ್ಯವಾಗಲಿಲ್ಲ.

ಪೋಖ್ರಾನ್ ಸ್ಫೋಟಗಳನ್ನು ಬಳಸಿ ಮತದಾರರಲ್ಲಿ ಸಂಕುಚಿತ ಭಾವನೆ ಎಬ್ಬಿಸಲೂ ಪ್ರಯತ್ನಿಸಲಾಯಿತು. ಪಿ.ಎಲ್. ಅಕೌಂಟ್ 'ಅವ್ಯವಹಾರ'ದ ಹಳೆಯ ಕಥೆಗಳು, ಮತ್ತಿತರ ಹಲವು ರೀತಿಯಲ್ಲಿ ಗೋಬೆಲ್ಸ್ ಅಪಪ್ರಚಾರ ಹೆಚ್ಚಿನ ಪ್ರಮುಖ ಪತ್ರಿಕೆಗಳ ಕಾಲಂಗಳಲ್ಲಿ ತುಂಬಿ ಹೋದವು. ಮಿಸ್ ಮಮತಾ ಬ್ಯಾನರ್ಜಿ ರಾಜ್ಯದ ಮುಂದಿನ ಮುಖ್ಯಮಂತ್ರಿ ಎಂದು ಅತ್ಯಂತ ನಾಚಿಕೆ ಹೀನ ರೀತಿಯಲ್ಲಿ ಬಿಂಬಿಸುವ ಪ್ರಯತ್ನ ನಡೆಯಿತು. ಆದರೂ ಎಡರಂಗದ ಪ್ರಾಬಲ್ಯವನ್ನು ಧ್ವಂಸ ಮಾಡುವ ಪ್ರಯತ್ನಗಳೆಲ್ಲವೂ ವಿಫಲಗೊಂಡವು.

ಕಳೆದ ಲೋಕಸಭಾ ಚುನಾವಣೆಗಳಲ್ಲಿ ರಾಜ್ಯದಲ್ಲಿ ಮೊದಲ ಬಾರಿಗೆ ಖಾತೆ ತೆರೆದ ಬಿ.ಜೆ.ಪಿ 672 ಘೋಷಿತ ಜಿಲ್ಲಾ ಪರಿಷತ್ ಸ್ಥಾನಗಳಲ್ಲಿ ಕೇವಲ ಒಂದು ಸ್ಥಾನದಿಂದಲೇ ತೃಪ್ತಿಪಟ್ಟಕೊಳ್ಳಬೇಕಾಯಿತು. ಕಳೆದ ಚುನಾವಣೆಗಳಲ್ಲಿ ಭಾರೀ ಪರಾಭವ ಉಂಡ ಕಾಂಗ್ರೆಸ್ ಕೂಡಾ ಇದಕ್ಕಿಂತ ಎಷ್ಟೋ ಉತ್ತಮ ಪ್ರದರ್ಶನ ನೀಡಿದೆ. ತೃಣಮೂಲ ಕಾಂಗ್ರೆಸ್‌ಗೆ ಜಿಲ್ಲಾ ಪರಿಷತ್ ಸ್ಥಾನಗಳಲ್ಲಿ ಶೇ. 5 ಕೂಡಾ ಸಿಕ್ಕಿಲ್ಲ.

ಹೀಗೆ ಎಡರಂಗ ಸುಮಾರು 65% ಗ್ರಾಮಪಂಚಾಯತುಗಳಲ್ಲಿ 89% ಪಂಚಾಯತು ಸಮಿತಿಗಳು, ಹಾಗೂ 16 ಜಿಲ್ಲಾ ಪರಿಷತ್‌ಗಳಲ್ಲಿ ಸ್ಪಷ್ಟ ಬಹುಮತ ಪಡೆದಿದೆ. ವಿವಿಧ ಪಕ್ಷಗಳು, ಕೂಟಗಳು ಪಡೆದ ಮತಗಳ ಶೇಕಡವಾರು ಇನ್ನೂ ಸಿಕ್ಕಿಲ್ಲ. ಆದರೆ ಈ ಫಲಿತಾಂಶಗಳಿಂದ ಸಂತೃಪ್ತರಾಗುವಂತೆಯೂ ಇಲ್ಲ. ಸ್ಥಾನಗಳ ಶೇಕಡವಾರು ಗಮನಿಸಿದರೆ ಅತಿ ಕೆಳಗಿನ ಹಂತವಾದ ಪಂಚಾಯತುಗಳಲ್ಲಿ ಸ್ವಲ್ಪ ಇಳಿಮುಖವಾಗಿದೆ. ಈ ಬಾರಿ ಎಡರಂಗದ ಅಂಗ ಪಕ್ಷಗಳಲ್ಲಿ ಸರ್ವವ್ಯಾಪೀ ಐಕ್ಯತೆ ತರುವಲ್ಲಿ ಕೆಲವು ಸಮಸ್ಯೆಗಳಿದ್ದವು. ಇದರಿಂದ ಎಡಮತಗಳು ಹಂಚಿ ಹೋದವು. ಅಭಿವೃದ್ಧಿ ಕಾರ್ಯಗಳಲ್ಲಿ ಜನರ ಒಳಗೊಳ್ಳುವಿಕೆ, ಪಾರದರ್ಶಕತೆ ಕಾರ್ಯಶೈಲಿಯ ಸಮಸ್ಯೆಗಳು ಇನ್ನೂ ಉಳಿದಿವೆ. ಇವೆಲ್ಲದರ ಒಂದು ಆಮೂಲಾಗ್ರ ವಿಮರ್ಶೆ ನಡೆಸಿ ಸೂಕ್ತ ಪಾಠ ಕಲಿಯಬೇಕಾಗಿದೆ. ಸಿ.ಪಿ.ಐ.(ಎಂ) ಮತ್ತು ಎಡರಂಗಕ್ಕೆ ಇದರ ಪೂರ್ಣ ಅರಿವಿದೆ. ಅದೇನೇ ಇರಲಿ, ಎಡರಂಗ ಪಶ್ಚಿಮ ಬಂಗಾಳಗಳಲ್ಲಿ ಗಳಿಸಿದ ಈ ಮಹತ್ವದ ವಿಜಯ ದೇಶಾದ್ಯಂತ ಎಡ ಪ್ರಜಾಪ್ರಭುತ್ವವಾದೀ, ಜಾತ್ಯಾತೀತ ಶಕ್ತಿಗಳಿಗೆ ತಮ್ಮ ಮುಂದಿನ ಹೋರಾಟಗಳಿಗೆ ಹೊಸ ಹುಮ್ಮಸ್ಸು ತುಂಬುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. (ಐ.ಎನ್.ಎನ್.)

ಒಟ್ಟು ಸ್ಥಾನಗಳು	ಘೋಷಿತ ಫಲಿತಾಂಶ	ಎಡರಂಗ ಒಟ್ಟು	ಸಿಪಿಐ(ಎಂ)	ತೃಣಮೂಲ ಕಾಂಗ್ರೆಸ್	ಬಿಜೆಪಿ	ಕಾಂಗ್ರೆಸ್	ಇತರರು
ಗ್ರಾಮಪಂಚಾಯತುಗಳು							
49215	48887	27356	24439	9472	3649	5735	2675
%		(55.96)	(50)	(19.35)	(7.46)	(11.73)	15.47
ಪಂಚಾಯತು ಸಮಿತಿಗಳು							
8516	8244	5557	5028	1396	308	767	216
%		(67.41)	(61)	16.93)	3,74)	(9.30)	(2.62)
ಜಿಲ್ಲಾ ಪರಿಷತ್ತುಗಳು							
716	672	603	537	33	1	28	7
%		(89.85)	(80)	(4.93)	(0.15)	(4.03)	(1.04)

(ಆವರಣದಲ್ಲಿರುವುದು ಶೇಕಡಾ ಪ್ರಮಾಣ)



ಪಶ್ಚಿಮಬಂಗಾಳದ ಗ್ರಾಮೀಣ ಜನತೆಯನ್ನು ಮೂರು ಹಂತಗಳ ಪಂಚಾಯತು ಚುನಾವಣೆಗಳಲ್ಲಿ ಎಡರಂಗಕ್ಕೆ ಪ್ರಚಂಡ ಮತ್ತು ದೃಢ ಬೆಂಬಲ ನೀಡಿದ್ದಿಕ್ಕಾಗಿ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಅಭಿನಂದಿಸಿದೆ. ಎಡರಂಗದ ಮತ್ತು ಅದರ ಸರಕಾರದ ನೀತಿಗಳು ಮತ್ತು ಕಾರ್ಯದಲ್ಲಿ ಅವರು ಮತ್ತೆ ತಮ್ಮ ವಿಶ್ವಾಸವನ್ನು ತೋರ್ಪಡಿಸಿದ್ದಾರೆ. ಭೂಸುಧಾರಣೆ ಹಾಗೂ ಪ್ರಜಾಪ್ರಭುತ್ವ ಹಕ್ಕುಗಳ ವಲಯದಲ್ಲಿ ಗ್ರಾಮೀಣ ಬಡವರ ಪರವಾದ ಧೋರಣೆಗಳು ಹಾಗೂ ಪಂಚಾಯತು ವ್ಯವಸ್ಥೆಯ ಮೂಲಕ ಇಡೀ ಗ್ರಾಮೀಣ ಜನತೆಯ ಹಕ್ಕುಗಳ ಸಾಧನೆ ಇಡೀ ದೇಶಕ್ಕೆ ಒಂದು ಮಾದರಿ.

ಪಂಚಾಯತು ಚುನಾವಣೆಗಳ ಪ್ರಚಾರದ ವೇಳೆಯಲ್ಲಿ ಎಡರಂಗ, ಅದರಲ್ಲೂ ಮುಖ್ಯವಾಗಿ ಸಿ.ಪಿ.ಐ(ಎಂ) ಹೆಸರು ಕೆಡಿಸಲು ಒಂದು ಯೋಜಿತ ಪ್ರಯತ್ನ ನಡೆಯಿತು. ಪಶ್ಚಿಮ ಬಂಗಾಳದ ಸುಮಾರಾಗಿ ಎಲ್ಲಾ ಮಾಧ್ಯಮಗಳು ಹೊಲಸು ಪ್ರಚಾರ, ತಪ್ಪು ಮಾಹಿತಿಗಳನ್ನು ಹರಡಿಸಿದರು. ಇವನೆಲ್ಲಾ ಎದುರಿಸಿಯೂ ಎಡರಂಗ ಗ್ರಾಮಪಂಚಾಯತುಗಳಲ್ಲಿ ಶೇ. 57, ಬ್ಲಾಕ್ ಮಟ್ಟದ ಪಂಚಾಯತು ಸಮಿತಿಗಳಲ್ಲಿ ಶೇ. 67 ಹಾಗೂ ಜಿಲ್ಲಾ ಪರಿಷತ್ತುಗಳಲ್ಲಿ ಶೇ. 88 ಸ್ಥಾನಗಳಲ್ಲಿ ಗೆದ್ದಿದೆ. ಬಿ.ಜೆ.ಪಿ.ಯ ಕೋಮುವಾದಿ ರಾಜಕೀಯ ದೊಡ್ಡ ಏಟು ತಿಂದಿದೆ. 16 ಜಿಲ್ಲಾ ಪರಿಷತ್ತುಗಳ 672 ಘೋಷಿತ ಸೀಟುಗಳಲ್ಲಿ ಅದಕ್ಕೆ ದೊರತೆದ್ದು ಒಂದೇ ಜಯ. ತೃಣಮೂಲ, ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಂಡರೂ ಗ್ರಾಮ ಪಂಚಾಯತುಗಳಲ್ಲಿ ಅದಕ್ಕೆ ಸಿಕ್ಕಿದ್ದು ಅತ್ಯಲ್ಪ ಎಂದು ಪೊಲಿಟ್ ಬ್ಯೂರೋ ಹೇಳಿದೆ.

ಇಡೀ ದೇಶಕ್ಕೆ ಮಾದರಿ
ಪೊಲಿಟ್ ಬ್ಯೂರೋ ಅಭಿನಂದನೆ

ಸಿ.ಪಿ.ಐ.(ಎಂ) ಮತ್ತು ಎಡರಂಗವನ್ನು ಅಧಿಕಾರದಿಂದ ಇಳಿಸಲು ಪ್ರತಿಗಾಮಿ ಪಟ್ಟಭದ್ರ ಹಿತಾಸಕ್ತಿಗಳು ತೃಣಮೂಲ ಕಾಂಗ್ರೆಸ್ -ಬಿಜೆಪಿಗೆ ಬೆಂಬಲವಾಗಿ ಹಣಬಲ ಭುಜಬಲವನ್ನು ವ್ಯಾಪಕವಾಗಿ ಬಳಿಸಿದರು ಎಂದು ಅಪಾದಿಸಿರುವ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಈ ಧಾಳಿಗಳಲ್ಲಿ 26 ಸಿ.ಪಿ.ಐ.(ಎಂ) ಕಾರ್ಯಕರ್ತರ ಹತ್ಯೆಯಾಗಿದೆ, ಹಲವರಿಗೆ ಗಂಭೀರ ಗಾಯಗಳಾಗಿವೆ ಎಂಬ ಸಂಗತಿಯತ್ತ ಗಮನ ಸೆಳೆದಿದೆ.

ಪ್ರತಿಗಾಮಿ ಕೋಮುವಾದಿ ಮತ್ತು ಬಲಪಂಥೀಯ ಶಕ್ತಿಗಳ ಧಾಳಿಗಳನ್ನೆಲ್ಲಾ ಎದುರಿಸಿ ಧೈರ್ಯವಾಗಿ ಹಿಮ್ಮೆಟ್ಟಿಸಿದ ಪಕ್ಷದ ಎಲ್ಲಾ ಸದಸ್ಯರು ಹಾಗೂ ಹಿತೈಷಿಗಳಿಗೆ ಕ್ರಾಂತಿಕಾರಿ ಶುಭಾಶಯಗಳನ್ನು ತಿಳಿಸುತ್ತಾ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಪಂಚಾಯತು ವ್ಯವಸ್ಥೆಯ ಮೂಲಕ ನಡೆಸಿದ ಕೆಲಸವನ್ನು ಮುಂದುವರೆಸಿಕೊಂಡು ಹಾಗೂ ಎಡರಂಗದ ವ್ಯಾಪ್ತಿಯಿಂದ ಹೊರಗುಳಿದಿರುವ ಎಲ್ಲಾ ಜನವಿಭಾಗಗಳೊಂದಿಗೆ ಸಂಪರ್ಕಗಳನ್ನು ಬೆಸೆಯಲು ಪಕ್ಷ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದೆ.

ಅನುಕರಣೀಯ ಕೃಷಿ ನೀತಿ.....

ಪಶ್ಚಿಮ ಬಂಗಾಳದಲ್ಲಿ ಮತದಾರರು ಮತ್ತೆ ಎಡರಂಗಕ್ಕೆ ಒಲವು ತೋರಿದ್ದಾರೆ. ಮೂರು ಹಂತದ ಪಂಚಾಯ್ತಿ ಚುನಾವಣೆಗಳಲ್ಲಿ ಎಡರಂಗದ ಅಂಗ ಪಕ್ಷಗಳು ಜಯಭೇರಿ ಸಾಧಿಸಿ ತೃಣಮೂಲ ಕಾಂಗ್ರೆಸ್ ಮತ್ತು ಭಾರತೀಯ ಜನತಾ ಪಕ್ಷದ ಮೈತ್ರಿಕೂಟದ ಕನಸನ್ನು ನುಚ್ಚು ನೂರಾಗಿಸಿವೆ. ಅನುಕರಣೀಯವಾದ ಕೃಷಿ ನೀತಿ ಹಾಗೂ ಸಂಘಟನಾ ಶಕ್ತಿಯನ್ನು ಈ ಫಲಿತಾಂಶಗಳು ಪ್ರತಿಬಿಂಬಿಸುವುದಲ್ಲದೆ ಎಡರಂಗದ ಬಿಗಿಮುಷ್ಟಿಯಲ್ಲಿದ್ದ ಸ್ಥಾನಗಳ ಮೇಲೆ ವಿರೋಧೀ ಮೈತ್ರಿಕೂಟವು ಲಗ್ಗೆ ಹಾಕಬಹುದೆಂಬ ಚುನಾವಣೆ ಪೂರ್ವ ಊಹಾಪೋಹಗಳಿಗೆ ತೆರೆ ಎಳೆದಂತಾಗಿದೆ. ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಬಿಟ್ಟರೆ ಉಳಿದಂತೆ ಎಡರಂಗವು, ಅದರಲ್ಲಿಯೂ ಮುಖ್ಯವಾಗಿ ಅದರ ಪ್ರಮುಖ ಅಂಗ ಪಕ್ಷವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಹಿಂದಿನ ಚುನಾವಣೆಯಲ್ಲಿ ಗಳಿಸಿದ್ದಕ್ಕಿಂತ ಹೆಚ್ಚಿನ ಸ್ಥಾನಗಳನ್ನು ಪಡೆದುಕೊಂಡು ತನ್ನ ಟೀಕಾಕಾರರ ಬಾಯಿ ಮುಚ್ಚಿಸಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು 1993ರಲ್ಲಿ ಪಂಚಾಯತ್ ಸಮಿತಿ ಮತ್ತು ಜಿಲ್ಲಾ ಪರಿಷತ್‌ಗಳಲ್ಲಿ ಪಡೆದುದಕ್ಕಿಂತ ಅಧಿಕ ಸ್ಥಾನಗಳನ್ನು ಈ ಬಾರಿ ತನ್ನ ಬಗಲಿಗೆ ಹಾಕಿಕೊಂಡಿರುವುದು ವಿರೋಧಿ ಬಣಕ್ಕೆ, ಮುಖ್ಯವಾಗಿ ಕಾಂಗ್ರೆಸ್ ಪಕ್ಷಕ್ಕೆ ಆತಂಕ ಉಂಟು ಮಾಡಿದ್ದರೆ ಆಶ್ಚರ್ಯವಿಲ್ಲ. ಆಗ ಕಾಂಗ್ರೆಸ್ ಈಗ ತೃಣಮೂಲ ಕಾಂಗ್ರೆಸ್, ಬಿಜೆಪಿ ಮತ್ತು ಕಾಂಗ್ರೆಸ್ ಒಟ್ಟಾಗಿ ಪಡೆದುದಕ್ಕಿಂತ ಅಧಿಕ ಸ್ಥಾನಗಳನ್ನು ಗಳಿಸಿತ್ತು. ಇದರಿಂದ ಆಡಳಿತ ಪಕ್ಷದ ವಿರುದ್ಧ ಪ್ರತಿಪಕ್ಷ ಮೈತ್ರಿಕೂಟದ ಹೋರಾಟ ಸ್ವಲ್ಪ ಮಟ್ಟಿಗೆ ನಿಷ್ಫಲವಾಯಿತೆಂದೇ ಹೇಳಬಹುದು.

- 'ಪ್ರಜಾವಾಣಿ' ಸಂಪಾದಕೀಯ, 5 ಜೂನ್ 1998.

ಲೋಕಸಂಚಾರ

ಶರತ್ ಚಂದ್ರ

ಉತ್ತರ ಐರ್ಲೆಂಡ್‌ನ ಜನರ ಕೂಗು -'ಶಾಂತಿ ಬೇಕು'

ಉತ್ತರ ಐರ್ಲೆಂಡಿನ ಜನ ಕೂಗಿ ಹೇಳಿದ್ದಾರೆ - ನಮಗೆ ಶಾಂತಿ ಬೇಕು, ಕೋಮುವಾದಿ ಹಿಂಸಾಚಾರದಿಂದ ಮುಕ್ತಿ ಬೇಕು, ನಮ್ಮ ಭವಿಷ್ಯ ನಾವೇ ನಿರ್ಧಾರ ಮಾಡಬೇಕು ಅಂತ. ಉತ್ತರ ಐರ್ಲೆಂಡಿನ ಜನತೆ ಇತ್ತೀಚೆಗೆ ಆ ಪ್ರಾಂತ್ಯದ ಎಂಟು ರಾಜಕೀಯ ಪಕ್ಷಗಳು, ಬ್ರಿಟನ್ ಮತ್ತು ಐರ್ಲೆಂಡ್ ಜಂಟಿಯಾಗಿ ತಯಾರಿಸಿದ ಶಾಂತಿ ಒಪ್ಪಂದದ ಬಗೆಗಿನ ಜನಮತ ಸಂಗ್ರಹದಲ್ಲಿ ಭಾಗವಹಿಸುತ್ತಾ ಕೇಳಿಬಂದ ಕೂಗು ಇದು. ಈ ಜನಮತ ಸಂಗ್ರಹದಲ್ಲಿ ಉತ್ಸಾಹದಿಂದ ಭಾಗವಹಿಸಿದ (ಶೇ 81) ಜನರಲ್ಲಿ ಬಹುಭಾಗ ಜನ (ಶೇ 71) ಶಾಂತಿ ಒಪ್ಪಂದ 'ಬೇಕು' ಅಂತ ಮತ ನೀಡಿದ್ದಾರೆ. ಹಲವು ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ ಮತೀಯ, ಜನಾಂಗೀಯ, ರಾಷ್ಟ್ರೀಯ ಸಮಸ್ಯೆ ಆಗರವಾಗಿದ್ದ ಬ್ರಿಟನ್ ಪ್ರಾಂತ್ಯ ವಾದ ಈ ಉತ್ತರ ಐರ್ಲೆಂಡ್‌ನಲ್ಲಿ ಶಾಂತಿ ನೆಲೆಸುವ ಸಾಧ್ಯತೆ ಹಿಂದೆಂದಿಗಿಂತಲೂ ನಿಜವಾಗಿದೆ. ಕಳೆದ ಮೂವತ್ತು ವರ್ಷಗಳಲ್ಲಿ ಉತ್ತರ ಐರ್ಲೆಂಡಿನ ಭೂಗತ ಸಶಸ್ತ್ರ ಗೆರಿಲ್ಲಾಗಳು ಹಾಗೂ ಬ್ರಿಟಿಶ್ ಸೈನ್ಯದ ನಡುವಣ ಕಾದಾಟದಲ್ಲಿ - ಬೀದಿಗಳಲ್ಲಿ, ಗೋಳಿಬಾರುಗಳಲ್ಲಿ ಬಾಂಬುದಾಳಿಗಳಲ್ಲಿ 3400 ಜನ ಸತ್ತಿದ್ದಾರೆ.

ಅಮೆರಿಕದ ಸೆನೆಟರ್ ಒಬ್ಬನ ಮಧ್ಯಸ್ಥಿಕೆ ಯಲ್ಲಿ ತಯಾರಾದ ಈ ಒಪ್ಪಂದದ ಪ್ರಕಾರ ಉತ್ತರ ಐರ್ಲೆಂಡ್ ಬ್ರಿಟಿಶ್ ಪ್ರಾಂತ್ಯವಾಗಿ ಮುಂದುವರೆ ಯುತ್ತದೆ. ಅದೇ ಸಮಯದಲ್ಲಿ ಈ ಪ್ರಾಂತ್ಯ ಐರ್ಲೆಂಡು ಸೇರಬಯಸಿದರೆ ಅದಕ್ಕೆ ಬೇಕಾದ ರಾಜಕೀಯ ಪರಿಹಾರ ಗಳನ್ನು ಸಿದ್ಧಪಡಿಸಿದೆ. ಜೂನ್ 25 ರಂದು ಉತ್ತರ ಐರ್ಲೆಂಡ್ ಹೊಸ ಪ್ರಾಂತೀಯ ಅಸೆಂಬ್ಲಿಗೆ ಚುನಾವಣೆಗಳು ನಡೆಯಲಿವೆ. ಉತ್ತರ ಐರ್ಲೆಂಡ್‌ಗೆ ಗಮನಾರ್ಹ ಪ್ರಮಾಣದ ಸ್ವಾಯತ್ತತೆ ಇರುತ್ತದೆ.

ಎರಡು ವರ್ಷದೊಳಗೆ ಎಲ್ಲಾ ಅರೆಮಿಲಿಟರಿ ಗುಂಪುಗಳನ್ನು ನಿಶ್ಯಸ್ತ್ರ ಗೊಳಿಸಲಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ಜೈಲಿನಲ್ಲಿರುವ ಎರಡೂ ಕಡೆಯ ಸಶಸ್ತ್ರ ಗೆರಿಲ್ಲಾ ಗುಂಪುಗಳ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲಾಗುತ್ತದೆ. ಉತ್ತರ ಐರ್ಲೆಂಡಿನ ವಿವಾದದಲ್ಲಿ ಭಾಗಿಯಾದ ಹೆಚ್ಚಿನ ಪಕ್ಷಗಳು ಈ ಒಪ್ಪಂದವನ್ನು ಬೆಂಬಲಿಸುವುದರಿಂದ, ಹಾಗೂ ಇದಕ್ಕೆ ಭಾರಿ ಜನಬೆಂಬಲ ದೊರೆತಿರುವುದರಿಂದ ಉತ್ತರ ಐರ್ಲೆಂಡಿನ ದಶಕಗಳ ಸಮಸ್ಯೆ ಪರಿಹಾರದತ್ತ ನಡೆದಿದೆ.

ಬ್ರಿಟಿಶ್ ವಸಾಹತುವಾಗಿದ್ದ ಐರ್ಲೆಂಡಿಗೆ ಬ್ರಿಟನ್ ಸ್ವಾತಂತ್ರ್ಯ ಕೊಟ್ಟಾಗ ತನ್ನ 'ಒಡೆದು ಆಳುವ ಸಾಮ್ರಾಜ್ಯಶಾಹಿ' ನೀತಿ ಭಾಗವಾಗಿ ಪ್ರೊಟೆಸ್ಟಂಟ್ ಬಹುಮತ ದ ಉತ್ತರ ಐರ್ಲೆಂಡ್ ಪ್ರಾಂತ್ಯವನ್ನು ಬ್ರಿಟನ್ ಭಾಗ ವಾಗಿ ಉಳಿಸಿಕೊಂಡಿತ್ತು. ಐರ್ಲೆಂಡ್ ಬಹುಪಾಲು ಕ್ಯಾಥೋಲಿಕ್ ದೇಶ. ಬ್ರಿಟನ್ ಬಹುಪಾಲು ಪ್ರೊಟೆಸ್ಟಂಟ್ ದೇಶ. ಇದನ್ನು ಅಲ್ಪಸಂಖ್ಯಾತ ಐರಿಷ್ ಕ್ಯಾಥೊಲಿಕರು ಪ್ರತಿಭಟಿಸುತ್ತಾ ಬಂದಿದ್ದಾರೆ. ಈ ಸಮಸ್ಯೆ ಉಲ್ಬಣಗೊಳ್ಳುತ್ತಾ ಸಶಸ್ತ್ರ ಗೆರಿಲ್ಲಾ ಹೋರಾಟಕ್ಕೆ ಎಡೆ ಮಾಡಿತ್ತು.

ಪ್ಯಾರಿಸಿನಲ್ಲಿ ಕಮ್ಯುನಿಸ್ಟ್ ಮ್ಯಾನಿಫೆಸ್ಟೋದ 150 ನೇ ವಾರ್ಷಿಕೋತ್ಸವ

ಪ್ಯಾರೀಸು ಕಾರ್ಮಿಕ ವರ್ಗದ ಹೋರಾಟದ ತೊಟ್ಟಿಲು - ಮೊದಲ ಕಾರ್ಮಿಕ ವರ್ಗದ ಕ್ರಾಂತಿ ನಡೆದ ಜಾಗ. ಮಾರ್ಕ್ಸ್ ವೈಜ್ಞಾನಿಕ ಸಮಾಜವಾದದ ಬಗ್ಗೆ ಜಗತ್ತಿನ ಮುಂದಿಟ್ಟ ಕ್ರಾಂತಿಕಾರಿ ಹೊತ್ತಿಗೆ 'ಕಮ್ಯುನಿಸ್ಟ್ ಮ್ಯಾನಿಫೆಸ್ಟೋ' ದ 150ನೇ ವಾರ್ಷಿಕೋತ್ಸವ ನಡೆಸಲು ಇನ್ನು ಯಾವುದು ಪ್ರಶಸ್ತ ಜಾಗ?

ಮೇ 13 ರಿಂದ 16 ರವರೆಗೆ ಕಮ್ಯುನಿಸ್ಟ್ ಮ್ಯಾನಿಫೆಸ್ಟೋದ 150ನೇ ವಾರ್ಷಿಕೋತ್ಸವದ ಅಂಗವಾಗಿ ಅಂತರ್ರಾಷ್ಟ್ರೀಯ ಸೆಮಿನಾರು ನಡೆಯಿತು. ಫ್ರಾನ್ಸ್‌ನ ಕಮ್ಯುನಿಸ್ಟ್ ಪಾರ್ಟಿ ಮತ್ತು ಅದರ ನಾಯಕತ್ವದ ಟ್ರೇಡ್ ಯೂನಿಯನ್ ಕೇಂದ್ರ ಸಿಜಿಟಿ ಸಂಘಟಿಸಿರುವ ವಿಶಾಲ ಮಾರ್ಕ್ಸ್‌ವಾದಿ ವೇದಿಕೆಯು ಈ ಸೆಮಿನಾರನ್ನು ಏರ್ಪಡಿಸಿತ್ತು. ವಿಶ್ವದ ಹಲವಾರು ದೇಶಗಳನ್ನು ಪ್ರತಿನಿಧಿಸುವ 1200 ಪ್ರತಿನಿಧಿಗಳು ಬಂದಿದ್ದರು. ಸೆಮಿನಾರಿಗೆ ಬಂದ ಪ್ರತಿನಿಧಿಗಳಲ್ಲಿ ಕಮ್ಯುನಿಸ್ಟ್ ಮತ್ತು ಎಡಪಕ್ಷಗಳು, ಪ್ರಜಾಸತ್ತಾತ್ಮಕ ಸಂಘಟನೆಗಳು, ಎಡ ಉಗ್ರವಾದಗಳನ್ನು ಪ್ರತಿನಿಧಿಸುವವರಲ್ಲದೆ ಹಲವಾರು ವಿಶ್ವವಿದ್ಯಾಲಯದ ಬುದ್ಧಿಜೀವಿಗಳು ಸೇರಿದ್ದರು. ಸಿಐಟಿಯು ನಿಂದ ಚಿತ್ರಬ್ರತ ಮುಜುಂದಾರ್, ಕೆ.ರವೀಂದ್ರ ನಾಥ್, ಜಿಬೋನ್ ರಾಯ್ ಮತ್ತು ಜಾನಕಿ ವಲ್ಲೋನ್ ಈ ಸೆಮಿನಾರ್ ನಲ್ಲಿ ಭಾಗವಹಿ ಸಿದ್ದರು. ಸುಕೋಮಲ್ ಸೇನ್ ಅಖಿಲ ಭಾರತ ರಾಜ್ಯ ಉದ್ಯೋಗಿಗಳ ಫೆಡರೇಷನ್ ಪ್ರತಿನಿಧಿಯಾಗಿ ಭಾಗವಹಿಸಿ ದ್ದರು. ಅವರು ಸೆಮಿನಾರಿನ ಒಂದು ಗೋಷ್ಠಿಯಲ್ಲಿ ಭಾಷಣಕಾರರೂ ಆಗಿದ್ದರು.

ಸೆಮಿನಾರಿನ ಭಾಗವಾಗಿ ಸುಮಾರು 32 ಕಾರ್ಯಾಗಾರಗಳು ಹಾಗೂ 8 ಗೋಷ್ಠಿಗಳು ನಡೆದವು. ಇವೆಲ್ಲಾ ಕಮ್ಯುನಿಸ್ಟ್ ಮ್ಯಾನಿಫೆಸ್ಟೋದ ದಿನಗಳಿಂದ ಕಳೆದ ನೂರೈವತ್ತು ವರ್ಷಗಳಲ್ಲಿ ಆದ ಎಲ್ಲಾ ರಂಗಗಳಲ್ಲಿನ ಬೆಳವಣಿಗೆಗಳ ವಿಶ್ಲೇಷಣೆ, ವೈಜ್ಞಾನಿಕ ಸಮಾಜವಾದದ ಮುಂದಿರುವ ಸವಾಲುಗಳ ಹಲವು ಆಯಾಮಗಳನ್ನು ಮುಟ್ಟುವಂತಹವಾಗಿದ್ದವು. ಈ ಎಲ್ಲಾ ಗೋಷ್ಠಿಗಳಲ್ಲಿ, ಕಾರ್ಯಾಗಾರಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರತಿನಿಧಿಗಳು ಭಾಗವಹಿಸಿದರು. 150 ಜನ ಭಾಷಣಕಾರರಿದ್ದರೆ, 160 ಜನ ಪ್ರತಿನಿಧಿಗಳು ಚರ್ಚೆಯಲ್ಲಿ ಮಧ್ಯಪ್ರವೇಶ ಮಾಡಿದರು. ಸೆಮಿನಾರು ಪ್ಯಾರೀಸಿನ ರಾಷ್ಟ್ರೀಯ ಲೈಬ್ರರಿಯಲ್ಲಿ ನಡೆದರೆ, ಸಮಾರೋಪ ಪ್ಯಾರಿಸಿನ ಖ್ಯಾತ ಹಳೆಯ ವಿಶ್ವವಿದ್ಯಾಲಯ ಸೋರ್‌ಬೋನ್‌ನಲ್ಲಿ ನಡೆಯಿತು.

ಸೆಮಿನಾರು ಯಾವುದೇ ನಿರ್ಣಯಗಳನ್ನು ಅಂಗೀಕರಿಸಲಿಲ್ಲ. ಅದು ಅವರ ಉದ್ದೇಶವೂ ಆಗಿರಲಿಲ್ಲ. ಆದರೂ ಹೆಚ್ಚು ಕಡಿಮೆ ಎಲ್ಲ ಭಾಷಣಕಾರರು ಮಧ್ಯ ಪ್ರವೇಶ ಮಾಡಿದ ಪ್ರತಿನಿಧಿಗಳು ಬಂಡವಾಳಶಾಹಿ ಮಾನವಜನಾಂಗದ ಮುಂದೆ ಇರುವ ಯಾವುದೇ ಸಮಸ್ಯೆಗಳಿಗೆ ಪರಿಹಾರ ಒದಗಿಸದು, ಮಾರ್ಕ್ಸ್‌ವಾದದ ಮೇಲೆ ಆಧಾರಿತ ವೈಜ್ಞಾನಿಕ ಸಮಾಜವಾದ ಮಾತ್ರ ಇದನ್ನು ಮಾಡಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಇಂಡೋನೇಶ್ಯಾ - ಚುನಾವಣೆಗಳಿಗೆ ಅಂಜುತ್ತಿರುವ ಅಧ್ಯಕ್ಷ ಹಬೀಬಿ

ಮಾಜಿ ಅಧ್ಯಕ್ಷ ಸುಹಾರ್ತೋ ಮತ್ತು ಅವರ ಅಮೆರಿಕನ್ ಧಣಿಗಳ ಪರವಾಗಿ ಅಧಿಕಾರ ನಡೆಸುತ್ತಿರುವ ಅಧ್ಯಕ್ಷ ಹಬೀಬಿ ದೇಶವ್ಯಾಪಿ ಬೇಡಿಕೆಗಳಿಗೆ ಅಂಜುತ್ತಿದ್ದಾರೆ. ತತ್‌ಕ್ಷಣ ಚುನಾವಣೆಗಳನ್ನು ನಡೆಸಬೇಕೆಂದು ಬರುತ್ತಿರುವ ಬೇಡಿಕೆ ಎದುರಿಸಲು ಸಿದ್ಧರಾಗಿಲ್ಲ, ಜನರ ಮನಸ್ಸಿನಲ್ಲಿ ಸುಹಾರ್ತೋ ಕೈಗೊಂಬೆ ಎಂಬ ಅಭಿಪ್ರಾಯ ಮೀರಲಾರದೆ, ದೇಶದ ಸೈನ್ಯದ ಕಮಾಂಡರುಗಳ ವಿಶ್ವಾಸ ಗಳಿಸಲಾರದೆ ಅಧ್ಯಕ್ಷ ಹಬೀಬಿಯ ತಾತ್ಕಾಲಿಕ ಸರಕಾರ ಕುಂಟುತ್ತಿದೆ.

ಜನಾಂದೋಲನದ ಒತ್ತಡದಿಂದ ಹಲವು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲಾರಂಭಿಸಿದೆ. ಇಬ್ಬರು ಪ್ರಮುಖ ವಿರೋಧ ಪಕ್ಷದ ನಾಯಕರು ಹಾಗೂ ಹಲವಾರು ಕಾರ್ಯಕರ್ತರನ್ನು ಬಿಡುಗಡೆ ಮಾಡಲಾಗಿದೆ. ಮೇ 12 ರಂದು ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸಿದ ಸೇನಾ ಆಫೀಸರುಗಳನ್ನು ವಿಚಾರಣೆಗೊಳಪಡಿಸಲಾಗಿದೆ.

ಹಬೀಬಿ ಸರಕಾರ ಎಷ್ಟು ಅವಿಶ್ವಾಸನೀಯವೆಂದರೆ, ಅವರ ಮಂತ್ರಿಮಂಡಲದಲ್ಲಿ ಭಾಗವಹಿಸುತ್ತಿರುವವರು, ಜನ ಬಯಸಿದರೆ 24 ಗಂಟೆಯಲ್ಲಿ ತಾವು ರಾಜೀನಾಮೆ ಕೊಡುವುದಾಗಿ ಹೇಳಿದ್ದಾರಂತೆ.

ಸುಹಾರ್ತೋ ಮತ್ತು ಅವರ ಕುಟುಂಬ ದ ಸದಸ್ಯರು ಕಳೆದ 30 ವರ್ಷ ಗಳಲ್ಲಿ ಜನರಿಂದ, ದೇಶದ ಖಜಾನೆಯಿಂದ ದೋಚಿರುವ 40 ಶತಕೋಟಿ ಡಾಲರುಗಳಷ್ಟು ಸಂಪತ್ತನ್ನು ವಾಪಸು ಪಡೆಯಬೇಕೆಂಬ ಒತ್ತಾಯ ಹೆಚ್ಚುತ್ತಿದೆ. ಅಲ್ಲದೆ ಆರ್ಥಿಕ ಅಪರಾಧಗಳಿಗೆ ಅವರನ್ನು ವಿಚಾರಣೆಗೊಳಪಡಿಸಬೇಕೆಂಬ ಒತ್ತಾಯ ಬರುತ್ತಿದೆ.

ಅಫಘಾನಿಸ್ತಾನದಲ್ಲಿ ಭೂಕಂಪಕ್ಕೆ 4500 ಬಲಿ

ಪ್ರಾಕೃತಿಕ ಹಾಗೂ ಮಾನವ ಕೃತ ಪ್ರಕೋಪಗಳ ನಡುವೆ ತತ್ತರಿಸುತ್ತಿರುವ ಅಫಘಾನಿಸ್ತಾನದ ಸ್ಥಿತಿ ಶೋಚನೀಯವಾಗಿದೆ. ಇತ್ತೀಚೆಗೆ ಉತ್ತರ ಅಫಘಾನಿಸ್ತಾನವನ್ನು ನಡುಗಿಸಿದ ಭೂಕಂಪಕ್ಕೆ 4500 ಜನ ಬಲಿಯಾಗಿದ್ದಾರೆ. ದೇಶದಲ್ಲಿ ನಡೆಯುತ್ತಿರುವ ಆಂತರಿಕ ಯುದ್ಧದಿಂದಾಗಿ ಪರಿಹಾರ ಕ್ರಮಗಳು ಭೂಕಂಪ ಪೀಡಿತ ಪ್ರದೇಶಗಳನ್ನು ತಲುಪುವುದು ವಿಳಂಬ ಅಥವಾ ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಪರಿಸ್ಥಿತಿ ಇನ್ನಷ್ಟು ಶೋಚನೀಯವಾಗಿದೆ.

324 ರಾಜಕೀಯ ಬಂದಿಗಳನ್ನು ಜೈಲಿನಿಂದ ಬಿಡುಗಡೆ ಮಾಡಿದ ಕೊಲಂಬಿಯಾದ ಎಡ ಗೆರಿಲ್ಲಾಗಳು

ಅತ್ಯಂತ ಸಾಹಸಮಯ ರೀತಿಯಲ್ಲಿ ದಕ್ಷಿಣ ಅಮೆರಿಕದ ಕೊಲಂಬಿಯಾದಲಿ FARC ಎಂಬ ಎಡ ಗೆರಿಲ್ಲಾ ತಂಡ ಜೈಲಿನ ಮೇಲೆ ಧಾಳಿ ಮಾಡುವ, ಅವರ 324 ಸಹಚರರನ್ನು ಜೈಲಿನಿಂದ ಬಿಡುಗಡೆ ಮಾಡಿದರು. ಈ ದಾಳಿಯಲ್ಲಿ ಡೈನಾಮೆಟ್ ಸಿಡಿತ, ಗೋಳಿಬಾರು ಮಾಡಲಾಯಿತು. ಹಲವು ಗಂಟೆಗಳ ಕಾಲ ಗೆರಿಲ್ಲಾ ಹಾಗೂ ಜೈಲಿನ ಭದ್ರತಾ ಸಿಬ್ಬಂದಿ ನಡುವೆ ಗುಂಡಿನ ಕಾಳಗ ನಡೆಯಿತು. ಡೈನಾಮೆಂಟ್ ಸ್ಫೋಟ ಬಳಸಿ ಜೈಲಿನ ಒಂದು ಭಾಗದ ಗೋಡೆಯನ್ನು ಗೆರಿಲ್ಲಾಗಳು ಧ್ವಂಸ ಮಾಡಿದ್ದರಂತೆ.

ಕೊಲಂಬಿಯಾದಲ್ಲಿ ಈ ರೀತಿ ಸಾಹಸಮಯ ದಾಳಿಯಿಂದ ತಮ್ಮ ಸಹಚರರನ್ನು ಬಿಡಿಸುವುದು ಸಾಮಾನ್ಯವಾಗಿದೆ. ಆದರೆ ಈ ಪ್ರಮಾಣದ ರಾಜಕೀಯ ಕೈದಿಗಳು ಈ ರೀತಿ ಬಿಡುಗಡೆ ಪಡೆಯುವುದು ಅಸಾಧಾರಣವೇ.

ಕೊಲಂಬಿಯಾದ ಅತಿದೊಡ್ಡ ಗೆರಿಲ್ಲಾ ಗುಂಪು FARC ಎರಡನೇ ಅತಿದೊಡ್ಡ ಗೆರಿಲ್ಲಾ ಗುಂಪು NLA ಇವು ಸೇರಿ ಪ್ರಬಲ ಗೆರಿಲ್ಲಾ ಗುಂಪುಗಳು. ಇವು ಕೊಲಂಬಿಯಾದ ಅರ್ಧದಷ್ಟು ಗ್ರಾಮೀಣ ಪ್ರದೇಶಗಳನ್ನು ಈಗಾಗಲೇ ನಿಯಂತ್ರಿಸುತ್ತಿದ್ದು ನಗರ ಪ್ರದೇಶಗಳಿಗೆ ತಮ್ಮ ಪ್ರಭಾವ ವ್ಯಾಪಿಸುತ್ತಿವೆ.

ಬಾಗೇಪಲ್ಲಿಯಲ್ಲಿ ಮೇ ದಿನಾಚರಣೆ

ದುಡಿಯುವ ಜನತೆ ಹಾಗೂ ಶೋಷಿತ ವರ್ಗದ ವಿಮೋಚನೆ ಕೇವಲ ಕೆಂಬಾವುಟದ ಅಡಿಯಲ್ಲಿ ಮಾತ್ರ ಸಾಧ್ಯ. ಪ್ರಸ್ತುತ ಭಾರತದಲ್ಲಿ ಅದರ ನೇತೃತ್ವವನ್ನು ವಹಿಸಿರುವ ಸಿಪಿಐ(ಎಂ) ನಿಂದ ಈ ದೇಶದ ಶ್ರಮಿಕ ವರ್ಗದ ವಿಮೋಚನೆ ಸಾಧ್ಯವೆಂದು ಬಾಗೇಪಲ್ಲಯಲ್ಲಿ ಮೇ ದಿನಾಚರಣೆಯ ಅಂಗವಾಗಿ ಬಹಿರಂಗ ಸಭೆಯಲ್ಲಿ ಸಿಪಿಐ(ಎಂ) ಶಾಸಕರಾದ ಶ್ರೀರಾಮರೆಡ್ಡಿಯವರು ಹೇಳಿದರು.

ಬಿಜೆಪಿ ನೇತೃತ್ವದ 19 ಪಕ್ಷಗಳ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡು, ಅದರ ಜನವಿರೋಧಿ ನೀತಿಗಳನ್ನು ಬಯಲಿಗೆಳೆದರು. ಎರಡು ತಿಂಗಳ ಹಿಂದೆ ಇಲ್ಲದಿದ್ದ ಆಪತ್ತು ಈ ದೇಶಕ್ಕೆ ಈಗ ಬಂದಿದೆ ಎಂದು ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆಂದು ಆರೋಪಿಸಿದರು. ಅಣು ಬಾಂಬುಗಳನ್ನು ತಯಾರಿಸಿದ ವಿಜ್ಞಾನಿಗಳನ್ನು ಅಭಿನಂದಿಸಿದ ಅವರು ಬಿಜೆಪಿ ಅದನ್ನು ತನ್ನ ರಾಜಕೀಯ ಉಳಿವಿಗಾಗಿ ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿದರು. ನೆರೆ ದೇಶಗಳೊಂದಿಗೆ ಎರಡು ತಿಂಗಳ ಹಿಂದೆ ಸಂಯುಕ್ತ ರಂಗ ಸರ್ಕಾರವಿದ್ದಾಗ ಇದ್ದಂತ ಬಾಂಧವ್ಯ ಇಂದು ಇಲ್ಲವಾಗಿದೆ. ಯುದ್ಧದ ಭೀತಿಯನ್ನು ಜನರಲ್ಲಿ ಮೂಡಿಸುವಂತಹ ಬೇಜವಾಬ್ದಾರಿಯುತ ಹೇಳಿಕೆಗಳನ್ನು ಕೇಂದ್ರದ ಮಂತ್ರಿಗಳು ಕೊಡುತ್ತಿದ್ದಾರೆ. ನಿಜವಾಗಲೂ ಆಪತ್ತು ಬಂದಿರುವುದು ನೆರೆ ದೇಶಗಳಿಂದ ಅಲ್ಲ, ಬಿಜೆಪಿಯಿಂದ ಮಾತ್ರವೇ ಈ ದೇಶಕ್ಕೆ ಆಪತ್ತು ಬಂದಿದೆ ಎಂದರು.

ಶೇ 70 ಜನ ಕೃಷಿಯನ್ನು ನಂಬಿದ್ದರೂ ಒಬ್ಬ ಕೃಷಿಮಂತ್ರಿಯನ್ನು ನೇಮಿಸದೇ ಇರುವುದು ಸರ್ಕಾರಕ್ಕೆ ರೈತರ ಮೇಲೆ ಇರುವ ಕಾಳಜಿ ಎಷ್ಟು ಎಂದು ಗೊತ್ತಾಗುತ್ತದೆ. ಬಡತನ, ದಾರಿದ್ರ್ಯ, ನಿರುದ್ಯೋಗದಂತಹ ಗಂಭೀರ ಸಮಸ್ಯೆಗಳು ಕಿತ್ತು ತಿನ್ನುತ್ತಿರಬೇಕಾದರೆ, ಜನರ ಗಮನವನ್ನು ಬೇರೆಡೆಗೆ ಎಳೆಯಲು ಬಿಜೆಪಿ ಸರ್ಕಾರ ಭಾವನಾತ್ಮಕ ವಿಷಯಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿರುವುದನ್ನು ಖಂಡಿಸಿದರು.

ಕೋಮುವಾದಿ ಬಿಜೆಪಿ ಸರ್ಕಾರದ ಜನವಿರೋಧಿ ನೀತಿಗೆ ವಿರುದ್ಧವಾಗಿ ಚಳುವಳಿ ಮಾಡಬೇಕೆಂದು ಕರೆ ನೀಡಿದರು.

ಬಹಿರಂಗ ಸಭೆಯಲ್ಲಿ ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಎ.ವಿ.ವೆಂಕಟರಾಂ, ತಾಲ್ಲೂಕು ಡಿವೈಎಫ್‌ಐ ಕಾರ್ಯದರ್ಶಿ ಭಾಸ್ಕರರೆಡ್ಡಿ, ಸಿಪಿಐ(ಎಂ) ತಾಲ್ಲೂಕು ಸಮಿತಿ ಸದಸ್ಯ ವಿ.ಕೃಷ್ಣಾರೆಡ್ಡಿ ಮಾತನಾಡಿದರು. ಜಿಲ್ಲಾ ಪಂಚಾಯ್ತಿ ಸದಸ್ಯರಾದ ಸಿ.ಡಿ.ಗಂಗುಲಪ್ಪನವರು ಸಭೆಯಲ್ಲಿ ಪಾಲ್ಗೊಂಡಿದ್ದರು. ಸಭೆಯ ಅಧ್ಯಕ್ಷತೆಯನ್ನು ತಾಲ್ಲೂಕು ಸಿಪಿಐ(ಎಂ) ಕಾರ್ಯದರ್ಶಿ ವಿ.ವೆಂಕಟಸ್ವಾಮಿ ರೆಡ್ಡಿ ವಹಿಸಿದ್ದರು.

ಬಹಿರಂಗ ಸಭೆಗೆ ಮೊದಲು ಸುಮಾರು ಒಂದು ಸಾವಿರ ಜನರ ಮೆರವಣಿಗೆ, ಕೋಲಾಟದ ಪ್ರದರ್ಶನ ಪಟ್ಟಣದ ಬೀದಿಗಳಲ್ಲಿ ನಡೆಯಿತು.

ಅಭಿವೃದ್ಧಿ ಶುಲ್ಕ ಕಡಿತಕ್ಕೆ ಒತ್ತಾಯಿಸಿ ಧರಣಿ

ಬೆಂಗಳೂರು ಹೊರವಲಯದಲ್ಲಿರುವ ರೆವಿನ್ಯೂ ನಿವೇಶನಗಳ ಮೇಲೆ ಸರ್ಕಾರ ಚದುರಗಜವೊಂದಕ್ಕೆ ನೂರು ರೂ.ನಂತೆ ಏರಿಸಿದ್ದು ಸಾವಿರಾರು ಬಡ ನಿವೇಶನ ದಾರರು ಸಂಕಷ್ಟಕ್ಕೆ ಸಿಲುಕಿದ್ದು, ಈ ಅವೈಜ್ಞಾನಿಕ ಶುಲ್ಕ ಕಡಿತ ಗೊಳಿಸುವಂತೆ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ನೇತೃತ್ವದಲ್ಲಿ ನೂರಾರು ಜನ ಮೇ 28ರಂದು ಕೆ.ಆರ್. ವೃತ್ತದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು.

ಕಳೆದ ನಾಲ್ಕು ತಿಂಗಳಿಂದ ಡಿ.ವೈ.ಎಫ್.ಐ. ಸತತ ಹೋರಾಟ ನಡೆಸುತಿದ್ದು ಇದರ ಭಾಗವಾಗಿ ರಾಜ್ಯ ಬಂದಿಖಾನೆ ಸಚಿವರು 30-40 ಅಳತೆಯ ನಿವೇಶನಗಳ ಪಟ್ಟಿ ಮಾಡಿ ಕೂಡಲೇ ಕ್ರಮಕೈಗೊಳ್ಳುವಂತೆ ತಿಳಿಸಿದರು. ಇದುವರೆಗೂ ಯಾವ ಪ್ರಯೋಜನವೂ ಆಗಿಲ್ಲವೆಂದ ಡಿ.ವೈ.ಎಫ್.ಐ. ಜಿಲ್ಲಾಧ್ಯಕ್ಷ ಗೋಪಾಲಕೃಷ್ಣ ಸರ್ಕಾರದ ಹಾಗೂ ಅಧಿಕಾರಿಗಳ ನಿಷ್ಕ್ರಿಯತೆಯನ್ನು ಖಂಡಿಸಿದರು.

ಪ್ರತಿಭಟನಾಕಾರರ ಬಳಿ ಬಂದು ಮನವಿ ಸ್ವೀಕರಿಸಿದ ಬಂದಿಖಾನೆ ಸಚಿವರು ಜೂನ್ 6ರಂದು ಸಂಘಟನೆಯ ಮುಖಂಡರನ್ನು ಮಾತುಕತೆಗೆ ಆಹ್ವಾನಿಸಿದರು. ಸಮಸ್ಯೆ ಬಗೆ ಹರಿಸವುದಾಗಿ ತಿಳಿಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಲಕ್ಷ್ಮಣ್ ಕುಮಾರ್ ಹಾಗೂ ರವಿಚಂದ್ರನ್ ಮಾತನಾಡಿದರು.

ಪ್ರತಿಭಟನೆಯ ನೇತೃತ್ವವನ್ನು ವರ್ತೂರು ಪ್ರದೇಶದ ಜಯರಾಮ್, ರಮೇಶ್, ರಾಮಚಂದ್ರ, ಚೆಲುವರಾಜ್, ಬೊಮ್ಮನಹಳ್ಳಿ ಪ್ರದೇಶದ ರಾಘವೇಂದ್ರ ದಯನಾಯ್ಕ, ವಸಂತಕುಮಾರ್ ಹಾಗೂ ದಾಸರಹಳ್ಳಿಯ ಟಿ.ಎಂ. ರಾಮಕೃಷ್ಣ ಮುಂತಾದವರು ವಹಿಸಿದ್ದರು.

ಮಾಲಿಕಯ್ಯ ಗುತ್ತೇದಾರರನ್ನು ಸಂಪುಟದಿಂದ ಕೈ ಬಿಡಲು ಸಿಪಿಐ(ಎಂ) ಆಗ್ರಹ

ರಾಜ್ಯದ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಖಾತೆ ಸಚಿವ ಮಾಲಿಕಯ್ಯ ಗುತ್ತೇದಾರ್ ತನ್ನ ಸಹಚರರೊಂದಿಗೆ 12 ಕೊಲೆ ಪ್ರಕರಣಗಳಲ್ಲಿ ಭಾಗಿಯಾಗಿರುವುದರಿಂದ ಕೂಡಲೇ ಮುಖ್ಯಮಂತ್ರಿಗಳು ಅವರನ್ನು ಸಚಿವ ಸಂಪುಟದಿಂದ ಕೈ ಬಿಡುವಂತೆ ಸಿಪಿಐ(ಎಂ) ರಾಜ್ಯ ಸಮಿತಿ ಒತ್ತಾಯಿಸಿದೆ.

ಅವರ ಮೇಲಿನ ಆರೋಪ ಸಾಬೀತಿಗೆ ಸಾಕಷ್ಟು ಸಾಕ್ಷ್ಯಗಳಿರುವುದಾಗಿ ತಿಳಿಸಿರುವ ಮಹಾರಾಷ್ಟ್ರ ಪೋಲೀಸರ ಆರೋಪ ತುಂಬಾ ಗಂಭೀರವಾಗಿದ್ದು ಈ ಕುರಿತು ನಿಷ್ಪಕ್ಷಪಾತ ತನಿಖೆ ನಡೆಯಬೇಕಾದರೆ ಸಚಿವ ಸ್ಥಾನದಲ್ಲಿ ಮುಂದುವರೆಯುವುದು ತರವಲ್ಲ ಎಂದಿರುವ ಸಿಪಿಐ(ಎಂ) ರಾಜ್ಯ ಸಮಿತಿ ಈಗಲಾದರೂ ಸಂಪುಟದಿಂದ ಕೈಬಿಟ್ಟು ಮುಖ್ಯಮಂತ್ರಿಗಳು ನೈತಿಕತೆಯನ್ನು ಎತ್ತಿಹಿಡಿಯಬೇಕೆಂದು ಒತ್ತಾಯಿಸಿದೆ.

ಡಿವೈಎಫ್‌ಐ ತಾಲ್ಲೂಕು ಸಮಾವೇಶ

ರಾಯಚೂರು ತಾಲ್ಲೂಕು ಡಿವೈಎಫ್‌ಐ ಸಮಾವೇಶವು ಮೇ 15 ರಂದು ಯಶಸ್ವಿಯಾಗಿ ನಡೆಯಿತು. ಸಮಾವೇಶವು ತಾಲೂಕಿನ ಹಲವು ಸಮಸ್ಯೆಗಳ ಬಗ್ಗೆ ಚರ್ಚಿಸಿ ಹಲವು ನಿರ್ಣಯಗಳನ್ನು ಕೈಗೊಂಡಿತು.

ನೂತನ ಸಮಿತಿ: ಅಧ್ಯಕ್ಷರು: ವಿ.ಹನುಮಂತು, ಉಪಾಧ್ಯಕ್ಷರು: ಆರ್.ಬಣದೇವ, ಕಾರ್ಯದರ್ಶಿ: ಸಿದ್ದಲಿಂಗಯ್ಯ, ಸಹ ಕಾರ್ಯದರ್ಶಿ: ರಾಮನಗೌಡ ಮಟನವಹಾಳ ಮತ್ತು ಖಜಾಂಚಿ -ಎಸ್.ರಾಮಣ್ಣ ಹಾಗೂ ಎಲ್ಲಪ್ಪ. ಖಾಜಾವಲಿ, ಗೋಪಾಲ, ಸಭಾವಲಿ, ಗೋಪಿ ಹಾಗೂ ಐಯೋಳಪ್ಪ ಸದಸ್ಯರುಗಳಾಗಿ ಆಯ್ಕೆಗೊಂಡರು

ಕೇಂದ್ರದ ಜನವಿರೋಧಿ ಮುಂಗಡ ಪತ್ರ - ಸಿಐಟಿಯು

ಕೇಂದ್ರದ ಹಣಕಾಸು ಮಂತ್ರಿ ಯಶವಂತ ಸಿನ್ಹರ ಮುಂಗಡ ಪತ್ರ ದೇಶದ ಶ್ರಮಿಕ ವರ್ಗ, ಬಡಜನತೆ ಹಾಗೂ ಬಿಜೆಪಿಗೆ ಬೆಂಬಲ ನೀಡಿದ ಮಧ್ಯಮ ವರ್ಗಕ್ಕೂ ಪ್ರತಿಕೂಲವಾಗಿದೆ ಎಂದಿರುವ ಸಿಐಟಿಯು ಆಯ-ವ್ಯಯವನ್ನು ಬಲವಾಗಿ ಖಂಡಿಸಿದೆ.

ಕ್ಷುಲ್ಲಕ ಕಾರಣಕ್ಕೆ ಪೆಟ್ರೋಲ್ ಬೆಲೆ ಏರಿಸಿರುವುದು ವಿಪರ್ಯಾಸ ಎಂದಿರುವ ರಾಜ್ಯ ಸಮಿತಿ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೆಟ್ರೋಲ್ ಬೆಲೆ ಕಡಿಮೆ ಇದ್ದು ವಿದೇಶಿ ವಿನಿಮಯ ನಿಧಿಯಲ್ಲಿ 10 ಸಾವಿರ ಕೋಟಿ ಉಳಿತಾಯವಿರುವ ಪರಿಸ್ಥಿತಿಯಲ್ಲಿ ಬೆಲೆ ಏರಿಸಿರುವುದು ಬೆಲೆ ಏರಿಕೆಗೆ ನಾಂದಿ ಹಾಡಿದೆ.

ಪರಮಾಣು ಪರೀಕ್ಷಣೆ : ಇನ್ನಷ್ಟು ವಿಜ್ಞಾನಿಗಳ ಪ್ರತಿಭಟನೆ

"ಪರಮಾಣು ಅಸ್ತ್ರ ದೇಶದ ಬಲ ಹೆಚ್ಚಿಸುವುದಿಲ್ಲ"



ಮುಂಬೈಯ ಪ್ರತಿಷ್ಠಿತ ವೈಜ್ಞಾನಿಕ ಸಂಶೋಧನಾ ಸಂಸ್ಥೆ ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ನ 50ಕ್ಕೂ ಹೆಚ್ಚು ವಿಜ್ಞಾನಿಗಳು ಒಂದು ಬಲವಾದ ಹೇಳಿಕೆ ನೀಡಿ ಬಿ.ಜೆ.ಪಿ. ನೇತೃತ್ವದ ಸರಕಾರ ಇತ್ತೀಚೆಗೆ ನಡೆಸಿದ ಪರಮಾಣು ಪರೀಕ್ಷಣೆಗಳನ್ನು ವಿರೋಧಿಸುತ್ತಾ ಪರಮಾಣು ಅಸ್ತ್ರಗಳು ದೇಶವನ್ನು ಬಲಿಷ್ಟಗೊಳಿಸುತ್ತವೆ ಎಂಬ ತರ್ಕವನ್ನು ಪ್ರಶ್ನಿಸಿದ್ದಾರೆ.

ಈ ಪರೀಕ್ಷಣೆಗಳ ಬಗ್ಗೆ 'ವಿಸ್ಮಯ, ಆಘಾತ ಹಾಗೂ ಆತಂಕ' ವ್ಯಕ್ತಪಡಿಸಿರುವ ಈ ವಿಜ್ಞಾನಿಗಳು, ಭಾರತದ ಸಾಮರ್ಥ್ಯ ಜಗಜ್ಜಾಹೀರಾಗಿದ್ದರೂ, ತಾನೇ ಮಾದರಿಯಾಗಿದ್ದ, ವಿಪರೀತ ಉದ್ರೇಕಕಾರಿ ಸ್ಥಿತಿ ಏರ್ಪಡದಿದ್ದರೆ ಭಾರತ ಜಾಗತಿಕ ನಿಶ್ಶಸ್ತ್ರೀಕರಣಕ್ಕೆ ಪ್ರಯತ್ನಿಸುತ್ತದೆ ಎಂಬ ನಿರೀಕ್ಷೆ ಕುಸಿಯುವ ಬಗ್ಗೆ ಈ ವಿಜ್ಞಾನಿಗಳು ಖೇದ ವ್ಯಕ್ತಪಡಿಸಿದ್ದಾರೆ.

"ನಮ್ಮ ಪರಮಾಣು ಪರೀಕ್ಷಣೆಗಳ ಸಾಧನೆಗಳಿಗೆ ಸಂತೋಷ ಪಡುವ ಮೊದಲು ಹಲವು ಮಹತ್ವಪೂರ್ಣ ಆಂತರಿಕ ವಿಷಯಗಳಲ್ಲಿ ನಮ್ಮ ಸೀಮಿತ ಸಾಧನೆಗಳ ಬಗ್ಗೆ ನಾವು ಯೋಚಿಸಬೇಕು. ನಾವು ಈಗಲೂ ಅತೀ ಕಮ್ಮಿ ಅಭಿವೃದ್ಧಿ ಹೊಂದಿದ ದೇಶಗಳ ಪಟ್ಟಿಯಲ್ಲಿ ಇದ್ದೇವೆ. ಅತ್ಯಂತ ಕಮ್ಮಿ ತಾಲಾದಾಯದ ದೇಶಗಳಲ್ಲಿ ನಾವೊಂದು. ನಮ್ಮ ಅರ್ಧದಷ್ಟು ಜನಸಂಖ್ಯೆ ಅನಕ್ಷರಸ್ಥರು. ನಮ್ಮ ಶಿಕ್ಷಣ ವ್ಯವಸ್ಥೆ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಆರೋಗ್ಯ ವ್ಯವಸ್ಥೆಯೆಂಬುದು ಅಸ್ತಿತ್ವದಲ್ಲೇ ಇಲ್ಲ. ನಗರ ಪ್ರದೇಶಗಳ ಆಸ್ಪತ್ರೆಗಳಲ್ಲೂ ಮೂಲಭೂತ ಸೌಕರ್ಯಗಳಿಲ್ಲ. ಗ್ರಾಮೀಣ ಪ್ರದೇಶಗಳಲ್ಲಂತೂ ಅಸಹನೀಯ. ಕೋಟ್ಯಾಂತರ ಜನ ಕೊಳಗೇರಿಗಳಲ್ಲಿ ಮಾನವ ಜೀವಿಗೆ ತಕ್ಕುದಲ್ಲದ ಪರಿಸ್ಥಿತಿಗಳಲ್ಲಿ ಬದುಕಿದ್ದಾರೆ. ಈಗಲೂ ಬಾಲಶ್ರಮ, ಹೆಣ್ಣು ಭ್ರೂಣ ಹತ್ಯೆ ನಡೆದಿರುವ ಒಂದು ದೇಶ ನಮ್ಮದು. ಈ ಪಟ್ಟಿ ಅನಂತ " ಎಂದು ಮುಂದುವರೆದು ವಿಜ್ಞಾನಿಗಳ ಹೇಳಿಕೆ ಅಭಿಪ್ರಾಯಪಟ್ಟಿದೆ.

ದೇಶದ ರಕ್ಷಣೆಯನ್ನು ಕಟ್ಟುವ ಬೇರೆ ಉತ್ತಮವಾದ ದಾರಿಗಳಿವೆ ಎಂದು ಒತ್ತಿ ಹೇಳಿರುವ ವಿಜ್ಞಾನಿಗಳು "ಅತ್ಯುತ್ತಮ ದಾರಿ ಯೆಂದರೆ ನಮ್ಮ ನೆರೆದೇಶಗಳೊಂದಿಗೆ ಉತ್ತಮ ಸಂಬಂಧಗಳನ್ನು ಬೆಳೆಸುವುದು" ಎಂದಿದ್ದಾರೆ. "ನೆರೆದೇಶಗಳೊಂದಿಗೆ ಶಾಂತಿ ಅಸಾಧ್ಯ ಎಂಬ ಭಾವನೆಯೊಂದಿಗೆ ನಾವು ಆರಂಭಿಸಬಾರದು. ಇದು ನಿಜವಾಗಿ ದ್ದರೂ, ಪರಮಾಣು ಪರೀಕ್ಷಣೆಗೆ ತಕ್ಷಣ ಕಾರಣವೇ ನೆಂಬುದು ಇನ್ನೂ ಸ್ಪಷ್ಟವಾಗಿಲ್ಲ. ತನ್ನ 24 ವರ್ಷಗಳ ಆತ್ಮಸಂಯಮವನ್ನು ಮುರಿಯುವಂತಹ ದೊಡ್ಡ ಪ್ರಮಾಣದ ಬೆದರಿಕೆಯೇನು ಬಂತು? ಎಂದು ಈ ವಿಜ್ಞಾನಿಗಳು ಪ್ರಶ್ನಿಸಿದ್ದಾರೆ. ಈಗಿನ ಸನ್ನಿವೇಶದಲ್ಲಿ ಪ್ರಯೋಜನ ಎನ್ನುವುದು ಶಸ್ತ್ರಾಸ್ತ್ರ ಮಾರಾಟ ಮಾಡುವ ದೇಶಗಳಿಗೆ ಮಾತ್ರ. ಯಾವುದೇ ದೇಶದ ಅತ್ಯುತ್ತಮ ರಕ್ಷಣಾ ವ್ಯವಸ್ಥೆಯೆಂದರೆ ಹಸಿವು, ಬಡತನ, ಅನಾರೋಗ್ಯ, ಅನಕ್ಷರತೆಯಿಂದ ಸ್ವಾತಂತ್ರ್ಯ ಹಾಗೂ ನರೆ ದೇಶಗಳೊಂದಿಗೆ ಸಾಮರಸ್ಯ ಎಂದು ಈ ವಿಜ್ಞಾನಿಗಳು ಹೇಳಿದ್ದಾರೆ.

ಇಂದಿನ ಪರಮಾಣು ಬಾಂಬುಗಳು ಹಿರೋಶಿಮಾ, ನಾಗಸಾಕಿಗಳನ್ನು ಧ್ವಂಸಮಾಡಿದ ಅಣು ಬಾಂಬುಗಳಿಗಿಂತ ಬಹಳಷ್ಟು ವಿಧ್ವಂಸಕಾರಿ ಎಂದು ನೆನಪಿಸಿರುವ ಈ ವಿಜ್ಞಾನಿಗಳು "ನಾವು ಸಂಕುಚಿತ ಭಾವನೆಗಳಿಂದ ವಿಚಲಿತಗೊಳ್ಳಬಾರದು. ಹಿಂದೆ ಲಂಗುಲಗಾಮಿಲ್ಲದ ಸಂಕುಚಿತ ದೃಷ್ಟಿಕೋಣ ಭಾರೀ ಅನಾಹುತಗಳನ್ನೇ ಮಾಡಿದೆ. ನಾವು ಶಾಂತಿ ಮತ್ತು ಪ್ರಗತಿಯಲ್ಲಿ ನಂಬಿಕೆಯಿರುವವರೆಲ್ಲಾ ಈಗಲೇ ನಮ್ಮ ನಿಲುವನ್ನು ವಿಮರ್ಶಿಸಿಕೊಳ್ಳಬೇಕು" ಎಂದು ಮನವಿ ಮಾಡಿದ್ದಾರೆ.

ಒಂದು ಸಮಂಜಸ ನೀತಿ ರೂಪಿಸಲು ಇನ್ನೂ ಆಗಿಲ್ಲವೇಕೆ?

ಇನ್ನೂ ಸುಮಾರು 95 ವೈಜ್ಞಾನಿಕ - ತಂತ್ರಜ್ಞಾನ ರಂಗದಲ್ಲಿ ದುಡಿಯುತ್ತಿರುವವರು ಭಾರತ ಸರ್ಕಾರಕ್ಕೆ ಒಂದು ಪತ್ರ ಬರೆದಿದ್ದಾರೆ. ಭಾರತೀಯ ವಿಜ್ಞಾನ ಸಂಸ್ಥೆ, ರಾಮನ್ ಸಂಶೋಧನಾ ಸಂಸ್ಥೆ, ಭಾರತ ಖಗೋಳ ಭೌತಶಾಸ್ತ್ರ ಸಂಸ್ಥೆ, ಮತ್ತು ಕೆಲವು ಐ.ಐ.ಟಿ.ಗಳ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಸಂಶೋಧಕರು ಬರೆದಿರುವ ಈ ಪತ್ರ ಬಹುಶಃ ಪರೀಕ್ಷಣೆ ತಾನಾಗಿಯೇ ಕೆಟ್ಟದೇನೂ ಅಲ್ಲ, ಆದರೆ ಅದರ ನಂತರದ ನೀತಿ-ನಿಲುವಿನಲ್ಲಿ ಒಂದು ಸಾಮರಸ್ಯ ಇದ್ದಂತಿಲ್ಲ ಎಂದು ಖೇದ ವ್ಯಕ್ತಪಡಿಸಿದ್ದಾರೆ, ತಾನು ಮೊದಲು ಪರಮಾಣು ಅಸ್ತ್ರವನ್ನು ಬಳಸುವುದಿಲ್ಲ ಎಂದು ಏಕಪಕ್ಷೀಯವಾಗಿ ಭಾರತ ಘೋಷಿಸಬೇಕು, ಸಿ.ಟಿ.ಬಿ.ಟಿ. ಸಂಧಿಗಳಿಗೆ ಸಹಿ ಹಾಕಲು ಆತುರ ತೋರಬಾರದು ಎಂದಿದ್ದಾರೆ.

ಪರಮಾಣು ಶಸ್ತ್ರಗಳು ಮಾನವಕುಲಕ್ಕೊಂದು ಬೆದರಿಕೆ, ಆದರೆ ಪರಮಾಣು ನಿಶ್ಶಸ್ತ್ರೀಕರಣ ಏಕಪಕ್ಷೀಯವಾಗಲು ಸಾಧ್ಯವಿಲ್ಲ ಎಂಬುದೂ ತಮಗೆ ತಿಳಿದಿದೆ ಎಂದಿರುವ ಈ ವಿಜ್ಞಾನಿಗಳು 10 ಸಾವಿರ ಪರಮಾಣು ಶಸ್ತ್ರಾಸ್ತ್ರಗಳಗಳಿರುವ ಅಮೇರಿಕಾದ ಸೋಗಲಾಡಿತನವನ್ನು ಟೀಕಿಸಿದ್ದಾರೆ. ಆದರೂ "ಯಾವುದೇ ರೀತಿಯ ರಾಷ್ಟ್ರಾಂಧ ದುರಭಿಮಾನ ಅಥವಾ ವಿಪರೀತ ಆತ್ಮತೃಪ್ತಿಯ ಪ್ರದರ್ಶನ, ಅದೇ ರೀತಿ ಆಗಾಗ ನಮ್ಮ ಮುಖಂಡರು ನೀಡುತ್ತಿರುವ ಯುದ್ಧಕೋರ ಹೇಳಿಕೆಗಳು ತಿರುಗುಬಾಣವಾದೀತು ಎಂದು ನಮ್ಮ ನಂಬಿಕೆ. ಜಗತ್ತನ್ನು ಚಕಿತಗೊಳಿಸಿದ ಮೇಲೆ ಈಗ ನಾವು ಪ್ರೌಢತೆ, ಸಂಯಮ ತೋರಿಸಬೇಕು. ದೊಡ್ಡ ಗಂಟಲಿನ ರಾಷ್ಟ್ರೀಯವಾದ ಹಾಗೂ ನಮ್ಮ ಶತ್ರುಗಳ ಮೇಲೆ ವಿಷಕಾರಕ ಹೇಳಿಕೆಗಳು ಭಾರತ ಒಂದು ಪ್ರಾಬಲ್ಯ ಮೆರೆಸಬಯಸುವ ಮಿಲಿಟರಿ ಶಾಹಿಯೆಂಬ ಚಿತ್ರ ನಿರ್ಮಿಸುತ್ತದಷ್ಟೆ" ಎಂದು ಈ ವಿಜ್ಞಾನಿಗಳು ಹೇಳಿದ್ದಾರೆ.

"ನೆರೆದೇಶಗಳ ಬಗ್ಗೆ ಉದ್ರೇಕಕಾರಿ ಹೇಳಿಕೆಗಳಿಂದ ತದ್ವಿರುದ್ಧ ಪರಿಣಾಮ ಗಳಾಗಬಹುದು. ಬಹುಶಃ ಈ ಬಾರಿ ಅಪಾಯಕಾರಿಯೂ ಆಗಬಹುದು. ಸರಕಾರ ಅವಕಾಶವನ್ನು ರಚನಾತ್ಮಕ ಹಾಗೂ ಉತ್ಪಾದಕ ರೀತಿಯಲ್ಲಿ ಬಳಸಿ ದೇಶದ ಅಭಿವೃದ್ಧಿಗೂ ನಿಶ್ಶಸ್ತ್ರೀಕರಣದ ಉದ್ದೇಶ ಸಾಧನೆಗೂ ನೆರವಾಗುವಂತಾಗುತ್ತದೆ ಎಂದು ನಮ್ಮ ನಿರೀಕ್ಷೆ. ಎಲ್ಲಕ್ಕೂ ಮಿಗಿಲಾಗಿ, ಸರಕಾರದ ಧೋರಣೆ ಯನ್ನು ನಿಸ್ಸಂಧಿಗ್ಧವಾಗಿ, ಸ್ಪಷ್ಟವಾಗಿ ಮುಂದಿಡಬೇಕು. ಹಾಗೂ ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು" ಎಂದು ತಮ್ಮ ಪತ್ರದ ಕೊನೆಯಲ್ಲಿ ಈ ವಿಜ್ಞಾನಿಗಳು ಆಗ್ರಹಿಸಿದ್ದಾರೆ.

"ಭಾರತೀಯ ಬಾಂಬು : ರಕ್ಷಕವೋ, ಭಕ್ಷಕವೋ?

ಇದು ಬೆಂಗಳೂರಿನಲ್ಲಿ ಮೇ 30 ರಂದು ನಡೆದ ಒಂದು ಬಹಿರಂಗ ಚರ್ಚೆಯ ವಿಷಯವಾಗಿತ್ತು. "ಸಮಾಜಕ್ಕಾಗಿ ವಿಜ್ಞಾನ" ಎಂಬ ಸಂಸ್ಥೆಯ ಬೆಂಗಳೂರು ಘಟಕ ಏರ್ಪಡಿಸಿದ್ದ ಈ ಚರ್ಚೆಯಲ್ಲಿ ನಗರದ ಹಲವು ವಿಜ್ಞಾನಿಗಳು, ತಂತ್ರಜ್ಞರು ಮತ್ತು ಇತರ ಆಸಕ್ತರು ಭಾಗವಹಿಸಿದ್ದರು.

ಭಾರತ ಪಾಕಿಸ್ತಾನ ಅಣು ಸಾಧನಗಳನ್ನು ಸಿಡಿಸಿದ ನಂತರ ಕೊರಿಯಾ, ದಕ್ಷಿಣ ಆಫ್ರಿಕಾ, ಇಸ್ರೇಲ್ ಹಿಂದುಳಿಯುತ್ತವೆಯೇ? ನಾವು ಒಂದು ದೇಶವಾಗಿ ಇದನ್ನು ಮಹಾ ವೈಜ್ಞಾನಿಕ ಸಾಧನೆಯೆಂದು ಹೇಳಿಕೊಂಡಿರುವುದರ ಬಗ್ಗೆ ಹೆಮ್ಮೆ ಪಡಬಹುದೇ? ರಾಷ್ಟ್ರೀಯ ಭದ್ರತೆಯ ಪ್ರಶ್ನೆಯನ್ನು ರಾಜಕೀಯ ಆಕಾಂಕ್ಷೆಯನ್ನು ಮರೆಮಾಚುವ ಪರದೆಯಾಗಿ ಬಳಸಲಾಗುತ್ತಿದೆಯೇ? - ಇವು ಈ ಚರ್ಚೆಯಲ್ಲಿ ಎತ್ತಿದ ಕೆಲವು ಪ್ರಶ್ನೆಗಳು.


'ಪರಮಾಣು ತಡೆ' ಎಂಬ ಪ್ರಧಾನಿಗಳ ಮಾತನ್ನೇ ಪ್ರಶ್ನಿಸಿದ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಪ್ರೊ.ಎಸ್. ಸೆನ್‌ಗುಪ್ತಾ 'ನಾವು ವಿಜ್ಞಾನಿಗಳು ದೇಶದ ವಿಷಯದಲ್ಲಿ ಬಹಳಷ್ಟು ವಿಫಲರಾಗಿದ್ದೇವೆ. ಪರಮಾಣು ಶಕ್ತಿ ಮತ್ತು ಪರಮಾಣು ಬಾಂಬಿನ ನಡುವಿನ ವ್ಯತ್ಯಾಸವನ್ನು ನಾವು ತಿಳಿಯಬೇಕಾದ ಸಮಯವಿದು. ಅಣು ಶಕ್ತಿ, ಸಾಫ್ಟ್‌ವೇರ್, ಹಾರ್ಡ್‌ವೇರ್ ಇತ್ಯಾದಿ ಹಲವು ವೈಜ್ಞಾನಿಕ-ತಂತ್ರಜ್ಞಾನದ ರಂಗದಲ್ಲೂ ನಾವು ಅಪಾರ ಸಾಧನೆ ಮಾಡಿದ್ದೇವೆ. ಆದರೆ ಅವಕ್ಕೆಲ್ಲಾ 'ಜೈ ವಿಜ್ಞಾನ್' ಎಂದಿರಲಿಲ್ಲ! ಎಂದು ವ್ಯಂಗ್ಯವಾಡಿದರು.

'ಜೈವಿಜ್ಞಾನ' ಎಂದು ಹೇಳಿದರೂ ನಮ್ಮ ಕಾಲೇಜು ಪ್ರಯೋಗಾಲಯಗಳಲ್ಲಿ ವಿಜ್ಞಾನದ ಸ್ಥಿತಿ ಈಗ ಶೋಚನೀಯವಾಗಿದೆ ಎಂದು ಅವರು ಹೇಳಿದರು. ಸಂಶೋಧನಾ ನಿಧಿಯಲ್ಲಿ 65% ರಕ್ಷಣಾ ಸಂಶೋಧನೆ ಅಭಿವೃದ್ಧಿ ಸಂಘಟನೆ (DRDO) ಗೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO - ಇಸ್ರೋ)ಗೆ ಹೋಗುತ್ತದೆ. 11% ಮಾತ್ರ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ(CSIR)ಗೆ ಹೋಗುತ್ತದೆ ಎಂದು ಅವರು ನೆನಪಿಸಿದರು.

ಒಂದು ದೇಶಕ್ಕೆ ಗೌರವ ಅದರ ಬಳಿ ಎಷ್ಟು ಬಾಂಬುಗಳಿವೆ ಎಂಬ ಆಧಾರದಲ್ಲಲ್ಲ. ಅದು ಚಲಾಯಿಸಬಲ್ಲ ಆರ್ಥಿಕ ಪ್ರಭಾವದ ಮೇಲೆ ಎಂದರು ಗಾಂಧೀ ಶಾಂತಿ ಸಮಾಜದ ದೊರೆಸ್ವಾಮಿಯವರು. ಬೆಂಗಳೂರು ವಿಶ್ವವಿದ್ಯಾಲಯದ ರಾಜಕೀಯ ವಿಜ್ಞಾನದ ಪ್ರಾಧ್ಯಾಪಕ ಜಿ.ಜೀವನ್‌ಕುಮಾರ್ "ಪರಮಾಣು ತಡೆ' ಎಂಬ ಸಿದ್ಧಾಂತವನ್ನೇ ಖಂಡಿಸಿದರು.

ನಮ್ಮ ರಾಜಕೀಯ ಮುಖಂಡರಿಗೆ ಪರಮಾಣು ಪ್ರಶ್ನೆಯನ್ನು ಎದುರಿಸುವ ಪ್ರೌಢತೆಯಿದೆಯೇ ಎಂಬುದು ಈ ಚರ್ಚೆಯಲ್ಲಿ ಭಾಗವಹಿಸಿದ್ದ ಬಹಳ ಮುಂದಿಗೆ ಇದ್ದ ಸಂದೇಹ. 'ಪರಮಾಣು ಅಸ್ತ್ರವನ್ನು ಧಾರ್ಮಿಕ ಹಕ್ಕುಗಳ ಸಾಧನವಾಗಿ ಬಳಸಲಾಗುತ್ತದೆ" ಎಂದು ಮೇ 19 ರಂದು ಪರಮಾಣು ಅಸ್ತ್ರ-ವಿರೋಧಿ ಸಭೆಯಲ್ಲಿ ಕೆಲವರು ನಡೆಸಿಗ ಧಾಳಿಗಳನ್ನು ಖಂಡಿಸುತ್ತಾ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ. ಸಂಜಯ್ ಬಿಸ್ವಾಸ್ ಹೇಳಿದರು.

ಅಣು ಸ್ಫೋಟ ವ್ಯಂಗ್ಯಚಿತ್ರಕಾರರು ಕಂಡಂತೆ



ಅಬು ಅಬ್ರಹಾಂ




'ದಿ ಹಿಂದು'ನಲ್ಲಿ ಸುರೇಂದ್ರನ್



ಚೀಣೀ ವ್ಯಂಗ್ಯಕಾರನ ದೃಷ್ಟಿಯಲ್ಲಿ ಕೃಪೆ: ಚೈನಾ ಡೈಲಿ

"ಚೀಣೀ ಬೆದರಿಕೆ" ಎಂಬ ಪರದೆ

ಟೈಂಸ್ ಆಫ್ ಇಂಡಿಯಾದಲ್ಲಿ ಪೊನ್ನಪ್ಪ



KRNM/BGS-405 MAG(2) PRBDECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27